सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮಾನಸಿಕ ಆರೋಗ್ಯ ಅಧಿನಿಯಮ, 1987

(1987 ರ ಅಧಿನಿಯಮ ಸಂಖ್ಯೆ 14)

[ಮಾರ್ಚ್ 30, 2003 ರಂದು ಜಾರಿಯಲ್ಲಿದ್ದಂತೆ]

# THE MENTAL HEALTH ACT, 1987

(Act No. 14 of 1987)

[As on 30th March, 2003]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
2003

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮಾನಸಿಕ ಆರೋಗ್ಯ ಅಧಿನಿಯಮ, 1987

(1987 ರ ಅಧಿನಿಯಮ ಸಂಖ್ಯೆ 14)

[ಮಾರ್ಚ್ 30, 2003 ರಂದು ಜಾರಿಯಲ್ಲಿದ್ದಂತೆ]

# THE MENTAL HEALTH ACT, 1987

(Act No. 14 of 1987)

[As on 30th March, 2003]

ಮುನ್ನುಡಿ

30-3-2003 ರಂದು ಜಾರಿಯಲ್ಲಿದ್ದಂತೆ ಮಾನಸಿಕ ಆರೋಗ್ಯ ಅಧಿನಿಯಮ, 1987 ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 30-3-2003 ರ ಭಾರತ ರಾಜಪತ್ರದ IX ನೇ ಭಾಗದ, 1 ನೇ ವಿಭಾಗದ, 23 ನೇ ಸಂಪುಟದ, 1 ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 43 ರಿಂದ 73 ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 ರ 2 ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಟಿ.ಕೆ. ವಿಶ್ವನಾಥನ್
ಕಾರ್ಯದರ್ಶಿ,
ಭಾರತ ಸರ್ಕಾರ.

## PREFACE

This edition of the Mental Health Act, 1987 as on the 30-3-2003 contains the authoritative text of that Act in Kannada which was published in the Gazette of India Extraordinary, Part IX, Section 1, No. 1, Vol. 24 dated 30-3-2003 on pages 43 to 73.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

**T.K. Viswanathan**
Secretary,
Government of India.

# ಮಾನಸಿಕ ಆರೋಗ್ಯ ಅಧಿನಿಯಮ, 1987

ವಿಷಯಾನುಕ್ರಮಣಿಕೆ

## ಅಧ್ಯಾಯ - I

## ಪ್ರಾರಂಭಿಕ


| ಪ್ರಕರಣಗಳು | ಪುಟ ಸಂಖ್ಯೆ |
|---|---|
| 1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. ಪರಿಭಾಷೆಗಳು | 1 |


## ಅಧ್ಯಾಯ - II

### ಮಾನಸಿಕ ಆರೋಗ್ಯ ಪ್ರಾಧಿಕಾರಗಳು


| | |
|---|---|
| 3. ಮಾನಸಿಕ ಆರೋಗ್ಯ ಸೇವೆಗಳಿಗಾಗಿ ಕೇಂದ್ರ ಪ್ರಾಧಿಕಾರ | 3 |
| 4. ಮಾನಸಿಕ ಆರೋಗ್ಯ ಸೇವೆಗಳಿಗಾಗಿ ರಾಜ್ಯ ಪ್ರಾಧಿಕಾರ | 3 |


## ಅಧ್ಯಾಯ - III

### ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳು


| | |
|---|---|
| 5. ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಸ್ಥಾಪನೆ ಅಥವಾ ಅವುಗಳ ನಿರ್ವಹಣೆ | 3 |
| 6. ಲೈಸೆನ್ಸಿನೊಂದಿಗೆ ಮಾತ್ರ ಮನೋರೋಗ ಆಸ್ಪತ್ರೆಗಳ ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗಳ ಸ್ಥಾಪನೆ ಅಥವಾ ನಿರ್ವಹಣೆ | 4 |
| 7. ಲೈಸೆನ್ಸಿಗಾಗಿ ಅರ್ಜಿ | 4 |
| 8. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ | 4 |
| 9. ಲೈಸೆನ್ಸಿನ ಅವಧಿ ಮತ್ತು ನವೀಕರಣ | 5 |
| 10. ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್‌ಹೋಮನ್ನು ನಿಯಮಿಸಬಹುದಾದ ಷರತ್ತುಗಳಿಗನುಸಾರವಾಗಿ ನಿರ್ವಹಿಸಿಕೊಂಡು ಬರುವುದು | 5 |
| 11. ಲೈಸೆನ್ಸಿನ ರದ್ದಿಯಾತಿ | 6 |
| 12. ಅಪೀಲು | 6 |
| 13. ಮನೋರೋಗ ಆಸ್ಪತ್ರೆಗಳ ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಪರಿಶೀಲನೆ ಮತ್ತು ರೋಗಿಗಳ ಸಂದರ್ಶನ | 6 |
| 14. ಹೊರ ರೋಗಿಗಳ ಚಿಕಿತ್ಸೆ | 7 |

## ಅಧ್ಯಾಯ - IV

## ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಪ್ರವೇಶ

ಮತ್ತು ಅಲ್ಲಿ ತಡೆಹಿಡಿದಿಡುವುದು

### ಭಾಗ - I

**ಸ್ವಇಚ್ಛೆಯ ಆಧಾರದ ಮೇಲೆ ಪ್ರವೇಶ**

15. ಸ್ವಇಚ್ಛಾ ರೋಗಿ ಎಂದು ಪ್ರವೇಶ ಪಡೆಯುವುದಕ್ಕಾಗಿ ಪ್ರಾಪ್ತ ವಯಸ್ಕನಿಂದ ಕೋರಿಕೆ 7

16. ಪ್ರತಿಪಾಲಿತನ ಪ್ರವೇಶಕ್ಕಾಗಿ ಪಾಲಕನಿಂದ ಕೋರಿಕೆ 7

17. ಸ್ವಇಚ್ಛಾ ರೋಗಿಗಳ ಪ್ರವೇಶ ಮತ್ತು ಅದಕ್ಕೆ ಸಂಬಂಧಿಸಿದಂತೆ ನಿಯಂತ್ರಣ 7

18. ಸ್ವಇಚ್ಛಾ ರೋಗಿಗಳ ಬಿಡುಗಡೆ 7

### ಭಾಗ - II

ವಿಶೇಷ ಸಂದರ್ಭಗಳಲ್ಲಿ ಪ್ರವೇಶ

19. ಕೆಲವು ವಿಶೇಷ ಸಂದರ್ಭಗಳಲ್ಲಿ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪ್ರವೇಶ 8

### ಭಾಗ - III

ಪ್ರವೇಶನ ಆದೇಶ

ಎ. ಅರ್ಜಿಗಳ ಮೇಲೆ ಪ್ರವೇಶನ ಆದೇಶಗಳು

20. ಪ್ರವೇಶನ ಆದೇಶಕ್ಕಾಗಿ ಅರ್ಜಿ 9

21. ವೈದ್ಯಕೀಯ ಪ್ರಮಾಣ ಪತ್ರಗಳ ನಮೂನೆ ಮತ್ತು ಅದರ ಒಳಾಂಶಗಳು 9

22. ಪ್ರವೇಶನ ಆದೇಶಕ್ಕಾಗಿನ ಅರ್ಜಿಯ ಮೇಲಿನ ಪ್ರಕ್ರಿಯೆ

*ಬಿ. ಮ್ಯಾಜಿಸ್ಟ್ರೇಟನ ಮುಂದೆ ಮಾನಸಿಕವಾಗಿ ಅಸ್ವಸ್ಥರಾಗಿರುವ* ***ವ್ಯಕ್ತಿಗಳನ್ನು ಹಾಜರುಪಡಿಸಿದ ಮೇಲೆ ಪ್ರವೇಶನ ಆದೇಶಗಳು*** *11*

23. ಮಾನಸಿಕ ಅಸ್ವಸ್ಥರಾಗಿರುವ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಪೊಲೀಸು ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು 11

24. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಹಾಜರುಪಡಿಸಿದ ಮೇಲೆ ಪ್ರಕ್ರಿಯೆ 11

25. ಮಾನಸಿಕ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಕ್ರೂರವಾಗಿ ನಡೆಸಿಕೊಂಡಿರುವ ಅಥವಾ ಸರಿಯಾದ ರಕ್ಷಣೆಯಲ್ಲಿ ಮತ್ತು ನಿಯಂತ್ರಣದಲ್ಲಿರದ ಸಂದರ್ಭದಲ್ಲಿ ಆದೇಶ 12

ಸಿ. ಮಾನಸಿಕವಾಗಿ ಅಸ್ವಸ್ಥರಾಗಿರುವ ಕೆಲವು ವ್ಯಕ್ತಿಗಳ ಪ್ರವೇಶ ಮತ್ತು ತಡೆಹಿಡಿದಿಡುವಿಕೆಗೆ ಸಂಬಂಧಿಸಿದಂತೆ ಹೆಚ್ಚಿನ ಉಪಬಂಧಗಳು

26. ನ್ಯಾಯ ವಿಚಾರಣೆಯ ತರುವಾಯ ಒಳರೋಗಿಯಾಗಿ ಪ್ರವೇಶ 12

27. ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿಯ ಪ್ರವೇಶ ಮತ್ತು ಅವನ ತಡೆಹಿಡಿದಿಡುವಿಕೆ 13

28. ವೈದ್ಯಕೀಯ ಅಧಿಕಾರಿಯು ಕೊಟ್ಟ ವರದಿಯು ಇತ್ಯರ್ಥದಲ್ಲಿರುವಾಗ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ತಡೆಹಿಡಿದಿಟ್ಟುಕೊಳ್ಳುವುದು 13

29. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಸ್ಥಳಾಂತರಿಸುವುದು ಇತ್ಯರ್ಥದಲ್ಲಿರುವಾಗ ಅವನನ್ನು ತಡೆಹಿಡಿದಿಟ್ಟುಕೊಳ್ಳುವುದು 13

*ಡಿ. ಈ ಅಧ್ಯಾಯದ ಮೇರೆಗಿನ ಆದೇಶಗಳಿಗೆ ಸಂಬಂಧಪಟ್ಟ ಸಂಕೀರ್ಣ ಉಪಬಂಧಗಳು*

30. ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ವೈದ್ಯಕೀಯ ಪರೀಕ್ಷೆಯ ಕಾಲ ಮತ್ತು ರೀತಿ 13
31. ಪ್ರವೇಶನ ಆದೇಶದ ಅಧಿಕಾರ 14
32. ಪ್ರವೇಶನ ಆದೇಶದ ಪ್ರತಿಯನ್ನು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಕಳುಹಿಸತಕ್ಕುದು 14
33. ಪ್ರವೇಶನ ಆದೇಶದ ಪ್ರವೇಶವನ್ನು ನಿರ್ದೇಶಿಸಬಹುದಾದಂಥ ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮುಗಳ ಬಗ್ಗೆ ನಿರ್ಬಂಧ 14
34. ಆದೇಶ ಅಥವಾ ದಸ್ತಾವೇಜಿನ ತಿದ್ದುಪಡಿ 14
35. ಯಾರ ಅರ್ಜಿಯ ಮೇಲೆ ಪ್ರವೇಶನ ಆದೇಶಗಳನ್ನು ಮಾಡಲಾಗಿದೆಯೋ ಆ ವ್ಯಕ್ತಿಗಾಗಿ ಬದಲಿಯವನನ್ನು ನೇಮಕ ಮಾಡಲು ಅಧಿಕಾರ 15
36. ಕೆಲವು ಪ್ರಕರಣಗಳ ಮೇರೆಗೆ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮ ಅಧಿಕಾರಿಗಳು 15

## ಅಧ್ಯಾಯ - V

## ಮಾನಸಿಕವಾಗಿ ಅಸ್ವಸ್ಥರಾದ ವ್ಯಕ್ತಿಗಳ ಪರಿಶೀಲನೆ, ಬಿಡುಗಡೆ, ಗೈರುಹಾಜರಿಯ ರಜೆ ಮತ್ತು ಸ್ಥಳಾಂತರ

### ಭಾಗ - I

### ಪರಿಶೀಲನೆ

37. ಸಂದರ್ಶಕರ ನೇಮಕಾತಿ 16
38. ಸಂದರ್ಶಕರಿಂದ ಮಾಸಿಕ ಪರಿಶೀಲನೆ 16
39. ಮಾನಸಿಕವಾಗಿ ಅಸ್ವಸ್ಥರಾಗಿರುವ ಬಂದಿಗಳ ಪರಿಶೀಲನೆ 16

### ಭಾಗ - II

*ಬಿಡುಗಡೆ*

40. ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯಿಂದ ಬಿಡುಗಡೆ ಆದೇಶ 17
41. ಅರ್ಜಿಯನ್ನು ಮಾಡಿಕೊಂಡ ಮೇಲೆ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಬಿಡುಗಡೆ 17
42. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯುಕ್ತ ರಕ್ಷಣೆಗಾಗಿ ಸಂಬಂಧಿಕರ ಅಥವಾ ಸ್ನೇಹಿತರ ವಚನಬಂಧದ ಮೇಲೆ ಬಿಡುಗಡೆ ಆದೇಶ ಇತ್ಯಾದಿ 17
43. ವ್ಯಕ್ತಿಯ ಕೋರಿಕೆಯ ಮೇಲೆ ಅವನ ಬಿಡುಗಡೆ 17
44. ನ್ಯಾಯ ವಿಚಾರಣೆಯನ್ನು ಮಾಡಿದ ತರುವಾಯ ಸ್ವಸ್ಥಚಿತ್ತನಾಗಿರುವನೆಂದು ಕಂಡುಬಂದ ವ್ಯಕ್ತಿಯ ಬಿಡುಗಡೆ 18

### ಭಾಗ - III

### ಗೈರುಹಾಜರಿಯ ರಜೆ

45. ಗೈರುಹಾಜರಿಯ ರಜೆ 18
46. ಮ್ಯಾಜಿಸ್ಟ್ರೇಟನಿಂದ ಗೈರುಹಾಜರಿ ರಜೆಯ ಮಂಜೂರಾತಿ 19

## ಭಾಗ - IV

## ಸ್ಥಳಾಂತರಣ

47. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಒಂದು ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್ ಹೋಮ್‌ನಿಂದ ಯಾವುದೇ ಇತರ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗೆ ಸ್ಥಳಾಂತರಿಸುವುದು 19

48. ಕೆಲವು ಸಂದರ್ಭಗಳಲ್ಲಿ ಪ್ರವೇಶ ತಡೆಹಿಡಿದಿಡುವುದು ಮತ್ತು ಪುನಃ ಹಿಡಿಯುವುದು 19

49. ಮ್ಯಾಜಿಸ್ಟ್ರೇಟನ ಆದೇಶಗಳ ಮೇಲೆ ಅಪೀಲು 20

## ಅಧ್ಯಾಯ – VI

### ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಬಗ್ಗೆ ನ್ಯಾಯ ವಿಚಾರಣೆ, ಅವನ ಶಾರೀರಿಕ ಅಭಿರಕ್ಷೆ ಮತ್ತು ಅವನ ಸ್ವತ್ತಿನ ವ್ಯವಸ್ಥಾಪನೆ

50. ನ್ಯಾಯ ವಿಚಾರಣೆಗಾಗಿ ಅರ್ಜಿ 20

51. ನ್ಯಾಯ ವಿಚಾರಣೆಯ ತರುವಾಯ ಜಿಲ್ಲಾ ನ್ಯಾಯಾಲಯವು ಯಾವ ವಿವಾದಾಂಶಗಳ ಮೇಲೆ ನಿರ್ಣಯವನ್ನು ಕೊಡತಕ್ಕುದೋ ಆ ವಿವಾದಾಂಶಗಳು 20

52. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನನ್ನು ಮತ್ತು ಸ್ವತ್ತಿನ ವ್ಯವಸ್ಥಾಪಕನನ್ನು ನೇಮಕ ಮಾಡುವ ಬಗ್ಗೆ ಉಪಬಂಧ 21

53. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನ ನೇಮಕಾತಿ 21

54. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪನೆಗಾಗಿ ವ್ಯವಸ್ಥಾಪಕನ ನೇಮಕಾತಿ 21

55. ಕಲೆಕ್ಟರ್‌ನಿಂದ ವ್ಯವಸ್ಥಾಪಕನ ನೇಮಕಾತಿ 21

56. ಸ್ವತ್ತಿನ ವ್ಯವಸ್ಥಾಪಕನು ಬಂಧ ಪತ್ರವನ್ನು ಬರೆದುಕೊಡತಕ್ಕುದು 21

57. ಪಾಲಕರ ಮತ್ತು ವ್ಯವಸ್ಥಾಪಕರ ನೇಮಕಾತಿ ಮತ್ತು ಅವರ ಪರಿಶ್ರಮಧನ 22

58. ಪಾಲಕನ ಮತ್ತು ವ್ಯವಸ್ಥಾಪಕನ ಕರ್ತವ್ಯಗಳು 22

59. ವ್ಯವಸ್ಥಾಪಕನ ಅಧಿಕಾರಗಳು 22

60. ವ್ಯವಸ್ಥಾಪಕನು ವಿವರಣಾ ಪಟ್ಟಿ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಒದಗಿಸತಕ್ಕುದು 22

61. ಜಿಲ್ಲಾ ನ್ಯಾಯಾಲಯದ ಆದೇಶಗಳ ಮೇರೆಗೆ ಹಸ್ತಾಂತರಣ ಪತ್ರಗಳನ್ನು ಬರೆದುಕೊಡಲು ವ್ಯವಸ್ಥಾಪಕನ ಅಧಿಕಾರ 23

62. ಜಿಲ್ಲಾ ನ್ಯಾಯಾಲಯವು ನಿರ್ದೇಶಿಸಿದ ಕರಾರುಗಳನ್ನು ವ್ಯವಸ್ಥಾಪಕನು ನೆರವೇರಿಸತಕ್ಕುದು 23

63. ವ್ಯವಹಾರ ಆವರಣದ ವಿಲೆ 23

64. ವ್ಯವಸ್ಥಾಪಕನು ಗೇಣಿಗಳನ್ನು ವಿಲೆ ಮಾಡಬಹುದು 23

65. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಆದೇಶವನ್ನು ಮಾಡುವ ಅಧಿಕಾರ 23

66. ವಿವರಣಾಪಟ್ಟಿಯ ಅಥವಾ ಲೆಕ್ಕಪತ್ರಗಳ ಯಥಾರ್ಥತೆಯನ್ನು ಪ್ರಶ್ನಿಸಿದ್ದರೆ ವ್ಯವಹರಣೆ 23

67. ಸಂಪದ ಉತ್ಪತ್ತಿಯನ್ನು ಸರ್ಕಾರಿ ಖಜಾನೆಯಲ್ಲಿ ಸಂದಾಯ ಮಾಡುವುದು ಮತ್ತು ಅದರ ಹೂಡಿಕೆ 23

68. ಲೆಕ್ಕ ಕೊಡುವುದಕ್ಕಾಗಿ ಸಂಬಂಧಿಕನು ದಾವೆ ಹೂಡಬಹುದು 24

69. ವ್ಯವಸ್ಥಾಪಕನನ್ನು ಮತ್ತು ಪಾಲಕನನ್ನು ತೆಗೆದುಹಾಕುವುದು 24

70. ಸದಸ್ಯನು ಮಾನಸಿಕವಾಗಿ ಅಸ್ವಸ್ಥನಾದ ಮೇಲೆ ಪಾಲುಗಾರಿಕೆಯ ವಿಘಟನೆ ಮತ್ತು ಅದರ ಸ್ವತ್ತಿನ ವಿಲೆ 24

71. ಕೆಲವು ಸಂದರ್ಭಗಳಲ್ಲಿ ವ್ಯವಸ್ಥಾಪಕನನ್ನು ನೇಮಕ ಮಾಡದೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪೋಷಣೆಗಾಗಿ ಸ್ವತ್ತನ್ನು ವಿನಿಯೋಗಿಸಲು ಅಧಿಕಾರ 24

72. ಕೆಲವು ಸಂದರ್ಭಗಳಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸೇರಿದ ಸ್ಟಾಕು, ಭದ್ರತಾ ಪತ್ರಗಳು ಅಥವಾ ಷೇರುಗಳ ವರ್ಗಾವಣೆಯನ್ನು ಆದೇಶಿಸಲು ಅಧಿಕಾರ 24

73. ಭಾರತದ ಹೊರಗಡೆ ವಾಸಿಸುವ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ಟಾಕು, ಭದ್ರತಾ ಪತ್ರಗಳು ಅಥವಾ ಷೇರುಗಳ ವರ್ಗಾವಣೆಯನ್ನು ಆದೇಶಿಸಲು ಅಧಿಕಾರ 25

74. ತಾತ್ಕಾಲಿಕ ಮಾನಸಿಕ ಅಸ್ವಸ್ಥತೆಯ ಸಂದರ್ಭದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗಾಗಿ ಸ್ವತ್ತನ್ನು ವಿನಿಯೋಗಿಸಲು ಅಧಿಕಾರ 25

75. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮವನ್ನು ಅವನ ಮಾನಸಿಕ ಅಸ್ವಸ್ಥತೆಯು ನಿಂತುಹೋಗಿರುವುದೆಂದು ಜಿಲ್ಲಾ ನ್ಯಾಯಾಲಯವು ನಿರ್ಣಯಿಸಿದರೆ ರದ್ದುಗೊಳಿಸತಕ್ಕುದು 25

76. ಅಪೀಲುಗಳು 25

77. ವಿನಿಯಮಗಳನ್ನು ರಚಿಸಲು ಜಿಲ್ಲಾ ನ್ಯಾಯಾಲಯದ ಅಧಿಕಾರ 25

## ಅಧ್ಯಾಯ-VII

## ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ತಡೆಹಿಡಿದಿಟ್ಟಿರುವ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪೋಷಣೆಯ ಖರ್ಚನ್ನು ಭರಿಸಲು ಹೊಣೆಗಾರಿಕೆ

78. ಕೆಲವು ಸಂದರ್ಭಗಳಲ್ಲಿ ಸರ್ಕಾರವು ಪೋಷಣೆಯ ಖರ್ಚನ್ನು ಭರಿಸತಕ್ಕದು 25

79. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸಂಪದದಿಂದ ಅಥವಾ ಅವನನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾದ ವ್ಯಕ್ತಿಯು ಪೋಷಣೆಯ ಖರ್ಚನ್ನು ಸಂದಾಯ ಮಾಡುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ 26

80. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನುಸಮ್ಮತವಾಗಿ ಬದ್ಧರಾಗಿರುವ ವ್ಯಕ್ತಿಗಳು ಅಂಥ ಹೊಣೆಗಾರಿಕೆಯಿಂದ ವಿಮುಕ್ತರಾಗತಕ್ಕುದಲ್ಲ 26

## ಅಧ್ಯಾಯ -VIII

## ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಮಾನವೀಯ ಹಕ್ಕುಗಳ ಸಂರಕ್ಷಣೆ

81. ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳನ್ನು ಮಾನವೀಯ ಹಕ್ಕುಗಳನ್ನು ಉಲ್ಲಂಘಿಸದೆ ನಡೆಸಿಕೊಳ್ಳತಕ್ಕುದು 26

## ಅಧ್ಯಾಯ - IX

## ದಂಡನೆಗಳು ಮತ್ತು ಪ್ರಕ್ರಿಯೆ

82. III ನೇ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ದಂಡನೆ 27

83. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಅನುಚಿತವಾಗಿ ಸೇರಿಸಿರುವುದಕ್ಕಾಗಿ ದಂಡನೆ 27

84. 60ನೇ ಮತ್ತು 69ನೇ ಪ್ರಕರಣಗಳ ಉಲ್ಲಂಘನೆಗಾಗಿ ದಂಡನೆ 27

85. ಇತರ ಅಪರಾಧಗಳ ದಂಡನೆಯ ಬಗ್ಗೆ ಸಾಮಾನ್ಯ ಉಪಬಂಧ 27

86. ಕಂಪನಿಗಳಿಂದ ಅಪರಾಧಗಳು 27

87. ಪ್ರಾಸಿಕ್ಯೂಷನ್ನುಗಳಿಗೆ ಮಂಜೂರಾತಿ 28

## ಅಧ್ಯಾಯ- - X

### ಸಂಕೀರ್ಣ


| | | |
|---|---|---|
| 88. | ಬಂಧಪತ್ರಗಳ ಬಗ್ಗೆ ಉಪಬಂಧ | 28 |
| 89. | ವೈದ್ಯಕೀಯ ಅಧಿಕಾರಿಯಿಂದ ವರದಿ | 28 |
| 90. | ಸರ್ಕಾರವು ಸಂದಾಯ ಮಾಡಬೇಕಾದ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಿಂಚಣಿ ಮುಂತಾದವು | 28 |
| 91. | ಕೆಲವು ಸಂದರ್ಭಗಳಲ್ಲಿ ರಾಜ್ಯದ ವೆಚ್ಚದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಕಾನೂನು ನೆರವು | 28 |
| 92. | ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ | 29 |
| 93. | ಕೆಲವು ಕಾನೂನುಗಳು ಮುಂತಾದವುಗಳ ಉಲ್ಲೇಖಗಳನ್ನು ಅರ್ಥೈಸುವುದು | 29 |
| 94. | ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ | 29 |
| 95. | ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ರಚಿಸಿದ ನಿಯಮಗಳನ್ನು ವಿಧಾನ ಮಂಡಲದ ಮುಂದೆ ಇಡತಕ್ಕುದು | 30 |
| 96. | ಇತರ ಕಾನೂನುಗಳ ಮೇಲೆ ಅಧಿನಿಯಮದ ಪರಿಣಾಮ | 31 |
| 97. | ತೊಂದರೆಯನ್ನು ನಿವಾರಿಸಲು ಅಧಿಕಾರ | 31 |
| 98. | ನಿರಸನ ಮತ್ತು ಉಳಿಸುವಿಕೆ | 31 |

# ಮಾನಸಿಕ ಆರೋಗ್ಯ ಅಧಿನಿಯಮ, 1987

(1987ರ ಅಧಿನಿಯಮ ಸಂಖ್ಯೆ 14)

[22ನೇ ಮೇ 1987]

ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಚಿಕಿತ್ಸೆ ಮತ್ತು ರಕ್ಷಣೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ, ಅವರ ಸ್ವತ್ತು ಮತ್ತು ವ್ಯವಹಾರಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಇನ್ನೂ ಉತ್ತಮ ವ್ಯವಸ್ಥೆಯನ್ನು ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯ ಮೂವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

## ಅಧ್ಯಾಯ - I

## ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಮಾನಸಿಕ ಆರೋಗ್ಯ ಅಧಿನಿಯಮ,1987 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ವಿವಿಧ ರಾಜ್ಯಗಳಿಗಾಗಿ ಮತ್ತು ಈ ಅಧಿನಿಯಮದ ವಿವಿಧ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು, ಮತ್ತು ಒಂದು ರಾಜ್ಯದಲ್ಲಿ ಈ ಅಧಿನಿಯಮದ ಪ್ರಾರಂಭದ ಬಗೆಗಿನ ಯಾವುದೇ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು, ಆ ರಾಜ್ಯದಲ್ಲಿ ಆ ಉಪಬಂಧವು ಜಾರಿಗೆ ಬರುವುದರ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕುದು.

2. ಪರಿಭಾಷೆಗಳು:-ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಲಾಗಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಪಟ್ಟಂತೆ "ಪೋಷಣೆಯ ಖರ್ಚು" ಎಂಬುದಕ್ಕೆ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಬಾಬುಗಳ ವೆಚ್ಚ ಎಂಬ ಅರ್ಥವಿರತಕ್ಕುದು.

(ಬಿ) 'ಜಿಲ್ಲಾ ನ್ಯಾಯಾಲಯ' ಎಂದರೆ, ನಗರ ಸಿವಿಲ್ ನ್ಯಾಯಾಲಯವಿರುವಂಥ ಪ್ರದೇಶದಲ್ಲಿ ಆ ನ್ಯಾಯಾಲಯ ಮತ್ತು ಯಾವುದೇ ಇತರ ಪ್ರದೇಶದಲ್ಲಿ ಅಸಲು ಅಧಿಕಾರ ವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಅದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ವಿಷಯಗಳೊಂದಿಗೆ ಅಥವಾ ಯಾವುದೇ ವಿಷಯದೊಂದಿಗೆ ವ್ಯವಹರಿಸಲು ಸಕ್ಷಮ ನ್ಯಾಯಾಲಯವೆಂದು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ನ್ಯಾಯಾಲಯವನ್ನು ಒಳಗೊಳ್ಳುತ್ತದೆ.

(ಸಿ) 'ಪರಿಶೀಲನಾಧಿಕಾರಿ' ಎಂದರೆ, ಯಾವುದೇ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಪರಿಶೀಲಿಸಲು ರಾಜ್ಯ ಸರ್ಕಾರವು ಅಥವಾ ಲೈಸೆನ್ಸು ಕೊಡುವ ಪ್ರಾಧಿಕಾರವು ಅಧಿಕೃತಗೊಳಿಸಿದ ವ್ಯಕ್ತಿ;

(ಡಿ) "ಲೈಸೆನ್ಸ್ ಎಂದರೆ 8ನೇ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸು;

(ಇ) "ಲೈಸೆನ್ಸುದಾರ" ಎಂದರೆ ಲೈಸೆನ್ಸ್ ಧಾರಕ;

(ಎಫ್) "ಲೈಸೆನ್ಸ್" ಪಡೆದ ಮನೋರೋಗ ಆಸ್ಪತ್ರೆ" ಅಥವಾ "ಲೈಸೆನ್ಸ್ ಪಡೆದ ಮನೋರೋಗ ನರ್ಸಿಂಗ್ ಹೋಮ್" ಎಂದರೆ ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದ ಅಥವಾ ಲೈಸೆನ್ಸ್ ಪಡೆದಿರುವುದಾಗಿ ಭಾವಿಸಬಹುದಾದ ಮನೋರೋಗ ಆಸ್ಪತ್ರೆ, ಅಥವಾ ಸಂದರ್ಭಾನುಸಾರ, ಮನೋರೋಗ ನರ್ಸಿಂಗ್ ಹೋಮ್;

(ಜಿ) "ಲೈಸೆನ್ಸು ಕೊಡುವ ಪ್ರಾಧಿಕಾರ" ಎಂದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಲೈಸೆನ್ಸು ಕೊಡುವ ಪ್ರಾಧಿಕಾರವಾಗಿರುವುದೆಂದು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿ ಅಥವಾ ಪ್ರಾಧಿಕಾರ;

(ಎಚ್) "ಮ್ಯಾಜಿಸ್ಟ್ರೇಟ್" ಎಂದರೆ,-

(1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) 2ನೇ ಪ್ರಕರಣದ (ಕೆ) ಖಂಡದ ಅರ್ಥ ವ್ಯಾಪ್ತಿಯೊಳಗಿನ ಮಹಾನಗರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಮಹಾನಗರ ಮ್ಯಾಜಿಸ್ಟ್ರೇಟ್;

(2) ಯಾವುದೇ ಇತರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್, ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಮ್ಯಾಜಿಸ್ಟ್ರೇಟ್‌ನ ಪ್ರಕಾರ್ಯಗಳನ್ನು ನೆರವೇರಿಸಲು ಶಕ್ತಗೊಳಿಸಲಾದಂಥ ಇತರ ಪ್ರಥಮದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್;

(ಐ) "ವೈದ್ಯಕೀಯ ಅಧಿಕಾರಿ" ಎಂದರೆ ಸರ್ಕಾರದ ಸೇವೆಯಲ್ಲಿರುವ ಗೆಜೆಟೆಡ್ ವೈದ್ಯಕೀಯ ಅಧಿಕಾರಿ ಮತ್ತು ಅದು, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಘೋಷಿಸಿದ ವೈದ್ಯಕೀಯ ವೃತ್ತಿಗನನ್ನು ಒಳಗೊಳ್ಳುತ್ತದೆ;

(ಜೆ) ಯಾವುದೇ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗೆ ಸಂಬಂಧಿಸಿದಂತೆ "ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿ" ಎಂದರೆ ತತ್ಕಾಲದಲ್ಲಿ ಆ ಆಸ್ಪತ್ರೆಯ ಅಥವಾ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿ ;

(ಕೆ) "ವೈದ್ಯಕೀಯ ವೃತ್ತಿಗ" ಎಂದರೆ,-

(i) ಭಾರತ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ 2ನೇ ಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಿರುವ ಮನ್ನಣೆ ಪಡೆದ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ಆ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಿರುವ ರಾಜ್ಯ ವೈದ್ಯಕೀಯ ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಲಾಗಿರುವ;

(ii) ಭಾರತ ಔಷಧ ಕೇಂದ್ರ ಪರಿಷತ್ತು ಅಧಿನಿಯಮ, 1970 (1970ರ 48)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಿರುವಂತೆ ಮನ್ನಣೆ ಪಡೆದ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ಆ ಪ್ರಕರಣದ (1)ನೇ ಉಪಪ್ರಕರಣದ (ಜೆ)ಖಂಡದಲ್ಲಿ ಪರಿಭಾಷಿಸಿರುವಂತೆ ರಾಜ್ಯದ ಭಾರತ ಔಷಧ ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಲಾಗಿರುವ; ಮತ್ತು

(iii) ಹೋಮಿಯೋಪತಿ ಕೇಂದ್ರ ಪರಿಷತ್ತು ಅಧಿನಿಯಮ, 1973 (1973ರ 59)ರ 2ನೇ ಪ್ರಕರಣದ (1)ನೇ ಉಪಪ್ರಕರಣದ (ಜಿ) ಖಂಡದಲ್ಲಿ ಪರಿಭಾಷಿಸಿದಂತೆ ಮನ್ನಣೆ ಪಡೆದ ವೈದ್ಯಕೀಯ ಅರ್ಹತೆಯನ್ನು ಹೊಂದಿರುವ ಮತ್ತು ಆ ಪ್ರಕರಣದ (1)ನೇ ಉಪಪ್ರಕರಣದ (ಐ) ಖಂಡದಲ್ಲಿ ಪರಿಭಾಷಿಸಿದಂತೆ ಹೋಮಿಯೋಪತಿ ರಾಜ್ಯ ರಿಜಿಸ್ಟರಿನಲ್ಲಿ ಹೆಸರನ್ನು ನಮೂದಿಸಲಾಗಿರುವ

-ವ್ಯಕ್ತಿ;

(ಎಲ್) "ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿ" ಎಂದರೆ, ಮಾನಸಿಕ ಮಂದತೆಯನ್ನು ಹೊರತುಪಡಿಸಿ ಯಾವುದೇ ಮನೋ ವಿಕಾರದ ಕಾರಣದಿಂದಾಗಿ ಚಿಕಿತ್ಸೆಯ ಅವಶ್ಯಕತೆಯಿರುವ ವ್ಯಕ್ತಿ;

(ಎಂ) "ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿ" ಎಂದರೆ ಯಾರ ಬಂಧನಕ್ಕಾಗಿ ಮನೋರೋಗ ಆಸ್ಪತ್ರೆ, ಮನೋರೋಗ ನರ್ಸಿಂಗ್ ಹೋಂ, ಜೈಲು ಅಥವಾ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳದಲ್ಲಿ ಅಥವಾ ಅದಕ್ಕೆ ಸ್ಥಳಾಂತರಿಸಲು 27ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವನ್ನು ಮಾಡಲಾಗಿದೆಯೋ, ಆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿ;

(ಎನ್) "ಅಪ್ರಾಪ್ತವಯಸ್ಕ" ಎಂದರೆ ಹದಿನೆಂಟು ವರ್ಷಗಳು ತುಂಬದೆ ಇರುವ ವ್ಯಕ್ತಿ;

(ಒ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಪಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಕ್ಯೂ) "ಮನೋರೋಗ ಆಸ್ಪತ್ರೆ" ಅಥವಾ "ಮನೋರೋಗ ನರ್ಸಿಂಗ್ ಹೋಮ್" ಎಂದರೆ, ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಚಿಕಿತ್ಸೆ ಮತ್ತು ರಕ್ಷಣೆಗಾಗಿ ಸರ್ಕಾರವು ಅಥವಾ ಯಾರೇ ಇತರ ವ್ಯಕ್ತಿಯು ಸ್ಥಾಪಿಸುವ ಅಥವಾ ನಿರ್ವಹಿಸಿಕೊಂಡು ಬಂದಿರುವ ಆಸ್ಪತ್ರೆ ಅಥವಾ ಸಂದರ್ಭಾನುಸಾರ ನರ್ಸಿಂಗ್ ಹೋಮ್ ಮತ್ತು ಅದು ಮಾನಸಿಕವಾಗಿ ಅಸ್ವಸ್ಥರಾಗಿರುವ ಅಂಥ ವ್ಯಕ್ತಿಗಳಿಗಾಗಿ ಸರ್ಕಾರವು ಅಥವಾ ಯಾವನೇ ಇತರ ವ್ಯಕ್ತಿಯು ಸ್ಥಾಪಿಸಿರುವ ಅಥವಾ ನಿರ್ವಹಿಸಿಕೊಂಡು ಬಂದಿರುವ ಆರೋಗ್ಯ ಗೃಹವನ್ನು ಒಳಗೊಳ್ಳುತ್ತದೆ; ಆದರೆ ಅದು ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸಿಕೊಂಡು ಬಂದಿರುವ ಮತ್ತು ಮನೋರೋಗ ಸೇವೆಗಳಿಗಾಗಿಯೂ ಸಹ ವ್ಯವಸ್ಥೆ ಮಾಡಿರುವಂಥ ಯಾವುದೇ ಸಾರ್ವಜನಿಕ ಆಸ್ಪತ್ರೆ ಅಥವಾ ಸಾರ್ವಜನಿಕ ನರ್ಸಿಂಗ್ ಹೋಮನ್ನು ಒಳಗೊಳ್ಳುವುದಿಲ್ಲ;

(ಆರ್) "ಮನೋರೋಗ ಚಿಕಿತ್ಸಕ" ಎಂದರೆ ಭಾರತ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956ರ 102)ರ ಮೇರೆಗೆ ರಚಿಸಲಾದ ಭಾರತದ ವೈದ್ಯಕೀಯ ಪರಿಷತ್ತಿನಿಂದ ಮನ್ನಣೆ ಪಡೆದ ಮನೋರೋಗ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನು ಅಥವಾ ಡಿಪ್ಲೊಮಾವನ್ನು ಹೊಂದಿರುವ ವೈದ್ಯಕೀಯ ವೃತ್ತಿಗ, ಮತ್ತು ಅದು ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟಂತೆ, ಮನೋರೋಗ ವಿಜ್ಞಾನದಲ್ಲಿ ಅವನ ಜ್ಞಾನ ಮತ್ತು ಅನುಭವವನ್ನು ಪರಿಗಣಿಸಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಮನೋರೋಗ ಚಿಕಿತ್ಸಕನಾಗಿರುವುದಾಗಿ ಆ ರಾಜ್ಯದ ಸರ್ಕಾರವು ಘೋಷಿಸಿರುವ ಯಾವನೇ ವೈದ್ಯಕೀಯ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಎಸ್) "ಪ್ರವೇಶನ ಆದೇಶ" ಎಂದರೆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪ್ರವೇಶಕ್ಕಾಗಿ ಅಥವಾ ಬಂಧನಕ್ಕಾಗಿ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಆದೇಶ;

(ಟಿ) "ಸಂಬಂಧಿಕ" ಎಂಬುದು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ರಕ್ತ ಸಂಬಂಧದ ವಿವಾಹ ಅಥವಾ ದತ್ತಕದ ಮೂಲಕ ಸಂಬಂಧಿಯಾಗಿರುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಯು) ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ, ಅದರ ಆಡಳಿತಗಾರ.

## ಅಧ್ಯಾಯ - II

## ಮಾನಸಿಕ ಆರೋಗ್ಯ ಪ್ರಾಧಿಕಾರಗಳು

3. ಮಾನಸಿಕ ಆರೋಗ್ಯ ಸೇವೆಗಳಿಗಾಗಿ ಕೇಂದ್ರ ಪ್ರಾಧಿಕಾರ:- (1)ಕೇಂದ್ರ ಸರ್ಕಾರವು, ಮಾನಸಿಕ ಆರೋಗ್ಯಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಹೆಸರನ್ನು ಹೊಂದಿರುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾಧಿಕಾರವು, ಕೇಂದ್ರ ಸರ್ಕಾರದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಿರುವ ಯಾವುದೇ ಪ್ರಾಧಿಕಾರವು,-

(ಎ) ಕೇಂದ್ರ ಸರ್ಕಾರದ ಅಧೀನದಲ್ಲಿರುವ ಮಾನಸಿಕ ಆರೋಗ್ಯ ಸೇವೆಗಳಿಗೆ, ಮತ್ತು ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರಕ್ಕೆ ಅಧೀನವಾದ ಯಾವನೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಸಂಬಂಧಿಸಿರುವಂಥ ಎಲ್ಲಾ ಇತರ ವಿಷಯಗಳಿಗೆ ಸಂಬಂಧಿಸಿದಂತೆ ನಿಯಂತ್ರಣ, ಅಭಿವೃದ್ಧಿ, ನಿರ್ದೇಶನ ಮತ್ತು ಸಮನ್ವಯ ಇವುಗಳ ಪ್ರಭಾರವನ್ನು ಹೊಂದಿರತಕ್ಕುದು;

(ಬಿ) ಮನೋರೋಗ ಆಸ್ಪತ್ರೆಗಳ ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಮತ್ತು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ಇತರ ಮಾನಸಿಕ ಆರೋಗ್ಯ ಸೇವಾ ಏಜೆನ್ಸಿಗಳ (ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳನ್ನು ಇಡಬಹುದಾದ ಅಥವಾ ಬಂಧಿಸಿಡಬಹುದಾದಂಥ ಸ್ಥಳಗಳನ್ನು ಒಳಗೊಂಡು) ಉಸ್ತುವಾರಿಯನ್ನು ನೋಡಿಕೊಳ್ಳತಕ್ಕುದು;

(ಸಿ) ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆಯನ್ನು ಕೊಡತಕ್ಕುದು; ಮತ್ತು

(ಡಿ) ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

ವಿವರಣೆ:- ಈ ಪ್ರಕರಣದ ಮತ್ತು 4ನೇ ಪ್ರಕರಣದ ಉದ್ದೇಶಗಳಿಗಾಗಿ "ಮಾನಸಿಕ ಆರೋಗ್ಯ ಸೇವೆಗಳು" ಎಂಬುದು ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಜೊತೆಗೆ , ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳಿಗಾಗಿನ ಪರಿವೀಕ್ಷಣಾ ವಾರ್ಡುಗಳು, ಹಗಲು ಆರೈಕೆ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ, ಸಂಚಾರಿ ಚಿಕಿತ್ಸಾ ಸೌಲಭ್ಯಗಳು ಮತ್ತು ಇತರ ಸೌಲಭ್ಯಗಳು, ಚೇತರಿಕೆ ಗೃಹಗಳು ಮತ್ತು ನಡುನೆಲೆ ಕೇಂದ್ರಗಳನ್ನು ಒಳಗೊಳ್ಳುತ್ತದೆ.

4.ಮಾನಸಿಕ ಆರೋಗ್ಯ ಸೇವೆಗಳಿಗಾಗಿ ರಾಜ್ಯ ಪ್ರಾಧಿಕಾರ:- (1) ರಾಜ್ಯ ಸರ್ಕಾರವು, ಮಾನಸಿಕ ಆರೋಗ್ಯಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಹೆಸರನ್ನು ಹೊಂದಿರುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾಧಿಕಾರವು ರಾಜ್ಯ ಸರ್ಕಾರದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟಿರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾಧಿಕಾರವು,-

(ಎ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಮಾನಸಿಕ ಆರೋಗ್ಯ ಸೇವೆಗಳಿಗೆ ಸಂಬಂಧಿಸಿದಂತೆ ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿರುವ ಯಾವನೇ ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಸಂಬಂಧಿಸಿರುವಂಥ ಎಲ್ಲಾ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ನಿಯಂತ್ರಣ, ಅಭಿವೃದ್ಧಿ ಮತ್ತು ಸಮನ್ವಯ ಇವುಗಳ ಪ್ರಭಾರವನ್ನು ಹೊಂದಿರತಕ್ಕುದು;

(ಬಿ) ಮನೋರೋಗ ಆಸ್ಪತ್ರೆಗಳ ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಮತ್ತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಇತರ ಮಾನಸಿಕ ಆರೋಗ್ಯ ಸೇವಾ ಏಜೆನ್ಸಿಗಳ (ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳನ್ನಿಡಬಹುದಾದ ಅಥವಾ ಬಂಧಿಸಿಡಬಹುದಾದಂಥ ಸ್ಥಳಗಳನ್ನು ಒಳಗೊಂಡು) ಉಸ್ತುವಾರಿ ನೋಡಿಕೊಳ್ಳತಕ್ಕುದು;

(ಸಿ) ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆಯನ್ನು ಕೊಡತಕ್ಕುದು;ಮತ್ತು

(ಡಿ) ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

## ಅಧ್ಯಾಯ -III

## ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳು

5. ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಸ್ಥಾಪನೆ ಅಥವಾ ಅವುಗಳ ನಿರ್ವಹಣೆ:- (1) ಕೇಂದ್ರ ಸರ್ಕಾರವು, ಭಾರತದ ಯಾವುದೇ ಭಾಗದಲ್ಲಿ ಅಥವಾ ರಾಜ್ಯ ಸರ್ಕಾರವು ಅದರ ಅಧಿಕಾರ ವ್ಯಾಪ್ತಿಯ ಪರಿಮಿತಿಗಳೊಳಗೆ ತಾನು ಸೂಕ್ತವೆಂದು ಯೋಚಿಸುವಂಥ ಸ್ಥಳಗಳಲ್ಲಿ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪ್ರವೇಶಕ್ಕಾಗಿ, ಚಿಕಿತ್ಸೆಗಾಗಿ ಮತ್ತು ರಕ್ಷಣೆಗಾಗಿ ಮನೋರೋಗ ಆಸ್ಪತ್ರೆಗಳನ್ನು ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗಳನ್ನು ಸ್ಥಾಪಿಸಬಹುದು ಅಥವಾ ಅವುಗಳನ್ನು ನಿರ್ವಹಿಸಬಹುದು; ಮತ್ತು ಅದು,-

(ಎ) ಹದಿನಾರು ವರ್ಷ ವಯಸ್ಸಿನೊಳಗಿರುವವರಿಗಾಗಿ;

(ಬಿ) ವ್ಯಕ್ತಿಯಲ್ಲಿ ನಡವಳಿಕೆಯ ಬದಲಾವಣೆಗೆ ಕಾರಣವಾಗುವಂಥ ಮದ್ಯಸಾರ ಅಥವಾ ಇತರ ಔಷಧಗಳ ದುಶ್ಚಟಕ್ಕೆ ಬಿದ್ದಿರುವವರಿಗಾಗಿ;

(ಸಿ) ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತರಾಗಿರುವವರಿಗಾಗಿ; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ವರ್ಗ ಮತ್ತು ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗಾಗಿ

- ಪ್ರತ್ಯೇಕ ಮನೋರೋಗ ಆಸ್ಪತ್ರೆಗಳನ್ನು ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳನ್ನು ಸ್ಥಾಪಿಸಬಹುದು ಅಥವಾ ನಿರ್ವಹಿಸಬಹುದು.

(2) ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಕೇಂದ್ರ ಸರ್ಕಾರವು ಸ್ಥಾಪಿಸಿರುವಲ್ಲಿ ಅಥವಾ ನಿರ್ವಹಿಸುತ್ತಿರುವಲ್ಲಿ, ರಾಜ್ಯ ಸರ್ಕಾರಕ್ಕೆ ಅಂಥ ಆಸ್ಪತ್ರೆಗೆ ಅಥವಾ ನರ್ಸಿಂಗ್ ಹೋಮಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದಲ್ಲಿ ಮಾಡಿದ ಉಲ್ಲೇಖವನ್ನು ಕೇಂದ್ರ ಸರ್ಕಾರಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕುದು.

6. ಲೈಸೆನ್ಸಿನೊಂದಿಗೆ ಮಾತ್ರ ಮನೋರೋಗ ಆಸ್ಪತ್ರೆಗಳ ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗಳ ಸ್ಥಾಪನೆ ಅಥವಾ ನಿರ್ವಹಣೆ:- (1) ಈ ಅಧಿನಿಯಮವು ಪ್ರಾರಂಭವಾಗುವಂದು ಮತ್ತು ಆ ತರುವಾಯ ಯಾವನೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಅವನಿಗೆ ಮಂಜೂರು ಮಾಡಿದ ಸಿಂಧುವಾದ ಲೈಸೆನ್ಸನ್ನು ಅವನು ಧಾರಣ ಮಾಡಿದ್ದ ಹೊರತು ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಸ್ಥಾಪಿಸತಕ್ಕುದಲ್ಲ ಅಥವಾ ನಿರ್ವಹಿಸತಕ್ಕುದಲ್ಲ:

ಪರಂತು, ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಲೈಸೆನ್ಸು ಕೊಟ್ಟ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ನಿರ್ವಹಿಸುತ್ತಿದ್ದ (ರಕ್ಷಣಾಲಯವೆಂದಾಗಲಿ ಅಥವಾ ಯಾವುದೇ ಇತರ ಹೆಸರಿನಿಂದ ಕರೆಯಲಾಗಿರುವ) ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ನಿರ್ವಹಿಸುವುದನ್ನು ಮುಂದುವರಿಸಬಹುದು ಮತ್ತು ಅವುಗಳನ್ನು, ಈ ಅಧಿನಿಯಮದ ಮೇರೆಗೆ, ಸಂದರ್ಭಾನುಸಾರ,-

(ಎ) ಅಂಥ ಪ್ರಾರಂಭದಿಂದ ಮೂರು ತಿಂಗಳುಗಳ ಅವಧಿಗೆ; ಅಥವಾ

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ, ಲೈಸೆನ್ಸಿಗಾಗಿ 7ನೇ ಪ್ರಕರಣಕ್ಕೆ ಅನುಸಾರವಾಗಿ ಮಾಡಿಕೊಂಡ ಅರ್ಜಿಯು ಇತ್ಯರ್ಥದಲ್ಲಿದ್ದರೆ, ಅಂಥ ಅರ್ಜಿಯು ವಿಲೆಯಾಗುವವರೆಗೆ

- ಲೈಸೆನ್ಸು ಕೊಟ್ಟ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮುಗಳಾಗಿರುವುದಾಗಿ ಭಾವಿಸತಕ್ಕುದು.

(2) (1)ನೇ ಉಪಪ್ರಕರಣದಲ್ಲಿ ಇರುವುದಾವುದೂ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮ್‌ಗೆ ಅನ್ವಯವಾಗತಕ್ಕುದಲ್ಲ.

7. ಲೈಸೆನ್ಸಿಗಾಗಿ ಅರ್ಜಿ:- (1) ಈ ಅಧಿನಿಯಮವು ಪ್ರಾರಂಭವಾದಾಗ, ಯಾವುದೇ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮ್‌ನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಅವನನ್ನು ಅಧಿಕೃತಗೊಳಿಸುವ ಸಿಂಧುವಾದ ಲೈಸೆನ್ಸನ್ನು ಧಾರಣ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯು, 6ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ (ಎ) ಖಂಡದಲ್ಲಿ ಉಲ್ಲೇಖಿಸಿದ ಅವಧಿಯು ಮುಕ್ತಾಯವಾದ ತರುವಾಯ ಅಂಥ ಆಸ್ಪತ್ರೆಯನ್ನು ಅಥವಾ ನರ್ಸಿಂಗ್ ಹೋಮನ್ನು ಸ್ಥಾಪಿಸಲು ಅಥವಾ ಅದರ ನಿರ್ವಹಣೆಯನ್ನು ಮುಂದುವರಿಸಲು ಸದರಿ ವ್ಯಕ್ತಿಯು ಉದ್ದೇಶಿಸಿದರೆ ಅವನು, ಅಂಥ ಅವಧಿಯು ಮುಕ್ತಾಯವಾಗುವುದಕ್ಕೆ ಕನಿಷ್ಠಪಕ್ಷ ಒಂದು ತಿಂಗಳಿಗೆ ಮುಂಚೆ ಸಂದರ್ಭಾನುಸಾರ ಅಂಥ ಆಸ್ಪತ್ರೆಯನ್ನು ಅಥವಾ ನರ್ಸಿಂಗ್ ಹೋಮನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ಹೊಸ ಲೈಸೆನ್ಸನ್ನು ಮಂಜೂರು ಮಾಡುವಂತೆ ಕೋರಿ ಲೈಸೆನ್ಸ್ ಕೊಡುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳತಕ್ಕುದು.

(2) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಉದ್ದೇಶಿಸುವ ವ್ಯಕ್ತಿಯು, ಸದರಿ ವ್ಯಕ್ತಿಯು ಈಗಾಗಲೇ ಸಿಂಧುವಾದ ಲೈಸೆನ್ಸನ್ನು ಧಾರಣಮಾಡಿಲ್ಲದಿದ್ದರೆ ಲೈಸೆನ್ಸ್ ಮಂಜೂರು ಮಾಡುವಂತೆ ಕೋರಿ ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳತಕ್ಕುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕುದು ಮತ್ತು ಅಂಥ ಫೀಜಿನೊಂದಿಗೆ ಇರತಕ್ಕುದು.

8. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ:-7ನೇ ಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಲೈಸೆನ್ಸು ಕೊಡುವ ಪ್ರಾಧಿಕಾರವು ಅದು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ನಡೆಸತಕ್ಕುದು ಮತ್ತು ಅದಕ್ಕೆ,-

(ಎ) ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಸ್ಥಾಪನೆ ಅಥವಾ ನಿರ್ವಹಣೆ ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಸ್ಥಾಪಿಸಲಾದ ಯಾವುದೇ ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್ ಹೋಮಿನ ನಿರ್ವಹಣೆಯ ಮುಂದುವರಿಕೆಯು ಅವಶ್ಯವೆಂದು;

(ಬಿ) ಮಾನಸಿಕ ಅಸ್ವಸ್ಥರಾಗಿರುವ ವ್ಯಕ್ತಿಗಳ ಪ್ರವೇಶ, ಚಿಕಿತ್ಸೆ ಮತ್ತು ರಕ್ಷಣೆಗಾಗಿ ನಿಯಮಿಸಲಾದ ಕನಿಷ್ಠ ಸೌಲಭ್ಯಗಳನ್ನೊದಗಿಸಲು ಅರ್ಜಿದಾರನು ಸಮರ್ಥನಿರುವನೆಂದು; ಮತ್ತು

(ಸಿ) ಆ ಮನೋರೋಗ ಆಸ್ಪತ್ರೆಯು ಅಥವಾ ಮನೋರೋಗ ನರ್ಸಿಂಗ್ ಹೋಮ್, ಮನೋರೋಗ ವಿಜ್ಞಾನಿಯಾಗಿರುವ ವೈದ್ಯಕೀಯ ಅಧಿಕಾರಿಯ ಪ್ರಭಾರದಲ್ಲಿರುವುವೆಂದು ಮನವರಿಕೆಯಾದರೆ

-ಅದು ನಿಯಮಿಸಿದ ನಮೂನೆಯಲ್ಲಿ ಅರ್ಜಿದಾರನಿಗೆ ಲೈಸೆನ್ಸನ್ನು ಮಂಜೂರು ಮಾಡತಕ್ಕುದು, ಮತ್ತು ಹಾಗೆ ಅದಕ್ಕೆ ಮನವರಿಕೆಯಾಗದಿದ್ದರೆ ಲೈಸೆನ್ಸು ಕೊಡುವ ಪ್ರಾಧಿಕಾರವು ಕೋರಿರುವ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಲೈಸೆನ್ಸನ್ನು ಮಂಜೂರು ಮಾಡಲು ಆದೇಶದ ಮೂಲಕ ನಿರಾಕರಿಸತಕ್ಕುದು:

ಪರಂತು, ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸುವ ಲೈಸೆನ್ಸನ್ನು ಕೊಡುವ ಪ್ರಾಧಿಕಾರವು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡತಕ್ಕುದು ಮತ್ತು ಲೈಸೆನ್ಸನ್ನು ಮಂಜೂರುಮಾಡಲು ನಿರಾಕರಿಸುವ ಪ್ರತಿಯೊಂದು ಆದೇಶದಲ್ಲಿ ಅಂಥ ನಿರಾಕರಣೆಗಾಗಿನ ಕಾರಣಗಳನ್ನು ನಮೂದಿಸತಕ್ಕುದು ಮತ್ತು ಅಂಥ ಕಾರಣಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿದಾರನಿಗೆ ತಿಳಿಸತಕ್ಕುದು.

9. ಲೈಸೆನ್ಸಿನ ಅವಧಿ ಮತ್ತು ನವೀಕರಣ:- (1) ಲೈಸೆನ್ಸು ವರ್ಗಾವಣೀಯ ಅಥವಾ ಅನುವಂಶೀಯವಾಗಿರತಕ್ಕುದಲ್ಲ.

(2) ಲೈಸೆನ್ಸುದಾರನು ಯಾವುದೇ ಕಾರಣಕ್ಕಾಗಿ ಲೈಸೆನ್ಸುದಾರನಾಗಿ ಕೆಲಸ ಮಾಡಲು ಅಸಮರ್ಥನಾಗಿರುವಲ್ಲಿ ಅಥವಾ ಲೈಸೆನ್ಸುದಾರನು ಮರಣ ಹೊಂದಿರುವಲ್ಲಿ, ಲೈಸೆನ್ಸುದಾರನು ಅಥವಾ ಸಂದರ್ಭಾನುಸಾರ, ಅಂಥ ಲೈಸೆನ್ಸುದಾರನ ಕಾನೂನು ಸಮ್ಮತ ಪ್ರತಿನಿಧಿಯು ಆ ವಿಷಯವನ್ನು ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ ನಿಯಮಿಸಿದ ರೀತಿಯಲ್ಲಿ ತಕ್ಷಣವೇ ವರದಿ ಮಾಡತಕ್ಕುದು ಮತ್ತು (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂಬಂಧಪಟ್ಟ ಆ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ನಿರ್ವಹಿಸುವುದನ್ನು ಮುಂದುವರಿಸಬಹುದು ಮತ್ತು ಅದನ್ನು,-

(ಎ) ಹಾಗೆ ವರದಿ ಮಾಡಿದ ದಿನಾಂಕದಿಂದ ಅಥವಾ ಲೈಸೆನ್ಸುದಾರನ ಮರಣದ ಸಂದರ್ಭದಲ್ಲಿ ಅವನ ಮರಣದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯವರೆಗೆ; ಅಥವಾ

(ಬಿ) (3)ನೇ ಉಪಪ್ರಕರಣಕ್ಕನುಸಾರವಾಗಿ ಲೈಸೆನ್ಸಿಗಾಗಿ ಮಾಡಿಕೊಂಡಿರುವ ಅರ್ಜಿಯು (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯಗೊಂಡ ಮೇಲೆ ಇತ್ಯರ್ಥದಲ್ಲಿದ್ದರೆ ಅಂಥ ಅರ್ಜಿಯ ವಿಲೆಯವರೆಗೆ

- ಸಂದರ್ಭಾನುಸಾರ ಲೈಸೆನ್ಸು ಪಡೆದ ಮನೋರೋಗ ಆಸ್ಪತ್ರೆ ಅಥವಾ ಲೈಸೆನ್ಸು ಪಡೆದ ಮನೋರೋಗ ನರ್ಸಿಂಗ್ ಹೋಮ್ ಆಗಿರುವುದಾಗಿ ಭಾವಿಸತಕ್ಕುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಲೈಸೆನ್ಸುದಾರನ ಕಾನೂನು ಸಮ್ಮತ ಪ್ರತಿನಿಧಿಯು, ಅವನು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ನಿರ್ವಹಣೆಯನ್ನು ಮುಂದುವರಿಸಲು ಉದ್ದೇಶಿಸಿದರೆ, ಅಂಥ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಕನಿಷ್ಠ ಪಕ್ಷ ಒಂದು ತಿಂಗಳು ಮುಂಚೆ ಸಂದರ್ಭಾನುಸಾರ ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್ ಹೋಮಿನ ನಿರ್ವಹಣೆಗಾಗಿ ಹೊಸ ಲೈಸೆನ್ಸಿನ ಮಂಜೂರಾತಿಗಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಳ್ಳಬಹುದು ಮತ್ತು 8ನೇ ಪ್ರಕರಣದ ಉಪಬಂಧಗಳು 7ನೇ ಪ್ರಕರಣದ ಮೇರೆಗೆ ಮಾಡಿಕೊಂಡಿರುವ ಅರ್ಜಿಗೆ ಸಂಬಂಧಪಟ್ಟಂತೆ ಅವುಗಳು ಅನ್ವಯವಾಗುವಂತೆಯೇ ಅಂಥ ಅರ್ಜಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕುದು.

(4) ಪ್ರತಿಯೊಂದು ಲೈಸೆನ್ಸು, ಅದನ್ನು 11ನೇ ಪ್ರಕರಣದ ಮೇರೆಗೆ ಮುಂಚಿತವಾಗಿ ರದ್ದುಗೊಳಿಸಿರುವ ಹೊರತು, ಅದನ್ನು ಮಂಜೂರು ಮಾಡಿದಂಥ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕುದು.

(5) ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಫೀಜಿನೊಂದಿಗೆ ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ ಆ ಬಗ್ಗೆ ಮಾಡಿಕೊಂಡಿರುವ ಅರ್ಜಿಯ ಮೇಲೆ, ಲೈಸೆನ್ಸನ್ನು ಕಾಲಕಾಲಕ್ಕೆ ನವೀಕರಿಸಬಹುದು, ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು ಆ ಲೈಸೆನ್ಸಿನ ಸಿಂಧುತ್ವದ ಅವಧಿಯು ಮುಕ್ತಾಯಗೊಳ್ಳಬೇಕಾದಂಥ ದಿನಾಂಕಕ್ಕೆ ಮುಂಚೆ ಒಂದು ವರ್ಷಕ್ಕೆ ಕಡಿಮೆಯಿಲ್ಲದಂತೆ ಮಾಡಿಕೊಳ್ಳತಕ್ಕುದು:

ಪರಂತು, ಲೈಸೆನ್ಸಿನ ನವೀಕರಣವನ್ನು ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ,-

(i) ಲೈಸೆನ್ಸುದಾರನು, ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪ್ರವೇಶ, ಚಿಕಿತ್ಸೆ ಮತ್ತು ರಕ್ಷಣೆಗಾಗಿ ನಿಯಮಿಸಿದ ಕನಿಷ್ಠ ಸೌಲಭ್ಯಗಳನ್ನು ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒದಗಿಸುವ ಸ್ಥಿತಿಯಲ್ಲಿ ಇಲ್ಲವೆಂದು; ಅಥವಾ

(ii) ಲೈಸೆನ್ಸುದಾರನು, ಆ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರವನ್ನು ವಹಿಸಿಕೊಳ್ಳಲು ಮನೋರೋಗ ಚಿಕಿತ್ಸಕನಾಗಿರುವ ವೈದ್ಯಕೀಯ ಅಧಿಕಾರಿಯನ್ನು ಒದಗಿಸುವ ಸ್ಥಿತಿಯಲ್ಲಿ ಇಲ್ಲವೆಂದು; ಅಥವಾ

(iii) ಲೈಸೆನ್ಸುದಾರನು, ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿದ್ದಾನೆಂದು

-ಮನವರಿಕೆಯಾದ ಹೊರತು ನಿರಾಕರಿಸತಕ್ಕುದಲ್ಲ.

10. ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ನಿಯಮಿಸಬಹುದಾದ ಷರತ್ತುಗಳಿಗನುಸಾರವಾಗಿ ನಿರ್ವಹಿಸಿಕೊಂಡು ಬರುವುದು:- ಪ್ರತಿಯೊಂದು ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ನಿರ್ವಹಿಸಿಕೊಂಡು ಬರತಕ್ಕದ್ದು.

11. ಲೈಸೆನ್ಸಿನ ರದ್ದಿಯಾತಿ:- (1) ಲೈಸೆನ್ಸುದಾರನಿಗೆ ವಿಧಿಸಬಹುದಾದಂಥ ಯಾವುದೇ ಇತರ ದಂಡನೆಗೆ ಬಾಧಕವಾಗದಂತೆ, ಲೈಸೆನ್ಸು ಪ್ರಾಧಿಕಾರವು ಬರಹದಲ್ಲಿನ ಆದೇಶದ ಮೂಲಕ ,-

(ಎ) ಆ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಲೈಸೆನ್ಸುದಾರನು ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ನಿರ್ವಹಿಸುತ್ತಿಲ್ಲವೆಂದು ; ಅಥವಾ

(ಬಿ) ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ನಿರ್ವಹಣೆಯನ್ನು ಅದರ ಒಳರೋಗಿಗಳ ನೈತಿಕ, ಮಾನಸಿಕ ಅಥವಾ ದೈಹಿಕ ಹಿತಕ್ಕೆ ಬಾಧಕವಾಗುವ ರೀತಿಯಲ್ಲಿ ನಡೆಸಲಾಗುತ್ತಿದೆ ಎಂದು ಆ ಪ್ರಾಧಿಕಾರಕ್ಕೆ ಮನದಟ್ಟಾದರೆ, ಆ ಲೈಸೆನ್ಸನ್ನು ರದ್ದು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಲೈಸೆನ್ಸುದಾರನಿಗೆ, ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟಲ್ಲದೆ ಮಾಡತಕ್ಕುದಲ್ಲ, ಮತ್ತು ಅಂಥ ಪ್ರತಿಯೊಂದು ಆದೇಶವು ಅದರಲ್ಲಿ ಆ ಲೈಸೆನ್ಸಿನ ರದ್ದಿಯಾತಿಗಾಗಿನ ಕಾರಣಗಳನ್ನು ನಮೂದಿಸತಕ್ಕುದು ಮತ್ತು ನಿಯಮಿಸಬಹುದಾದಂತಹ ರೀತಿಯಲ್ಲಿ ಅಂಥ ಕಾರಣಗಳನ್ನು ಲೈಸೆನ್ಸುದಾರನಿಗೆ ತಿಳಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವು, ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ವರ್ಗಾವಣೆ ಮಾಡತಕ್ಕುದು ಎಂಬ ನಿರ್ದೇಶನವನ್ನೊಳಗೊಂಡಿರತಕ್ಕುದು, ಮತ್ತು ಅಂತಹ ವರ್ಗಾವಣೆಯು ಇತ್ಯರ್ಥದಲ್ಲಿರುವಾಗ ಅಂಥ ರೋಗಿಗಳ ರಕ್ಷಣೆ ಮತ್ತು ಅಭಿರಕ್ಷೆಯ ಬಗ್ಗೆ (ನಿರ್ದೇಶನಗಳ ರೂಪದಲ್ಲಿನ ಉಪಬಂಧಗಳನ್ನು ಒಳಗೊಂಡು) ಅಂಥ ಉಪಬಂಧವನ್ನೂ ಸಹ ಒಳಗೊಂಡಿರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಿರುವ ಪ್ರತಿಯೊಂದು ಆದೇಶವು,-

(ಎ) 12ನೇ ಪ್ರಕರಣದ ಮೇರೆಗೆ ಅಂಥ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಮಾಡಿಕೊಂಡಿರದಿದ್ದಲ್ಲಿ, ಅಂಥ ಅಪೀಲಿಗಾಗಿ ನಿಯಮಿಸಿದ ಅವಧಿಯು ಮುಕ್ತಾಯಗೊಂಡ ಕೂಡಲೇ; ಮತ್ತು

(ಬಿ) ಅಂಥ ಅಪೀಲನ್ನು ಮಾಡಿಕೊಂಡಿರುವಲ್ಲಿ ಮತ್ತು ಅದನ್ನು ವಜಾ ಮಾಡಲಾಗಿರುವಲ್ಲಿ, ಹಾಗೆ ವಜಾ ಮಾಡಿದ ಆದೇಶದ ದಿನಾಂಕದಿಂದ

-ಜಾರಿಗೆ ಬರತಕ್ಕುದು.

12. ಅಪೀಲು:- (1) ಲೈಸೆನ್ಸನ್ನು ಮಂಜೂರು ಮಾಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಲೈಸೆನ್ಸನ್ನು ರದ್ದು ಮಾಡುವ ಲೈಸೆನ್ಸು ಕೊಡುವ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ರಾಜ್ಯ ಸರ್ಕಾರವು ನಿಯಮಿಸಲಾದ ಅವಧಿಯು ಮುಕ್ತಾಯವಾದ ತರುವಾಯ ಸಲ್ಲಿಸಿದ ಅಪೀಲನ್ನು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದ ಪ್ರತಿಬಂಧಿತನಾಗಿದ್ದನೆಂದು ಅದಕ್ಕೆ ಮನದಟ್ಟಾದರೆ ಪುರಸ್ಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮಾಡಿಕೊಳ್ಳತಕ್ಕುದು ಮತ್ತು ಅದರೊಂದಿಗೆ ಅಂಥ ಫೀಜು ಇರತಕ್ಕುದು.

13. ಮನೋರೋಗ ಆಸ್ಪತ್ರೆಗಳ ಮತ್ತು ಮನೋರೋಗ ನರ್ಸಿಂಗ್ ಹೋಮ್‌ಗಳ ಪರಿಶೀಲನೆ ಮತ್ತು ರೋಗಿಗಳ ಸಂದರ್ಶನ:- (1) ಪರಿಶೀಲನಾಧಿಕಾರಿಯು, ಯಾವುದೇ ಕಾಲದಲ್ಲಿ ಯಾವುದೇ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಪರಿಶೀಲನೆಗಾಗಿ ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ಇಟ್ಟಿರಬೇಕಾದಂಥ ಯಾವುವೇ ದಾಖಲೆಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು :

ಪರಂತು, ಹಾಗೆ ಪರಿಶೀಲಿಸಿದ ರೋಗಿಯ ಯಾವುದೇ ವೈಯಕ್ತಿಕ ದಾಖಲೆಗಳನ್ನು (3)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಹೊರತು ರಹಸ್ಯವಾಗಿ ಇಡತಕ್ಕುದು.

(2) ಪರಿಶೀಲನಾಧಿಕಾರಿಯು ಅಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುವ ಮತ್ತು ರಕ್ಷಣೆಯಲ್ಲಿರುವ ಯಾವನೇ ರೋಗಿಯನ್ನು,-

(ಎ) ಆ ಚಿಕಿತ್ಸೆ ಮತ್ತು ರಕ್ಷಣೆಯ ಬಗ್ಗೆ ಅಂಥ ರೋಗಿಯು ಮಾಡಿಕೊಂಡಿರುವ ಅಥವಾ ಅವನ ಪರವಾಗಿ ಮಾಡಿಕೊಳ್ಳಲಾಗಿರುವ ಯಾವುದೇ ದೂರಿನ ಬಗ್ಗೆ ವಿಚಾರಣೆ ಮಾಡುವ ಉದ್ದೇಶಕ್ಕಾಗಿ; ಅಥವಾ

(ಬಿ) ಯಾವನೇ ಒಳರೋಗಿಯು ಸರಿಯಾದ ಚಿಕಿತ್ಸೆ ಮತ್ತು ರಕ್ಷಣೆಯನ್ನು ಪಡೆಯುತ್ತಿಲ್ಲವೆಂದು ಪರಿಶೀಲನಾಧಿಕಾರಿಯು ನಂಬಲು ಕಾರಣವಿರುವ ಯಾವುದೇ ಸಂದರ್ಭದಲ್ಲಿ

-ಗುಟ್ಟಾಗಿ ಸಂದರ್ಶಿಸಬಹುದು.

(3) ಪರಿಶೀಲನಾಧಿಕಾರಿಗೆ, ಮನೋರೋಗ ಆಸ್ಪತೆಯಲ್ಲಿನ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿನ ಯಾವನೇ ಒಳರೋಗಿಯು ಸರಿಯಾದ ಚಿಕಿತ್ಸೆ ಮತ್ತು ರಕ್ಷಣೆಯನ್ನು ಪಡೆಯುತ್ತಿಲ್ಲವೆಂದು ಮನದಟ್ಟಾದಲ್ಲಿ, ಅವನು ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ ಆ ವಿಷಯವನ್ನು ವರದಿ ಮಾಡಬಹುದು, ಮತ್ತು ಆ ತರುವಾಯ ಲೈಸೆನ್ಸು ಕೊಡುವ ಪ್ರಾಧಿಕಾರವು ಆ ಮನೋರೋಗ ಆಸ್ಪತ್ರೆಯ ಅಥವಾ ಸಂದರ್ಭಾನುಸಾರ ಆ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಅಥವಾ ಲೈಸೆನ್ಸುದಾರನಿಗೆ ಅದು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನವನ್ನು ಕೊಡಬಹುದು ಮತ್ತು ಪ್ರಭಾರದಲ್ಲಿರುವ ಅಂಥ ಪ್ರತಿಯೊಬ್ಬ ವೈದ್ಯಕೀಯ ಅಧಿಕಾರಿಯು ಅಥವಾ ಲೈಸೆನ್ಸುದಾರನು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧನಾಗಿರತಕ್ಕುದು.

14. ಹೊರ ರೋಗಿಗಳ ಚಿಕಿತ್ಸೆ:- ಯಾವ ವ್ಯಕ್ತಿಯ ಪರಿಸ್ಥಿತಿಯು ಒಳರೋಗಿ ಎಂದು ಅವನನ್ನು ಸೇರಿಸಿಕೊಳ್ಳಲು ಸಮರ್ಥಿಸುವುದಿಲ್ಲವೋ ಅಥವಾ ಯಾರು ತತ್ಕಾಲದಲ್ಲಿ ಒಳ ರೋಗಿ ಎಂದು ಚಿಕಿತ್ಸೆ ಪಡೆಯುತ್ತಿಲ್ಲವೋ ಆ ಪ್ರತಿಯೊಬ್ಬ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ನಿಯಮಿಸಬಹುದಾದಂಥ ಸೌಲಭ್ಯಗಳಿಗಾಗಿ ಪ್ರತಿಯೊಂದು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ವ್ಯವಸ್ಥೆಯನ್ನು ಮಾಡತಕ್ಕುದು.

## ಅಧ್ಯಾಯ- IV

### ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಪ್ರವೇಶ

### ಮತ್ತು ಅಲ್ಲಿ ತಡೆಹಿಡಿದಿಡುವುದು

### ಭಾಗ - I

### ಸ್ವಇಚ್ಛೆಯ ಆಧಾರದ ಮೇಲೆ ಪ್ರವೇಶ

15. ಸ್ವಇಚ್ಛಾ ರೋಗಿ ಎಂದು ಪ್ರವೇಶ ಪಡೆಯುವುದಕ್ಕಾಗಿ ಪ್ರಾಪ್ತ ವಯಸ್ಕನಿಂದ ಕೋರಿಕೆ:- ಯಾರು ತಾನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯಾಗಿರುವುದಾಗಿ ಪರ್ಯಾಲೋಚಿಸುವನೋ ಮತ್ತು ಚಿಕಿತ್ಸೆಗಾಗಿ ಯಾವುದೇ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಪ್ರವೇಶವನ್ನು ಪಡೆಯಲು ಇಚ್ಛಿಸುವನೋ ಆ ಯಾವನೇ ವ್ಯಕ್ತಿಯು (ಅಪ್ರಾಪ್ತ ವಯಸ್ಕನಾಗಿರದ) ಸ್ವಇಚ್ಛೆಯ ರೋಗಿಯಾಗಿ ಸೇರಿಕೊಳ್ಳುವುದಕ್ಕಾಗಿ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯನ್ನು ಕೋರಿಕೊಳ್ಳಬಹುದು.

16. ಪ್ರತಿಪಾಲಿತನ ಪ್ರವೇಶಕ್ಕಾಗಿ ಪಾಲಕನಿಂದ ಕೋರಿಕೆ:- ಅಪ್ರಾಪ್ತ ವಯಸ್ಕನ ಪಾಲಕನು ಅಂಥ ಅಪ್ರಾಪ್ತ ವಯಸ್ಕನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯಾಗಿರುವುದಾಗಿ ಪರ್ಯಾಲೋಚಿಸುವಲ್ಲಿ ಮತ್ತು ಚಿಕಿತ್ಸೆಗಾಗಿ ಅಂಥ ಅಪ್ರಾಪ್ತ ವಯಸ್ಕನನ್ನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಲು ಇಚ್ಛಿಸುವಲ್ಲಿ ಅವನು ಅಂಥ ಅಪ್ರಾಪ್ತ ವಯಸ್ಕನನ್ನು ಸ್ವಇಚ್ಛಾ ರೋಗಿ ಎಂದು ಸೇರಿಸಿಕೊಳ್ಳುವುದಕ್ಕಾಗಿ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯನ್ನು ಕೋರಬಹುದು.

17. ಸ್ವಇಚ್ಛಾ ರೋಗಿಗಳ ಪ್ರವೇಶ ಮತ್ತು ಅದಕ್ಕೆ ಸಂಬಂಧಿಸಿದಂತೆ ನಿಯಂತ್ರಣ:- (1) 15ನೇ ಪ್ರಕರಣದ ಅಥವಾ 16ನೇ ಪ್ರಕರಣದ ಮೇರೆಗೆ ಕೋರಿಕೆಯನ್ನು ಸ್ವೀಕರಿಸಿದ ಮೇಲೆ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಇಪ್ಪತ್ತನಾಲ್ಕು ಗಂಟೆಗಳನ್ನು ಮೀರದ ಅವಧಿಯೊಳಗೆ ಅವನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡತಕ್ಕುದು ಮತ್ತು ಅರ್ಜಿದಾರನು ಅಥವಾ ಸಂದರ್ಭಾನುಸಾರ, ಆ ಅಪ್ರಾಪ್ತ ವಯಸ್ಕನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿ ಎಂದು ಚಿಕಿತ್ಸೆ ಪಡೆಯುವುದು ಅಗತ್ಯವೆಂದು ಮನದಟ್ಟಾದರೆ, ಅವನು ಅಂಥ ಅರ್ಜಿದಾರನನ್ನು ಅಥವಾ ಸಂದರ್ಭಾನುಸಾರ ಆ ಅಪ್ರಾಪ್ತ ವಯಸ್ಕನನ್ನು ಸ್ವಇಚ್ಛಾರೋಗಿ ಎಂದು ಅದರಲ್ಲಿ ಸೇರಿಸಿಕೊಳ್ಳಬಹುದು.

(2) ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಿಕೊಳ್ಳಲಾದ ಪ್ರತಿಯೊಬ್ಬ ಸ್ವಇಚ್ಛಾ ರೋಗಿಯು ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಅಥವಾ ಲೈಸೆನ್ಸುದಾರನು ರಚಿಸಬಹುದಾದಂಥ ವಿನಿಯಮಗಳನ್ನು ಪಾಲಿಸಲು ಬದ್ಧನಾಗಿರತಕ್ಕುದು.

18. ಸ್ವಇಚ್ಛಾ ರೋಗಿಗಳ ಬಿಡುಗಡೆ:- (1) ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು,-

(ಎ) ಯಾವನೇ ಸ್ವಇಚ್ಛಾ ರೋಗಿಯು; ಮತ್ತು

(ಬಿ) ಅವನು ಅಪ್ರಾಪ್ತ ವಯಸ್ಕ ಸ್ವಇಚ್ಛಾ ರೋಗಿಯಾಗಿದ್ದರೆ, ಆ ರೋಗಿಯ ಪಾಲಕನು

- ಈ ಬಗ್ಗೆ ಮಾಡಿಕೊಂಡ ಕೋರಿಕೆಯ ಮೇಲೆ, (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು ಅಂಥ ಕೋರಿಕೆಯನ್ನು ಸ್ವೀಕರಿಸಿದ 24 ಗಂಟೆಗಳ ಅವಧಿಯೊಳಗೆ ಆ ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್ ಹೋಮಿನಿಂದ ರೋಗಿಯನ್ನು ಬಿಡುಗಡೆ ಮಾಡತಕ್ಕುದು.

(2) ಯಾವುದೇ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿ ಎಂದು ಪ್ರವೇಶ ಪಡೆದಿರುವ ಅಪ್ರಾಪ್ತ ವಯಸ್ಕ ಸ್ವಇಚ್ಛಾ ರೋಗಿಯು ಪ್ರಾಪ್ತ ವಯಸ್ಕನಾದರೆ, ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಆದಷ್ಟು ಬೇಗ ರೋಗಿಗೆ ಅವನು ಪ್ರಾಪ್ತ ವಯಸ್ಕನಾಗಿರುವ ಬಗ್ಗೆ ತಿಳಿಸತಕ್ಕುದು ಮತ್ತು ಅಂಥ ಸೂಚನೆಯನ್ನು

ಕೊಟ್ಟ ಒಂದು ತಿಂಗಳ ಅವಧಿಯೊಳಗೆ ಆ ವ್ಯಕ್ತಿಯು ಒಳರೋಗಿ ಎಂದು ತನ್ನನ್ನು ಮುಂದುವರಿಸುವುದಕ್ಕಾಗಿ ಕೋರಿಕೆಯನ್ನು ಮಾಡಿಕೊಂಡ ಹೊರತು, ಅವನನ್ನು ಬಿಡುಗಡೆ ಮಾಡತಕ್ಕುದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಒಳರೋಗಿ ಎಂದು ತನ್ನನ್ನು ಮುಂದುವರಿಸುವುದಕ್ಕಾಗಿ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಯಾವುದೇ ಕೋರಿಕೆಯನ್ನು ಮಾಡಿಕೊಳ್ಳದಿದ್ದರೆ, ಅವನನ್ನು (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಸದರಿ ಅವಧಿಯು ಮುಕ್ತಾಯವಾದ ಮೇಲೆ ಬಿಡುಗಡೆ ಮಾಡತಕ್ಕುದು.

(3) (1)ನೇ ಉಪಪ್ರಕರಣದಲ್ಲಿ ಅಥವಾ 2ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಸ್ವಇಚ್ಛಾರೋಗಿಯನ್ನು ಬಿಡುಗಡೆ ಮಾಡುವುದು ಅಂಥ ಸ್ವಇಚ್ಛೆಯ ರೋಗಿಯ ಹಿತ ದೃಷ್ಟಿಯಿಂದ ಸರಿಯಲ್ಲವೆಂದು ಮನದಟ್ಟಾದರೆ ಅವನು, (1)ನೇ ಉಪಪ್ರಕರಣದ ಮೇರೆಗಿನ ಕೋರಿಕೆಯನ್ನು ಸ್ವೀಕರಿಸಿದ ಎಪ್ಪತ್ತೆರಡು ಗಂಟೆಗಳೊಳಗೆ ಅಥವಾ ಆ ಉಪಪ್ರಕರಣದಲ್ಲಿ ನಮೂದು ಮಾಡಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸ್ವಇಚ್ಛಾ ರೋಗಿಯು (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಕೋರಿಕೆಯನ್ನು ಮಾಡಿಕೊಂಡಿರದಿದ್ದರೆ, ಅಂಥ ಮುಕ್ತಾಯದ ಎಪ್ಪತ್ತೆರಡು ಗಂಟೆಗಳೊಳಗೆ ಇಬ್ಬರು ವೈದ್ಯಕೀಯ ಅಧಿಕಾರಿಗಳನ್ನೊಳಗೊಂಡ ಮಂಡಲಿಯನ್ನು ರಚಿಸತಕ್ಕುದು ಮತ್ತು ಅಂಥ ಸ್ವಇಚ್ಛಾ ರೋಗಿಗೆ ಇನ್ನೂ ಹೆಚ್ಚಿನ ಚಿಕಿತ್ಸೆಯು ಅವಶ್ಯಕತೆ ಇದೆಯೋ ಹೇಗೆ ಎಂಬ ಬಗ್ಗೆ ಮಂಡಲಿಯ ಅಭಿಪ್ರಾಯವನ್ನು ಕೋರತಕ್ಕುದು ಮತ್ತು ಆ ಮಂಡಲಿಯು ಅಂಥ ಸ್ವಇಚ್ಛಾ ರೋಗಿಗೆ ಆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಇನ್ನೂ ಹೆಚ್ಚಿನ ಚಿಕಿತ್ಸೆಯು ಅವಶ್ಯವಾಗಿದೆ ಎಂದು ಅಭಿಪ್ರಾಯಪಟ್ಟರೆ, ಆ ವೈದ್ಯಕೀಯ ಅಧಿಕಾರಿಯು ಅಂಥ ಸ್ವಇಚ್ಛಾರೋಗಿಯನ್ನು ಬಿಡುಗಡೆ ಮಾಡತಕ್ಕುದಲ್ಲ. ಆದರೆ, ಒಂದು ಬಾರಿಗೆ ತೊಂಬತ್ತು ದಿವಸಗಳನ್ನು ಮೀರದ ಅವಧಿಯವರೆಗೆ ಅವನ ಚಿಕಿತ್ಸೆಯನ್ನು ಮುಂದುವರಿಸತಕ್ಕುದು.

## ಭಾಗ - II

## ವಿಶೇಷ ಸಂದರ್ಭಗಳಲ್ಲಿ ಪ್ರವೇಶ

19. ಕೆಲವು ವಿಶೇಷ ಸಂದರ್ಭಗಳಲ್ಲಿ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪ್ರವೇಶ:- (1) ಯಾರು ಸ್ವಇಚ್ಛಾ ರೋಗಿ ಎಂದು ಪ್ರವೇಶಕ್ಕಾಗಿ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವುದಿಲ್ಲವೋ ಅಥವಾ ವ್ಯಕ್ತಪಡಿಸಲು ಅಸಮರ್ಥನಾಗಿರುವನೋ ಆ ಯಾವನೇ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು , ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸಂಬಂಧಿಕನು ಅಥವಾ ಸ್ನೇಹಿತನು ಆ ಬಗ್ಗೆ ಮಾಡಿಕೊಂಡ ಅರ್ಜಿಯ ಮೇಲೆ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಹಿತದೃಷ್ಟಿಯಿಂದ ಅವನನ್ನು ಸೇರಿಸಿಕೊಳ್ಳುವುದು ಅವಶ್ಯವೆಂದು ಮನದಟ್ಟಾದರೆ ಆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಿಕೊಳ್ಳಬಹುದು ಮತ್ತು ಅಲ್ಲಿ ಒಳರೋಗಿ ಎಂದು ಇಡಬಹುದು:

ಪರಂತು, ಒಳರೋಗಿ ಎಂದು ಹಾಗೆ ಸೇರಿಸಿಕೊಳ್ಳಲಾದ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ಇತರ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ತೊಂಬತ್ತು ದಿವಸಗಳನ್ನು ಮೀರುವ ಅವಧಿಯವರೆಗೆ ಒಳರೋಗಿ ಎಂದು ಆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಇಡತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯು ನಿಯಮಿಸಿದ ನಮೂನೆಯಲ್ಲಿರತಕ್ಕುದು ಮತ್ತು ಅದರೊಂದಿಗೆ ಅಂಥ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪರಿಸ್ಥಿತಿಯು ಅವನನ್ನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿ ಎಂದು ಪರಿವೀಕ್ಷಣೆಯಲ್ಲಿ ಮತ್ತು ಚಿಕಿತ್ಸೆಯಲ್ಲಿ ಇಡಬೇಕಾಗುತ್ತದೆ ಎಂಬ ಬಗ್ಗೆ ಇಬ್ಬರು ಮೆಡಿಕಲ್ ಪ್ರಾಕ್ಟೀಷನರ್‌ಗಳಿಂದ ಎರಡು ವೈದ್ಯಕೀಯ ಪ್ರಮಾಣ ಪತ್ರಗಳು ಇರತಕ್ಕುದು ಅವರ ಪೈಕಿ ಒಬ್ಬನು ಸರ್ಕಾರದ ಸೇವೆಯಲ್ಲಿರುವ ಮೆಡಿಕಲ್ ಪ್ರಾಕ್ಟೀಷನರ್‌ನಾಗಿರತಕ್ಕುದು:

ಪರಂತು, ಸಂಬಂಧಪಟ್ಟ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, ಅಂಥ ಪ್ರಮಾಣ ಪತ್ರಗಳನ್ನು ಅಗತ್ಯಪಡಿಸುವುದಕ್ಕೆ ಬದಲು ಆಸ್ಪತ್ರೆಯಲ್ಲಿ ಅಥವಾ ನರ್ಸಿಂಗ್ ಹೋಮಿನಲ್ಲಿ ಕೆಲಸ ಮಾಡುತ್ತಿರುವ ಇಬ್ಬರು ಮೆಡಿಕಲ್ ಪ್ರಾಕ್ಟೀಷನರು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪರೀಕ್ಷಿಸುವುದು ಸರಿಯೆಂದು ಆತನಿಗೆ ಮನದಟ್ಟಾದರೆ ಹಾಗೆ ಪರೀಕ್ಷಿಸುವಂತೆ ಮಾಡಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಸೇರಿಸಿಕೊಳ್ಳಲಾದ ಯಾವನೇ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯು ಅಥವಾ ಅವನ ಸಂಬಂಧಿಯು ಅಥವಾ ಸ್ನೇಹಿತನು, ಅವನ ಬಿಡುಗಡೆಗಾಗಿ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು ಮತ್ತು ಆ ಮ್ಯಾಜಿಸ್ಟ್ರೇಟನು ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಯಾರ ಕೋರಿಕೆಯಂತೆ ಅವನನ್ನು ಸೇರಿಸಿಕೊಳ್ಳಲಾಯಿತೋ ಆ ವ್ಯಕ್ತಿಗೆ ನೋಟೀಸನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ವಜಾ ಮಾಡಬಹುದು.

(4) ಹಿಂದೆ ಹೇಳಿದ ಉಪಪ್ರಕರಣದ ಉಪಬಂಧಗಳು, ಯಾವ ಮ್ಯಾಜಿಸ್ಟ್ರೇಟನ ಮುಂದೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪ್ರಕರಣವನ್ನು ಈ ಪ್ರಕರಣದ ಮೇರೆಗೆಯಾಗಲಿ ಅಥವಾ ಯಾವುದೇ ಇತರ ಉಪಬಂಧದ ಮೇರೆಗೆ ಆಗಲಿ ತರಲಾಗಿದೆಯೋ ಆ ಮ್ಯಾಜಿಸ್ಟ್ರೇಟನು, ಈ ಅಧಿನಿಯಮದ ಸಂಬಂಧಪಟ್ಟ ಉಪಬಂಧಗಳಿಗನುಸಾರವಾಗಿ ಹಾಗೆ ಮಾಡುವುದು ಅವಶ್ಯವೆಂದು ತನಗೆ ಮನದಟ್ಟಾದರೆ ಪ್ರವೇಶದ ಆದೇಶವನ್ನು ಮಾಡಲು ಚಲಾಯಿಸಬಹುದಾದ ಅಧಿಕಾರಗಳಿಗೆ ಬಾಧಕ ಉಂಟುಮಾಡತಕ್ಕುದಲ್ಲ.

# ಭಾಗ- III

## ಪ್ರವೇಶನ ಆದೇಶ

### ಎ. ಅರ್ಜಿಗಳ ಮೇಲೆ ಪ್ರವೇಶನ ಆದೇಶಗಳು

20. ಪ್ರವೇಶನ ಆದೇಶಕ್ಕಾಗಿ ಅರ್ಜಿ:- (1) ಪ್ರವೇಶನ ಆದೇಶಕ್ಕಾಗಿ ಅರ್ಜಿಯನ್ನು,-

(ಎ) ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು; ಅಥವಾ

(ಬಿ) ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಗಂಡ, ಹೆಂಡತಿ ಅಥವಾ ಯಾವನೇ ಇತರ ಸಂಬಂಧಿಕನು

-ಮಾಡಿಕೊಳ್ಳಬಹುದು.

(2) ಮಾನಸಿಕವಾಗಿ ಅಸ್ವಸ್ಥನಾಗಿರುವ ಹಾಗೂ ತಾತ್ಕಾಲಿಕ ಚಿಕಿತ್ಸಾ ಆದೇಶದ ಮೇರೆಗೆ ಚಿಕಿತ್ಸೆಯನ್ನು ಪಡೆಯುತ್ತಿರುವ ವ್ಯಕ್ತಿಯಿರುವಂಥ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ,-

(ಎ) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಸಂದರ್ಭಾನುಸಾರ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಅವನ ಚಿಕಿತ್ಸೆಯನ್ನು ಆರು ತಿಂಗಳಿಗಿಂತ ಹೆಚ್ಚಿಗೆಯಾಗಿ ಮುಂದುವರಿಸಬೇಕಾದ ಅಗತ್ಯವಿದೆ ಎಂಬಂಥ ಸ್ವರೂಪದ ಮತ್ತು ಪ್ರಮಾಣದ ಮನೋವಿಕಾರದಿಂದ ನರಳುತ್ತಿದ್ದಾನೆಂದು; ಅಥವಾ

(ಬಿ) ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಆರೋಗ್ಯದ ಅಥವಾ ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ತಡೆದಿರಿಸತಕ್ಕುದು ಅವಶ್ಯವಾಗಿದೆ ಎಂದು ಮನದಟ್ಟಾದರೆ

-ಅವನು, ಆ ಮನೋರೋಗ ಆಸ್ಪತ್ರೆಯು ಅಥವಾ ಸಂದರ್ಭಾನುಸಾರ ಆ ಮನೋರೋಗ ನರ್ಸಿಂಗ್ ಹೋಮ್ ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿದೆಯೋ ಆ ಮ್ಯಾಜಿಸ್ಟ್ರೇಟನಿಗೆ ಸಂದರ್ಭಾನುಸಾರ ಅಂಥ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಪ್ರವೇಶನ ಆದೇಶದ ಮೇರೆಗೆ ಹಾಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ತಡೆಹಿಡಿದಿಡುವುದಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಬಹುದು.

(3) (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾಗುವ ವ್ಯಕ್ತಿಯ ಗಂಡನು ಅಥವಾ ಹೆಂಡತಿಯು ಅಥವಾ ಗಂಡನು ಅಥವಾ ಹೆಂಡತಿಯು ಇಲ್ಲದಿರುವಲ್ಲಿ, ಅಥವಾ ಆ ಗಂಡನು ಅಥವಾ ಹೆಂಡತಿಯು ಯಾವುದೇ ಕಾಯಿಲೆಯ ಕಾರಣದಿಂದ ಅಥವಾ ಭಾರತದಿಂದ ಗೈರುಹಾಜರಾಗಿರುವ ಕಾರಣದಿಂದ ಅಥವಾ ಅನ್ಯಥಾ ಆ ಅರ್ಜಿಯನ್ನು ಮಾಡಿಕೊಳ್ಳಲು ಪ್ರತಿಬಂಧಿತನಾಗಿರುವಲ್ಲಿ/ ಳಾಗಿರುವಲ್ಲಿ, ಅಂಥ ವ್ಯಕ್ತಿಯ ಯಾವನೇ ಇತರ ಸಂಬಂಧಿಕನು, ಸದರಿ ವ್ಯಕ್ತಿಯು ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಸಾಮಾನ್ಯವಾಗಿ ವಾಸಿಸುತ್ತಿರುವನೋ ಆ ಮ್ಯಾಜಿಸ್ಟ್ರೇಟನಿಗೆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಪ್ರವೇಶನ ಆದೇಶದ ಮೇರೆಗೆ ಮಾನಸಿಕವಾಗಿ ಅಸ್ವಸ್ಥನೆಂದು ಹೇಳಲಾಗಿರುವ ಆ ವ್ಯಕ್ತಿಯನ್ನು ತಡೆಹಿಡಿದಿಡುವುದಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಬಹುದು.

(4) ಮಾನಸಿಕವಾಗಿ ಅಸ್ವಸ್ಥನೆಂದು ಹೇಳಲಾಗಿರುವ ವ್ಯಕ್ತಿಯ ಗಂಡ ಅಥವಾ ಹೆಂಡತಿಯು ಅರ್ಜಿದಾರನು / ಳು ಆಗಿಲ್ಲದಿರುವಲ್ಲಿ, ಆ ಗಂಡನು ಅಥವಾ ಹೆಂಡತಿಯು ಆ ಅರ್ಜಿಯನ್ನು ಮಾಡಿಕೊಳ್ಳದೇ ಇರುವುದಕ್ಕಾಗಿನ ಕಾರಣಗಳನ್ನು ಆ ಅರ್ಜಿಯು ಒಳಗೊಂಡಿರತಕ್ಕುದು ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾಗಿರುವ ವ್ಯಕ್ತಿಯೊಂದಿಗಿನ ಅರ್ಜಿದಾರನ ಸಂಬಂಧ ಮತ್ತು ಆ ಅರ್ಜಿಯನ್ನು ಮಾಡಿಕೊಳ್ಳಲಾಗುತ್ತಿರುವಂಥ ಪರಿಸ್ಥಿತಿಗಳನ್ನು ಅದರಲ್ಲಿ ಸೂಚಿಸತಕ್ಕುದು.

(5) (i) ಅಪ್ರಾಪ್ತ ವಯಸ್ಕನಾಗಿರುವ; ಅಥವಾ

(ii) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಆ ಅರ್ಜಿಯ ದಿನಾಂಕಕ್ಕೆ ಮುಂಚಿನ ಹದಿನಾಲ್ಕು ದಿವಸಗಳೊಳಗೆ ಭೇಟಿಯಾಗಿರದ;

-ಯಾವನೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕುದಲ್ಲ.

(6) (3)ನೇ ಉಪಪ್ರಕಣದ ಮೇರೆಗಿನ ಪ್ರತಿಯೊಂದು ಅರ್ಜಿಯನ್ನು ನಿಯಮಿಸಿದ ನಮೂನೆಯಲ್ಲಿ ಮಾಡಿಕೊಳ್ಳತಕ್ಕುದು ಮತ್ತು ಅದಕ್ಕೆ ನಿಯಮಿಸಿದ ರೀತಿಯಲ್ಲಿ ರುಜು ಹಾಕತಕ್ಕುದು ಮತ್ತು ಅದನ್ನು ಸತ್ಯಾಪನೆ ಮಾಡತಕ್ಕುದು ಮತ್ತು ಅದು ಮಾನಸಿಕವಾಗಿ ಅಸ್ವಸ್ಥನೆಂದು ಹೇಳಲಾಗಿರುವ ಆ ವ್ಯಕ್ತಿಯ ಮಾನಸಿಕ ಸ್ಥಿತಿಯ ಬಗ್ಗೆ ವಿಚಾರಣೆಯನ್ನು ನಡೆಸುವುದಕ್ಕಾಗಿ ಹಿಂದೆ ಯಾವುದೇ ಅರ್ಜಿಯನ್ನು ಮಾಡಿಕೊಳ್ಳಲಾಗಿದ್ದಿತೋ ಹೇಗೆ ಎಂಬುದನ್ನು ನಿರೂಪಿಸತಕ್ಕುದು ಮತ್ತು ಅದರೊಂದಿಗೆ ಇಬ್ಬರು ಮೆಡಿಕಲ್ ಪ್ರಾಕ್ಟೀಷನರ ಎರಡು ವೈದ್ಯಕೀಯ ಪ್ರಮಾಣಪತ್ರಗಳಿರತಕ್ಕುದು, ಅವರಲ್ಲಿ ಒಬ್ಬನು ಸರ್ಕಾರದ ಸೇವೆಯಲ್ಲಿರುವ ಮೆಡಿಕಲ್ ಪ್ರಾಕ್ಟೀಷನರ್‌ನಾಗಿರತಕ್ಕುದು.

21. ವೈದ್ಯಕೀಯ ಪ್ರಮಾಣ ಪತ್ರಗಳ ನಮೂನೆ ಮತ್ತು ಅದರ ಒಳಾಂಶಗಳು:- 20ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರತಿಯೊಂದು ವೈದ್ಯಕೀಯ ಪ್ರಮಾಣಪತ್ರವು,-

(ಎ) ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ಮೆಡಿಕಲ್ ಪ್ರಾಕ್ಟೀಷನರನು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಸ್ವತಂತ್ರವಾಗಿ ಪರೀಕ್ಷಿಸಿದ್ದಾನೆಂಬ ಮತ್ತು ಅವನ ಸ್ವಂತ ಪರಿವೀಕ್ಷಣೆಗಳ ಆಧಾರದ ಮೇಲೆ ಮತ್ತು ಅವನಿಗೆ ತಿಳಿಸಿದ ವಿವರಗಳಿಂದ ಅವನ ಅಭಿಪ್ರಾಯವನ್ನು ರೂಪಿಸಿಕೊಂಡಿದ್ದಾನೆಂಬ ; ಮತ್ತು

(ಬಿ) ಅಂಥ ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗನ ಅಭಿಪ್ರಾಯದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಅಂಥ ವ್ಯಕ್ತಿಯನ್ನು ತಡೆಹಿಡಿದಿಡುವುದನ್ನು ಸಮರ್ಥಿಸುವಂಥ ಸ್ವರೂಪ ಅಥವಾ ಪ್ರಮಾಣದ ಮನೋವಿಕಾರದಿಂದ ನರಳುತ್ತಿದ್ದಾನೆಂದು ಮತ್ತು ಅಂಥ ತಡೆಹಿಡಿದಿಡುವಿಕೆಯು ಆ ವ್ಯಕ್ತಿಯ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ ಅವಶ್ಯವಾಗಿದೆಯೆಂಬ

-ನಿರೂಪಣೆಯನ್ನು ಒಳಗೊಂಡಿರತಕ್ಕುದು.

22. ಪ್ರವೇಶನ ಆದೇಶಕ್ಕಾಗಿನ ಅರ್ಜಿಯ ಮೇಲಿನ ಪ್ರಕ್ರಿಯೆ:- (1) 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಮ್ಯಾಜಿಸ್ಟ್ರೇಟನಿಗೆ,-

(i) ಮಾನಸಿಕ ಅಸ್ವಸ್ಥನಾಗಿರುವ ಆ ವ್ಯಕ್ತಿಯು ಚಿಕಿತ್ಸೆಗಾಗಿ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಅವನನ್ನು ತಡೆಹಿಡಿದಿಡುವುದು ಅವಶ್ಯವೆನ್ನಿಸುವಂಥ ಸ್ವರೂಪ ಮತ್ತು ಪ್ರಮಾಣದ ಮನೋವಿಕಾರದಿಂದ ನರಳುತ್ತಿದ್ದಾನೆಂದು; ಅಥವಾ

(ii) ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ ಅವನನ್ನು ತಡೆಹಿಡಿದಿಡುವುದು ಅವಶ್ಯವೆಂದು, ಮತ್ತು ಪ್ರಕರಣದ ಸಂದರ್ಭಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಆದೇಶವು ಸಾಕಾಗುವುದಿಲ್ಲವೆಂದು ಮತ್ತು ಪ್ರವೇಶನ ಆದೇಶವನ್ನು ಮಾಡುವುದು ಅವಶ್ಯವೆಂದು

-ಮನದಟ್ಟಾದರೆ ಅವನು ಪ್ರವೇಶನ ಆದೇಶವನ್ನು ಮಾಡಬಹುದು.

(2) 20ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಆ ಮ್ಯಾಜಿಸ್ಟ್ರೇಟನು, ಅರ್ಜಿಯಲ್ಲಿ ಮಾಡಿರುವ ನಿರೂಪಣೆಗಳನ್ನು ಮತ್ತು ವೈದ್ಯಕೀಯ ಪ್ರಮಾಣಪತ್ರಗಳಿಂದ ತಿಳಿದುಬಂದ ಮಾನಸಿಕ ಅಸ್ವಸ್ಥತೆಯ ಬಗೆಗಿನ ಸಾಕ್ಷ್ಯವನ್ನು ಪರ್ಯಾಲೋಚಿಸತಕ್ಕುದು.

(3) ಮ್ಯಾಜಿಸ್ಟ್ರೇಟನು ಇನ್ನು ಮುಂದುವರಿಯುವುದಕ್ಕಾಗಿ ಸಾಕಷ್ಟು ಕಾರಣಗಳಿವೆಯೆಂದು ಪರ್ಯಾಲೋಚಿಸಿದರೆ ಅವನು, ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಖುದ್ದಾಗಿ ಪರೀಕ್ಷಿಸುವುದು ಅವಶ್ಯವಲ್ಲ ಅಥವಾ ವಿಹಿತವಲ್ಲವೆಂದು ಯೋಚಿಸಿದ ಹೊರತು, ಪರೀಕ್ಷಿಸತಕ್ಕುದು.

(4) ಆ ಮ್ಯಾಜಿಸ್ಟ್ರೇಟನಿಗೆ ತಕ್ಷಣವೇ ಪ್ರವೇಶನ ಆದೇಶವನ್ನು ಸೂಕ್ತವಾಗಿ ಮಾಡಬಹುದೆಂದು ಮನದಟ್ಟಾದರೆ ಅವನು ಅಂಥ ಆದೇಶವನ್ನು ಮಾಡಬಹುದು ಮತ್ತು ಮ್ಯಾಜಿಸ್ಟ್ರೇಟನಿಗೆ ಹಾಗೆ ಮನದಟ್ಟಾಗದಿದ್ದರೆ ಅವನು ಅರ್ಜಿಯ ಇನ್ನೂ ಹೆಚ್ಚಿನ ಪರ್ಯಾಲೋಚನೆಗಾಗಿ ದಿನಾಂಕವನ್ನು ಗೊತ್ತುಪಡಿಸತಕ್ಕುದು ಮತ್ತು ಅವನು ಸೂಕ್ತವೆಂದು ಯೋಚಿಸುವಂತೆ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಬಗ್ಗೆ ಅಂಥ ವಿಚಾರಣೆಗಳನ್ನು ಮಾಡಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದ ನೋಟೀಸನ್ನು ಅರ್ಜಿದಾರನಿಗೆ ಮತ್ತು ಮ್ಯಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ಯಾರಿಗೆ ಅಂಥ ನೋಟೀಸನ್ನು ಕೊಡಬೇಕಾಗಿದೆಯೋ ಆ ಯಾವನೇ ಇತರ ವ್ಯಕ್ತಿಗೆ ಕೊಡತಕ್ಕುದು.

(6) ಮ್ಯಾಜಿಸ್ಟ್ರೇಟನು, ಅರ್ಜಿಯ ಇನ್ನೂ ಹೆಚ್ಚಿನ ಪರ್ಯಾಲೋಚನೆಗಾಗಿ (4)ನೇ ಉಪಪ್ರಕರಣದ ಮೇರೆಗೆ ದಿನಾಂಕವನ್ನು ಗೊತ್ತುಪಡಿಸಿದರೆ, ಆ ಅರ್ಜಿಯು ಇತ್ಯರ್ಥವಾಗುವವರೆಗೆ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಸೂಕ್ತ ರಕ್ಷಣೆ ಮತ್ತು ಅಭಿರಕ್ಷೆಗಾಗಿ ಅವನು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು.

(7) (4)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಮ್ಯಾಜಿಸ್ಟ್ರೇಟನು ಗೊತ್ತುಪಡಿಸಬಹುದಾದಂಥ ತರುವಾಯದ ದಿನಾಂಕದಂದು, ಅವನು -

(i) ಆ ಅರ್ಜಿದಾರನ;

(ii) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ (ಮ್ಯಾಜಿಸ್ಟ್ರೇಟನು ತನ್ನ ವಿವೇಚನಾನುಸಾರ ಅನ್ಯಥಾ ನಿರ್ದೇಶಿಸಿದ ಹೊರತು);

(iii) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ತನ್ನನ್ನು ಪ್ರತಿನಿಧಿಸಲು ನೇಮಕ ಮಾಡಬಹುದಾದ ವ್ಯಕ್ತಿಯ; ಮತ್ತು

(iv) ಆ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಯೋಚಿಸುವಂಥ ಇತರ ವ್ಯಕ್ತಿಯ

- ಸಮಕ್ಷಮದಲ್ಲಿ ರಹಸ್ಯವಾಗಿ ಆ ಅರ್ಜಿಯನ್ನು ಪರ್ಯಾಲೋಚಿಸಲು ಮುಂದುವರಿಯತಕ್ಕುದು ಮತ್ತು ಯಾರಿಗೆ ಸಂಬಂಧಪಟ್ಟಂತೆ ಆ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ಆ ವ್ಯಕ್ತಿಯು, ಆ ವ್ಯಕ್ತಿಯ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ, ಮನೋರೋಗ ಆಸ್ಪತ್ರೆಯಲ್ಲಿ ಅಥವಾ

ಮನೋರೋಗ ನರ್ಸಿಂಗ್ ಹೋಮಿನಲ್ಲಿ ಚಿಕಿತ್ಸೆಗಾಗಿ ಅವನನ್ನು ತಡೆಹಿಡಿದಿಡುವುದು ಅವಶ್ಯವೆನಿಸುವಂತೆ, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಅವನು ಆ ಉದ್ದೇಶಕ್ಕಾಗಿ ಪ್ರವೇಶನ ಆದೇಶವನ್ನು ಮಾಡಬಹುದು ಮತ್ತು ಅವನಿಗೆ ಹಾಗೆ ಮನದಟ್ಟಾಗದಿದ್ದರೆ, ಆ ಅರ್ಜಿಯನ್ನು ವಜಾ ಮಾಡತಕ್ಕುದು ಮತ್ತು ಯಾವುದೇ ಅಂಥ ಆದೇಶವು ಆ ಮ್ಯಾಜಿಸ್ಟ್ರೇಟನು ಸಮುಚಿತವೆಂದು ಭಾವಿಸಬಹುದಾದಂತೆ ವೈಯಕ್ತಿಕವಾಗಿ ಅರ್ಜಿದಾರನು ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸಂಪದದಿಂದ ಆ ವಿಚಾರಣೆಯ ಖರ್ಚುಗಳನ್ನು ಸಂದಾಯ ಮಾಡುವುದಕ್ಕಾಗಿ ವ್ಯವಸ್ಥೆಯನ್ನು ಮಾಡಬಹುದು.

(8) (7)ನೇ ಉಪಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ವಜಾ ಮಾಡಿದ್ದರೆ ಮ್ಯಾಜಿಸ್ಟ್ರೇಟನು ಅಂಥ ವಜಾ ಕುರಿತ ಕಾರಣಗಳನ್ನು ದಾಖಲು ಮಾಡತಕ್ಕುದು ಮತ್ತು ಆದೇಶದ ಒಂದು ಪ್ರತಿಯನ್ನು ಅರ್ಜಿದಾರನಿಗೆ ಒದಗಿಸತಕ್ಕುದು.

*ಬಿ. ಮ್ಯಾಜಿಸ್ಟ್ರೇಟನ ಮುಂದೆ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳನ್ನು ಹಾಜರುಪಡಿಸಿದ ಮೇಲೆ ಪ್ರವೇಶನ ಆದೇಶಗಳು*

23. ಮಾನಸಿಕ ಅಸ್ವಸ್ಥರಾಗಿರುವ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಪೊಲೀಸು ಅಧಿಕಾರಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು:- (1) ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಯು,-

(ಎ) ಯಾವನು ತನ್ನನ್ನು ರಕ್ಷಿಸಿಕೊಳ್ಳಲು ಅಸಮರ್ಥನಾಗಿರುವಷ್ಟರಮಟ್ಟಿಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿ ಎಂದು ನಂಬಲು ಕಾರಣವಿರುವ ಮತ್ತು, ಅವನ ಠಾಣೆಯ ಪರಿಮಿತಿಗಳೊಳಗೆ ಸ್ವೇಚ್ಛೆಯಾಗಿ ಅಲೆದಾಡುತ್ತಿರುವುದಾಗಿ ಕಂಡುಬಂದ ಯಾವನೇ ವ್ಯಕ್ತಿಯನ್ನು ಸಂರಕ್ಷಣೆಗಾಗಿ ತೆಗೆದುಕೊಳ್ಳಬಹುದು ಅಥವಾ ಹಾಗೆ ತೆಗೆದುಕೊಳ್ಳುವಂತೆ ಮಾಡಬಹುದು; ಮತ್ತು

(ಬಿ) ಮಾನಸಿಕ ಅಸ್ವಸ್ಥತೆಯ ಕಾರಣದಿಂದಾಗಿ ಅಪಾಯಕಾರಿಯಾಗಿರುವನೆಂದು ನಂಬಲು ಕಾರಣವಿರುವ, ಅವನ ಠಾಣೆಯ ಪರಿಮಿತಿಗಳೊಳಗಿರುವ ಯಾವನೇ ವ್ಯಕ್ತಿಯನ್ನು ಸಂರಕ್ಷಣೆಗಾಗಿ ತೆಗೆದುಕೊಳ್ಳತಕ್ಕುದು ಅಥವಾ ತೆಗೆದುಕೊಳ್ಳುವಂತೆ ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಸಂರಕ್ಷಣೆಗಾಗಿ ತೆಗೆದುಕೊಂಡಿರುವ ಯಾವನೇ ವ್ಯಕ್ತಿಯನ್ನು, ಆದಷ್ಟು ಬೇಗ ಅಂಥ ಸಂರಕ್ಷಣೆಗಾಗಿ ಅವನನ್ನು ತೆಗೆದುಕೊಂಡಿರುವುದಕ್ಕಾಗಿನ ಕಾರಣಗಳನ್ನು ತಿಳಿಸದೆ ಅಥವಾ ಸಂರಕ್ಷಣೆಗಾಗಿ ಆ ವ್ಯಕ್ತಿಯನ್ನು ತೆಗೆದುಕೊಳ್ಳುವ ಅಧಿಕಾರಿಯ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯು ಆ ಕಾರಣಗಳನ್ನು ತಿಳಿದುಕೊಳ್ಳಲು ಅಸಮರ್ಥನಾಗಿರುವಲ್ಲಿ ಅಂಥ ಕಾರಣಗಳನ್ನು, ಅವನ ಸಂಬಂಧಿಕರು ಅಥವಾ ಸ್ನೇಹಿತರು ಯಾರಾದರೂ ಇದ್ದರೆ, ಅವರಿಗೆ ತಿಳಿಸದೆ ಪೊಲೀಸರು ತಡೆಹಿಡಿದಿಟ್ಟಿರತಕ್ಕುದಲ್ಲ.

(3) ಈ ಪ್ರಕರಣದ ಮೇರೆಗೆ ರಕ್ಷಣೆಗಾಗಿ ತೆಗೆದುಕೊಂಡಿರುವ ಮತ್ತು ತಡೆಹಿಡಿದಿಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯನ್ನು, ಅವನನ್ನು ಅಂಥ ಸಂರಕ್ಷಣೆಗಾಗಿ ತೆಗೆದುಕೊಂಡಿರುವ ಸ್ಥಳದಿಂದ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುವ ಪ್ರಯಾಣಕ್ಕಾಗಿ ಅವಶ್ಯವಾಗಿರುವ ಕಾಲವನ್ನು ಹೊರತುಪಡಿಸಿ ಅಂಥ ಸಂರಕ್ಷಣೆಗಾಗಿ ಅವನನ್ನು ತೆಗೆದುಕೊಂಡ ಇಪ್ಪತ್ತನಾಲ್ಕು ಗಂಟೆಗಳ ಅವಧಿಯೊಳಗೆ ಅತಿ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕುದು ಮತ್ತು ಮ್ಯಾಜಿಸ್ಟ್ರೇಟನಿಂದ ಅಧಿಕಾರಪತ್ರ ಇಲ್ಲದೆ ಸದರಿ ಅವಧಿಯನ್ನು ಮೀರಿ ಅವನನ್ನು ತಡೆಹಿಡಿದಿಟ್ಟಿರತಕ್ಕುದಲ್ಲ.

24. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಹಾಜರುಪಡಿಸಿದ ಮೇಲೆ ಪ್ರಕ್ರಿಯೆ:- (1) 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ವ್ಯಕ್ತಿಯನ್ನು ಹಾಜರುಪಡಿಸಿದರೆ, ಮತ್ತು ಅವನ ಅಭಿಪ್ರಾಯದಲ್ಲಿ ಇನ್ನೂ ಮುಂದುವರಿಯುವುದಕ್ಕಾಗಿ ಸಾಕಷ್ಟು ಕಾರಣಗಳಿದ್ದರೆ, ಮ್ಯಾಜಿಸ್ಟ್ರೇಟನು,-

(ಎ) ತಿಳಿದುಕೊಳ್ಳುವ ಅವನ ಸಾಮರ್ಥ್ಯವನ್ನು ನಿರ್ಧರಿಸಲು ಆ ವ್ಯಕ್ತಿಯನ್ನು ಪರೀಕ್ಷಿಸತಕ್ಕುದು;

(ಬಿ) ಒಬ್ಬ ವೈದ್ಯಕೀಯ ಅಧಿಕಾರಿಯಿಂದ ಅವನನ್ನು ಪರೀಕ್ಷಿಸುವಂತೆ ಮಾಡತಕ್ಕುದು; ಮತ್ತು

(ಸಿ) ಅಂಥ ವ್ಯಕ್ತಿಗೆ ಸಂಬಂಧಪಟ್ಟಂತೆ ತಾನು ಅವಶ್ಯವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗಿನ ವ್ಯವಹರಣೆಗಳನ್ನು ಪೂರ್ಣಗೊಳಿಸಿದ ತರುವಾಯ ಆ ಮ್ಯಾಜಿಸ್ಟ್ರೇಟನು,-

(ಎ) ವೈದ್ಯಕೀಯ ಅಧಿಕಾರಿಯು ಅಂಥ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವುದಾಗಿ ಪ್ರಮಾಣೀಕರಿಸಿದರೆ; ಮತ್ತು

(ಬಿ) ಆ ಮ್ಯಾಜಿಸ್ಟ್ರೇಟನಿಗೆ, ಸದರಿ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯಾಗಿರುವನೆಂದು ಮತ್ತು ಆ ವ್ಯಕ್ತಿಯ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ ಅಂಥ ಆದೇಶವನ್ನು ಮಾಡುವುದು ಅವಶ್ಯವೆಂದು ಮನದಟ್ಟಾದರೆ

-ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿ ಎಂದು ಸದರಿ ವ್ಯಕ್ತಿಯನ್ನು ತಡೆಹಿಡಿದಿಟ್ಟುಕೊಳ್ಳುವುದನ್ನು ಅಧಿಕೃತಗೊಳಿಸುವ ಪ್ರವೇಶನ ಆದೇಶವನ್ನು ಮಾಡಬಹುದು:

ಪರಂತು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಯಾವನೇ ಸಂಬಂಧಿಕನು ಅಥವಾ ಸ್ನೇಹಿತನು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಚಿಕಿತ್ಸೆಗಾಗಿ, ಲೈಸೆನ್ಸು ಪಡೆದ ಯಾವುದೇ ನಿರ್ದಿಷ್ಟ ಆಸ್ಪತ್ರೆಗೆ ಅಥವಾ ನರ್ಸಿಂಗ್ ಹೋಮಿಗೆ ಕಳುಹಿಸಬೇಕೆಂದು ಇಚ್ಛಿಸಿದರೆ ಮತ್ತು ಅಂಥ ಆಸ್ಪತ್ರೆಯಲ್ಲಿ ಅಥವಾ ನರ್ಸಿಂಗ್ ಹೋಮಿನಲ್ಲಿ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ಪೋಷಣೆಯ ಖರ್ಚನ್ನು ಸಂದಾಯ ಮಾಡುವ ಬಗ್ಗೆ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾಗುವಂತೆ ಬರಹದಲ್ಲಿ ಮಾತುಕೊಟ್ಟರೆ ಆ ಮ್ಯಾಜಿಸ್ಟ್ರೇಟನು, ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಸಮ್ಮತಿಸಿದರೆ ಆ ಆಸ್ಪತ್ರೆಗೆ ಅಥವಾ ನರ್ಸಿಂಗ್ ಹೋಮಿಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಸೇರಿಸಿಕೊಳ್ಳುವುದಕ್ಕಾಗಿ ಮತ್ತು ಅದರಲ್ಲಿ ಅವನನ್ನು ತಡೆಹಿಡಿದಿಡುವುದಕ್ಕಾಗಿ ಪ್ರವೇಶನ ಆದೇಶವನ್ನು ಮಾಡತಕ್ಕುದು:

ಮತ್ತೂ ಪರಂತು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಯಾವನೇ ಸಂಬಂಧಿಕನು ಅಥವಾ ಸ್ನೇಹಿತನು, ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂಥ ಮೊಬಲಗಿಗಾಗಿ ಜಾಮೀನುದಾರರೊಂದಿಗೆ ಅಥವಾ ಅವರಿಲ್ಲದೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯನ್ನು ಸರಿಯಾಗಿ ರಕ್ಷಿಸುವೆನೆಂದು ಮತ್ತು ಅವನಿಗೆ ಅಥವಾ ಇತರರಿಗೆ ಯಾವುದೇ ಹಾನಿಯನ್ನು ಮಾಡದಂತೆ ಅವನನ್ನು ತಡೆಯುತ್ತೇನೆಂದು ಮಾತುಕೊಟ್ಟು ಬಂಧಪತ್ರವನ್ನು ಬರೆದುಕೊಟ್ಟರೆ ಆ ಮ್ಯಾಜಿಸ್ಟ್ರೇಟನು, ಪ್ರವೇಶನ ಆದೇಶವನ್ನು ಮಾಡುವುದಕ್ಕೆ ಬದಲು ಅವನನ್ನು ಅಂಥ ಸಂಬಂಧಿಕನ ಅಥವಾ ಸ್ನೇಹಿತನ ರಕ್ಷಣೆಗೆ ಒಪ್ಪಿಸಬಹುದು.

25. ಮಾನಸಿಕ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಕ್ರೂರವಾಗಿ ನಡೆಸಿಕೊಂಡು ಬರುವ ಅಥವಾ ಸರಿಯಾದ ರಕ್ಷಣೆಯಲ್ಲಿ ಮತ್ತು ನಿಯಂತ್ರಣದಲ್ಲಿರದ ಸಂದರ್ಭದಲ್ಲಿ ಆದೇಶ:- (1) ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಗೆ ತನ್ನ ಠಾಣೆಯ ಪರಿಮಿತಿಗಳೊಳಗೆ ಯಾವನೇ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿದ್ದಾನೆಂದು ಮತ್ತು ಸರಿಯಾದ ರಕ್ಷಣೆ ಮತ್ತು ನಿಯಂತ್ರಣದಲ್ಲಿಲ್ಲವೆಂದು ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪ್ರಭಾರವನ್ನು ಹೊಂದಿರುವ ಯಾವನೇ ಸಂಬಂಧಿಕನು ಅಥವಾ ಇತರ ವ್ಯಕ್ತಿಯು ಅವನನ್ನು ಹಿಂಸಿಸುತ್ತಿದ್ದಾನೆಂದು ಅಥವಾ ಉಪೇಕ್ಷಿಸುತ್ತಿದ್ದಾನೆಂದು ನಂಬಲು ಕಾರಣ ಇದ್ದರೆ ಆ ಪ್ರತಿಯೊಬ್ಬ ಅಧಿಕಾರಿಯು, ಆ ಸಂಗತಿಯನ್ನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಯಾವ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಾಸಿಸುತ್ತಿರುವನೋ ಆ ಮ್ಯಾಜಿಸ್ಟ್ರೇಟನಿಗೆ ತಕ್ಷಣವೇ ವರದಿ ಮಾಡತಕ್ಕುದು.

(2) ಯಾವನೇ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿದ್ದಾನೆಂದು ಮತ್ತು ಅವನು ಸರಿಯಾದ ರಕ್ಷಣೆ ಮತ್ತು ನಿಯಂತ್ರಣದಲ್ಲಿಲ್ಲವೆಂದು ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪ್ರಭಾರವನ್ನು ಹೊಂದಿರುವ ಯಾವನೇ ಸಂಬಂಧಿಕನು ಅಥವಾ ಇತರೇ ವ್ಯಕ್ತಿಯು ಅವನನ್ನು ಹಿಂಸಿಸುತ್ತಿದ್ದಾನೆಂದು ಅಥವಾ ಉಪೇಕ್ಷಿಸುತ್ತಿದ್ದಾನೆಂದು ನಂಬಲು ಯಾವನೇ ಖಾಸಗಿ ವ್ಯಕ್ತಿಗೆ ಕಾರಣ ಇದ್ದರೆ, ಆ ವ್ಯಕ್ತಿಯು ಆ ಸಂಗತಿಯನ್ನು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯು ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಾಸಿಸುತ್ತಿರುವನೋ ಆ ಮ್ಯಾಜಿಸ್ಟ್ರೇಟನಿಗೆ ವರದಿ ಮಾಡಬಹುದು.

(3) ಪೊಲೀಸ್ ಅಧಿಕಾರಿಯ ವರದಿಯ ಮೇಲೆ ಅಥವಾ ಯಾವನೇ ಇತರ ವ್ಯಕ್ತಿಯಿಂದ ಪಡೆದಿರುವ ವರದಿ ಅಥವಾ ಮಾಹಿತಿಯ ಮೇಲೆ ಅಥವಾ ಅನ್ಯಥಾ ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಮಾನಸಿಕ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯು ಸರಿಯಾದ ರಕ್ಷಣೆ ಮತ್ತು ನಿಯಂತ್ರಣದಲ್ಲಿಲ್ಲವೆಂದು ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪ್ರಭಾರವನ್ನು ಹೊಂದಿರುವ ಯಾವನೇ ಸಂಬಂಧಿಕನು ಅಥವಾ ಇತರೆ ವ್ಯಕ್ತಿಯು ಅವನನ್ನು ಹಿಂಸಿಸುತ್ತಿದ್ದಾನೆ ಅಥವಾ ಉಪೇಕ್ಷಿಸುತ್ತಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಕಂಡುಬಂದರೆ, ಆ ಮ್ಯಾಜಿಸ್ಟ್ರೇಟನು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ತನ್ನ ಮುಂದೆ ಹಾಜರುಪಡಿಸುವಂತೆ ಮಾಡಬಹುದು, ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪ್ರಭಾರವನ್ನು ಹೊಂದಿರುವ ಅಥವಾ ಹೊಂದಿರಬೇಕಾದ ಅಂಥ ಸಂಬಂಧಿಕನನ್ನು ಅಥವಾ ಇತರ ವ್ಯಕ್ತಿಯನ್ನು ಸಮನು ಮಾಡಬಹುದು.

(4) ಅಂಥ ಸಂಬಂಧಿಕನು ಅಥವಾ ಯಾವನೇ ಇತರ ವ್ಯಕ್ತಿಯು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿದ್ದರೆ ಆ ಮ್ಯಾಜಿಸ್ಟ್ರೇಟನು ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಗೆ ಸರಿಯಾದ ರಕ್ಷಣೆಯನ್ನು ಕೊಡಲು ಆ ಸಂಬಂಧಿಕನನ್ನು ಅಥವಾ ಇತರ ವ್ಯಕ್ತಿಯನ್ನು ಆದೇಶದ ಮೂಲಕ ಅಗತ್ಯ ಪಡಿಸಬಹುದು ಮತ್ತು ಅಂಥ ಸಂಬಂಧಿಕನು ಅಥವಾ ಇತರ ವ್ಯಕ್ತಿಯು ಸದರಿ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ಉಪೇಕ್ಷಿಸಿದಲ್ಲಿ ಅವನು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(5) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ಯಾವನೇ ವ್ಯಕ್ತಿಯು ಇಲ್ಲದಿದ್ದರೆ, ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ವ್ಯಕ್ತಿಯು ಅಂಥ ವ್ಯಕ್ತಿಯನ್ನು ಪೋಷಿಸಲು ನಿರಾಕರಿಸಿದರೆ ಅಥವಾ ಉಪೇಕ್ಷಿಸಿದರೆ, ಅಥವಾ ಯಾವುದೇ ಇತರ ಕಾರಣಕ್ಕಾಗಿ ಆ ಮ್ಯಾಜಿಸ್ಟ್ರೇಟನು ಹಾಗೆ ಮಾಡುವುದು ಸೂಕ್ತವೆಂದು ಯೋಚಿಸಿದರೆ ಅವನು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ತನ್ನ ಮುಂದೆ ಹಾಜರುಪಡಿಸುವಂತೆ ಮಾಡಬಹುದು ಮತ್ತು (4)ನೇ ಉಪಪ್ರಕರಣದ ಮೇರೆಗೆ ಕೈಗೊಳ್ಳಬಹುದಾದ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಅವನು 24ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಅಂಥ ವ್ಯಕ್ತಿಯನ್ನು 23ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ತನ್ನ ಮುಂದೆ ಹಾಜರುಪಡಿಸಲಾಗಿದ್ದಿದ್ದರೆ ಹೇಗೋ ಹಾಗೆ ಮುಂದುವರಿಯಬಹುದು.

*ಸಿ. ಮಾನಸಿಕವಾಗಿ ಅಸ್ವಸ್ಥರಾಗಿರುವ ಕೆಲವು ವ್ಯಕ್ತಿಗಳ ಪ್ರವೇಶ ಮತ್ತು ತಡೆಹಿಡಿದಿಡುವಿಕೆಗೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಉಪಬಂಧಗಳು*

26. ನ್ಯಾಯ ವಿಚಾರಣೆಯ ತರುವಾಯ ಒಳರೋಗಿಯಾಗಿ ಪ್ರವೇಶ:-ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಕಂಡುಬರುವ ಯಾವನೇ ವ್ಯಕ್ತಿಗೆ ಸಂಬಂಧಿಸಿದಂತೆ IVನೇ ಅಧ್ಯಾಯದ ಮೇರೆಗಿನ ನ್ಯಾಯ ವಿಚಾರಣೆಯನ್ನು ನಡೆಸುತ್ತಿರುವ ಯಾವುದೇ ಜಿಲ್ಲಾ ನ್ಯಾಯಾಲಯವು ಅಂಥ ವ್ಯಕ್ತಿಯ ಹಿತದೃಷ್ಟಿಯಿಂದ ಅಂಥ ವ್ಯಕ್ತಿಯನ್ನು ಒಳರೋಗಿ ಎಂದು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಿಕೊಳ್ಳುವುದು ಮತ್ತು ಅಲ್ಲಿ ಇಟ್ಟುಕೊಳ್ಳುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ ಅದು, ಆದೇಶದ ಮೂಲಕ, ಹಾಗೆ ನಿರ್ದೇಶಿಸಬಹುದು ಮತ್ತು ಆ ಜಿಲ್ಲಾ ನ್ಯಾಯಾಲಯವು ಅಂಥ ಪ್ರತಿಯೊಂದು ಆದೇಶವನ್ನು ಕಾಲಕಾಲಕ್ಕೆ ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

27. ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿಯ ಪ್ರವೇಶ ಮತ್ತು ತಡೆಹಿಡಿದಿಡುವಿಕೆ:-ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿಯನ್ನು ಯಾವುದೇ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸೇರಿಸಿಕೊಳ್ಳುವುದನ್ನು ನಿರ್ದೇಶಿಸುವಂಥ ಬಂದಿಗಳ ಅಧಿನಿಯಮ, 1900 (1900ರ 3)ರ 30ನೇ ಪ್ರಕರಣದ ಮೇರೆಗಿನ ಅಥವಾ ವಾಯುಸೇನಾ ಅಧಿನಿಯಮ, 1950 (1950ರ 45)ರ 144ನೇ ಪ್ರಕರಣದ ಮೇರೆಗಿನ ಅಥವಾ ಸೇನಾ ಅಧಿನಿಯಮ, 1950 (1950ರ 46)ರ 145ನೇ ಪ್ರಕರಣದ ಮೇರೆಗಿನ ಅಥವಾ ನೌಕಾ ಅಧಿನಿಯಮ, 1957 (1957ರ 62)ರ 143ನೇ ಪ್ರಕರಣದ ಅಥವಾ 144ನೇ ಪ್ರಕರಣದ ಮೇರೆಗಿನ, ಅಥವಾ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 330ನೇ ಪ್ರಕರಣದ ಅಥವಾ 335ನೇ ಪ್ರಕರಣದ ಮೇರೆಗಿನ ಒಂದು ಆದೇಶವು, ಅಂಥ ವ್ಯಕ್ತಿಯನ್ನು ತಡೆಹಿಡಿದಿಡುವುದಕ್ಕಾಗಿ ಯಾವ ಆಸ್ಪತ್ರೆಗೆ ಅಥವಾ ಸಂದರ್ಭಾನುಸಾರ, ಯಾವ ನರ್ಸಿಂಗ್ ಹೋಮ್‌ಗೆ ಅಥವಾ ಯಾವುದೇ ಇತರ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಕಾನೂನುಬದ್ಧವಾಗಿ ವರ್ಗಾಯಿಸಬಹುದೋ ಆ ಆಸ್ಪತ್ರೆಯಲ್ಲಿ ಅಥವಾ ನರ್ಸಿಂಗ್ ಹೋಮ್‌ನಲ್ಲಿ ಅಥವಾ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಅಂಥ ವ್ಯಕ್ತಿಯನ್ನು ಸೇರಿಸಿಕೊಳ್ಳಲು ಸಾಕಷ್ಟು ಅಧಿಕಾರವಾಗಿರತಕ್ಕುದು.

28. ವೈದ್ಯಕೀಯ ಅಧಿಕಾರಿಯು ಕೊಟ್ಟ ವರದಿಯು ಇತ್ಯರ್ಥದಲ್ಲಿರುವಾಗ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ತಡೆಹಿಡಿದಿಟ್ಟುಕೊಳ್ಳುವುದು:- (1) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ಯಾವನೇ ವ್ಯಕ್ತಿಯು 23ನೇ ಪ್ರಕರಣದ ಅಥವಾ 25ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾದಾಗ ಅಥವಾ ಅವನನ್ನು ಅಲ್ಲಿಗೆ ಕರೆದುಕೊಂಡು ಬಂದಾಗ, ಆ ಮ್ಯಾಜಿಸ್ಟ್ರೇಟನು, ಬರಹದಲ್ಲಿ ಆದೇಶದ ಮೂಲಕ, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ಆ ವ್ಯಕ್ತಿಗೆ ಸಂಬಂಧಿಸಿದಂತೆ ವೈದ್ಯಕೀಯ ಪ್ರಮಾಣ ಪತ್ರವನ್ನು 24ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಸೂಕ್ತವಾಗಿ ಕೊಡಬಹುದೋ ಹೇಗೆ ಎಂಬುದನ್ನು ನಿರ್ಧರಿಸಲು, ಯಾವನೇ ವೈದ್ಯಕೀಯ ಅಧಿಕಾರಿಯನ್ನು ಸಾಧ್ಯಗೊಳಿಸುವುದಕ್ಕಾಗಿ, ಆ ಮ್ಯಾಜಿಸ್ಟ್ರೇಟನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ 10 ದಿವಸಗಳನ್ನು ಮೀರದ ಅವಧಿಯವರೆಗೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಥವಾ ಸಾರ್ವಜನಿಕ ನರ್ಸಿಂಗ್ ಹೋಮ್‌ನಲ್ಲಿ ಅಥವಾ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪರಿವೀಕ್ಷಣಾ ವಾರ್ಡಿನಲ್ಲಿ ಅಥವಾ ಯಾವುದೇ ಇತರ ಸೂಕ್ತ ಸ್ಥಳದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಸೂಕ್ತ ವೈದ್ಯಕೀಯ ಅಭಿರಕ್ಷೆಯಾಗಿ ತಡೆಹಿಡಿದಿಟ್ಟುಕೊಳ್ಳಲು ಅಧಿಕೃತಗೊಳಿಸಬಹುದು.

(2) ಆ ಮ್ಯಾಜಿಸ್ಟ್ರೇಟನು, (1)ನೇ ಉಪಪ್ರಕರಣದಲ್ಲಿ ನಮೂದು ಮಾಡಿದ ಉದ್ದೇಶಗಳಿಗಾಗಿ ಕಾಲಕಾಲಕ್ಕೆ, ಬರಹದಲ್ಲಿನ ಆದೇಶದ ಮೂಲಕ ತಾನು ಅವಶ್ಯವೆಂದು ಭಾವಿಸಬಹುದಾದಂತೆ, ಒಂದು ಬಾರಿಗೆ, ಹತ್ತು ದಿವಸಗಳನ್ನು ಮೀರದ ಅವಧಿಯವರೆಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಇನ್ನೂ ಹೆಚ್ಚಿಗೆಯಾಗಿ ತಡೆಹಿಡಿದಿಟ್ಟುಕೊಳ್ಳುವುದನ್ನು ಅಧಿಕೃತಗೊಳಿಸಬಹುದು:

ಪರಂತು, ಯಾವನೇ ವ್ಯಕ್ತಿಯನ್ನು ಒಟ್ಟಿನಲ್ಲಿ ಮೂವತ್ತು ದಿವಸಗಳನ್ನು ಮೀರುವ ನಿರಂತರ ಅವಧಿಯವರೆಗೆ ಈ ಉಪಪ್ರಕರಣದ ಮೇರೆಗೆ ತಡೆಹಿಡಿದಿಟ್ಟುಕೊಳ್ಳಲು ಅಧಿಕೃತಗೊಳಿಸತಕ್ಕುದಲ್ಲ.

29. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಗೆ, ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಸ್ಥಳಾಂತರಿಸುವುದು ಇತ್ಯರ್ಥದಲ್ಲಿರುವಾಗ ಅವನನ್ನು ತಡೆಹಿಡಿದಿಟ್ಟುಕೊಳ್ಳುವುದು:- 22ನೇ ಪ್ರಕರಣದ ಅಥವಾ 24ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನು, ಯಾವುದೇ ಪ್ರವೇಶನ ಆದೇಶವನ್ನು ಮಾಡಿದಾಗಲೆಲ್ಲಾ, ಅವನು ಬರಹದಲ್ಲಿ ಕಾರಣಗಳನ್ನು, ದಾಖಲು ಮಾಡಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಆ ಆದೇಶವನ್ನು ಮಾಡಲಾಗಿದೆಯೋ, ಆ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಸ್ಥಳಾಂತರಿಸುವುದು ಇತ್ಯರ್ಥದಲ್ಲಿರುವಾಗ ತಾನು ಸಮುಚಿತವೆಂದು ಭಾವಿಸಬಹುದಾದಂಥ ಸ್ಥಳದಲ್ಲಿ ಮೂವತ್ತು ದಿವಸಗಳನ್ನು ಮೀರದಂತಹ ಅವಧಿಗಾಗಿ ತಡೆಹಿಡಿದಿಟ್ಟುಕೊಳ್ಳಬಹುದೆಂದು ನಿರ್ದೇಶಿಸಬಹುದು.

*ಡಿ. ಈ ಅಧ್ಯಾಯದ ಮೇರೆಗಿನ ಆದೇಶಗಳಿಗೆ ಸಂಬಂಧಪಟ್ಟ ಸಂಕೀರ್ಣ ಉಪಬಂಧಗಳು*

30. ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ವೈದ್ಯಕೀಯ ಪರೀಕ್ಷೆಯ ಕಾಲ ಮತ್ತು ರೀತಿ:- ಈ ಅಧ್ಯಾಯದ ಮೇರೆಗಿನ ಯಾವುದೇ ಆದೇಶವನ್ನು ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ ಮಾಡಬೇಕಾಗಿರುವಲ್ಲಿ , ಅಂತಹ ಆದೇಶವನ್ನು, ಆ ವೈದ್ಯಕೀಯ ಪ್ರಮಾಣಪತ್ರಕ್ಕೆ ರುಜು ಮಾಡಿರುವ ವ್ಯಕ್ತಿಯು ಅಥವಾ ಅಂಥ ಆದೇಶವನ್ನು ಎರಡು ವೈದ್ಯಕೀಯ ಪ್ರಮಾಣಪತ್ರಗಳ ಆಧಾರದ ಮೇಲೆ ಮಾಡಬೇಕಾಗಿರುವಲ್ಲಿ ಅಂತಹ ಪ್ರಮಾಣಪತ್ರಗಳಿಗೆ ರುಜು ಮಾಡಿರುವವನು,-

(i) ಅರ್ಜಿಯ ಮೇಲೆ, ಆದೇಶ ಮಾಡಿದ್ದ ಸಂದರ್ಭದಲ್ಲಿ, ಅಂಥ ಅರ್ಜಿಯನ್ನು ಮಾಡಿಕೊಂಡಂಥ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಪೂರ್ತಿ ಹತ್ತು ದಿನಕ್ಕೆ ಮುಂಚೆ ಅಲ್ಲದಂತೆ; ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ ಅಂತಹ ಆದೇಶದ ದಿನಾಂಕದ ನಿಕಟ ಪೂರ್ವದ ಪೂರ್ತಿ ಹತ್ತು ದಿವಸಗಳಿಗಿಂತ ಮುಂಚೆ ಅಲ್ಲದಂತೆ

-ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ಆ ವ್ಯಕ್ತಿಯನ್ನು, ವೈಯಕ್ತಿಕವಾಗಿ ಪರೀಕ್ಷಿಸಿದ್ದೇನೆಂದು ಪ್ರಮಾಣೀಕರಿಸಿದ ಹೊರತು ಅಂತಹ ಆದೇಶವನ್ನು ಮಾಡತಕ್ಕುದಲ್ಲ:

ಪರಂತು,ಪ್ರವೇಶನ ಆದೇಶವನ್ನು ಎರಡು ವೈದ್ಯಕೀಯ ಪ್ರಮಾಣಪತ್ರಗಳ ಆಧಾರದ ಮೇಲೆ ಮಾಡಬೇಕಾಗಿರುವಲ್ಲಿ, ಆ ಪ್ರತಿಯೊಂದು ಪ್ರಮಾಣಪತ್ರಕ್ಕೆ ರುಜು ಮಾಡಿರುವವನು, ಇನ್ನೊಂದು ಪ್ರಮಾಣಪತ್ರಕ್ಕೆ ತಾನು ರುಜು ಮಾಡಿದವನಿಗಿಂತಲೂ ಸ್ವತಂತ್ರವಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಪರೀಕ್ಷಿಸಿರುವನೆಂದು ಪ್ರಮಾಣಪತ್ರವು ತೋರಿಸಿದ ಹೊರತು ಅಂಥ ಆದೇಶವನ್ನು ಮಾಡತಕ್ಕುದಲ್ಲ.

31. ಪ್ರವೇಶನ ಆದೇಶದ ಅಧಿಕಾರ:-ಈ ಅಧ್ಯಾಯದ ಮೇರೆಗೆ ಮಾಡಿದ ಪ್ರವೇಶನ ಆದೇಶವು,-

(i) ಅರ್ಜಿದಾರನು ಅಥವಾ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ; ಅಥವಾ

(ii) ಮಾಡಿಕೊಂಡ ಅರ್ಜಿಯ ಮೇಲಲ್ಲದೆ ಅನ್ಯಥಾ ಮಾಡಿದ ಪ್ರವೇಶನ ಆದೇಶದ ಸಂದರ್ಭದಲ್ಲಿ, ಆ ಆದೇಶವನ್ನು ಮಾಡುವ ಪ್ರಾಧಿಕಾರವು, ಹಾಗೆ ಮಾಡಲು ಅಧಿಕೃತಗೊಳಿಸಿದ ವ್ಯಕ್ತಿಯು

-ಅಂತಹ ಆದೇಶದಲ್ಲಿ ನಮೂದು ಮಾಡಿದ ಸ್ಥಳಕ್ಕೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಕರೆದುಕೊಂಡು ಹೋಗಲು ಅಥವಾ ಆ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿಯೆಂದು ಸೇರಿಸಿಕೊಳ್ಳಲು ಮತ್ತು ಚಿಕಿತ್ಸೆಗಾಗಿ ಅಥವಾ ಸಂದರ್ಭಾನುಸಾರ, ಅಲ್ಲಿ ಅವನನ್ನು ಸೇರಿಸಿಕೊಳ್ಳಲು, ತಡೆಹಿಡಿದಿಟ್ಟುಕೊಳ್ಳಲು ಅಥವಾ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅವನನ್ನು ಸ್ಥಳಾಂತರಿಸಬಹುದಾದಂಥ ಯಾವುದೇ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಅವನನ್ನು ಸೇರಿಸಿಕೊಳ್ಳುವುದಕ್ಕಾಗಿ ಮತ್ತು ಅವನನ್ನು ತಡೆಹಿಡಿದಿಟ್ಟುಕೊಳ್ಳುವುದಕ್ಕಾಗಿ ಸಾಕಷ್ಟು ಅಧಿಕಾರವಾಗಿರತಕ್ಕುದು ಮತ್ತು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯಲ್ಲಿ ಅಂತಹ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕುದು:

ಪರಂತು, ಪ್ರಭಾರದಲ್ಲಿರುವ ಆ ವೈದ್ಯಕೀಯ ಅಧಿಕಾರಿಗೆ ಆ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಸಾಕಷ್ಟು ಸ್ಥಳಾವಕಾಶವಿಲ್ಲವೆಂದು ಕಂಡುಬರುವ ಯಾವುದೇ ಪ್ರಕರಣದಲ್ಲಿ, ಸೇರಿಸಿಕೊಳ್ಳುವುದಕ್ಕೆ ಒಪ್ಪಿಗೆಕೊಟ್ಟ ತರುವಾಯ, ಆ ಸಂಗತಿಯನ್ನು ಆ ಆದೇಶವನ್ನು ಮಾಡಿದಂಥ ಮ್ಯಾಜಿಸ್ಟ್ರೇಟನಿಗೆ ಅಥವಾ ಜಿಲ್ಲಾ ನ್ಯಾಯಾಲಯಕ್ಕೆ ತಿಳಿಸತಕ್ಕುದು, ಮತ್ತು ಆ ತರುವಾಯ ಸಂದರ್ಭಾನುಸಾರ ಆ ಮ್ಯಾಜಿಸ್ಟ್ರೇಟನು ಅಥವಾ ಜಿಲ್ಲಾ ನ್ಯಾಯಾಲಯವು, ಅವನು ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡತಕ್ಕುದು:

ಮತ್ತೂ ಪರಂತು, ಪ್ರತಿಯೊಂದು ಪ್ರವೇಶನ ಆದೇಶವು,-

(ಎ) ಆದೇಶ ಮಾಡಿದಂಥ ದಿನಾಂಕದಿಂದ ಮೂವತ್ತು ದಿವಸಗಳು ಮುಕ್ತಾಯವಾದ ಮೇಲೆ ಆ ಅವಧಿಯೊಳಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಆ ಆದೇಶದಲ್ಲಿ ನಮೂದಿಸಿರುವ ಸ್ಥಳಕ್ಕೆ ಸೇರಿಸಲಾಗಿದ್ದ ಹೊರತು ; ಮತ್ತು

(ಬಿ) ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಬಿಡುಗಡೆ ಮಾಡಿದ ಮೇಲೆ - ಪರಿಣಾಮವನ್ನು ಹೊಂದಿರುವುದು ನಿಂತು ಹೋಗತಕ್ಕುದು.

32. ಪ್ರವೇಶನ ಆದೇಶದ ಪ್ರತಿಯನ್ನು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಕಳುಹಿಸತಕ್ಕುದು:-ಪ್ರವೇಶನ ಆದೇಶವನ್ನು ಮಾಡುವ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನು ಅಥವಾ ಪ್ರತಿಯೊಂದು ಜಿಲ್ಲಾ ನ್ಯಾಯಾಲಯವು, ತಕ್ಷಣವೇ ಅದರ ಪ್ರಮಾಣೀಕೃತ ಪ್ರತಿಯನ್ನು ಅಗತ್ಯವಿರುವ ವೈದ್ಯಕೀಯ ಪ್ರಮಾಣಪತ್ರಗಳ ಪ್ರತಿಗಳು ಮತ್ತು ವಿವರ ಪತ್ರದೊಂದಿಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಸೇರಿಸಬೇಕಾಗಿರುವಂಥ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಕಳುಹಿಸತಕ್ಕುದು.

33. ಪ್ರವೇಶನ ಆದೇಶದ ಪ್ರವೇಶವನ್ನು ನಿರ್ದೇಶಿಸಬಹುದಾದಂಥ ಮನೋರೋಗ ಆಸ್ಪತ್ರೆಗಳು ಮತ್ತು ಮನೋರೋಗ ನರ್ಸಿಂಗ್ ಹೋಮುಗಳ ಬಗ್ಗೆ ನಿರ್ಬಂಧ:- ಯಾವನೇ ಮ್ಯಾಜಿಸ್ಟ್ರೇಟನು ಅಥವಾ ಯಾವುದೇ ಜಿಲ್ಲಾ ನ್ಯಾಯಾಲಯವು, ರಾಜ್ಯದ ಹೊರಗಡೆ ಇರುವ ಮ್ಯಾಜಿಸ್ಟ್ರೇಟನು ಅಥವಾ ಜಿಲ್ಲಾ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಂಥ ಯಾವುದೇ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ಒಳರೋಗಿಯೆಂದು ಸೇರಿಸಿಕೊಳ್ಳುವುದಕ್ಕಾಗಿ ಅಥವಾ ಅಲ್ಲಿ ಅವನನ್ನು ತಡೆಹಿಡಿದಿಟ್ಟುಕೊಳ್ಳುವುದಕ್ಕಾಗಿ ಪ್ರವೇಶನ ಆದೇಶವನ್ನು ಮಾಡತಕ್ಕುದಲ್ಲ:

ಪರಂತು, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಮತ್ತು ಯಾವುದೇ ಇತರ ರಾಜ್ಯ ಸರ್ಕಾರದ ಸಮ್ಮತಿಯನ್ನು ಪಡೆದುಕೊಂಡ ತರುವಾಯ, ಆ ಬಗ್ಗೆ ಮ್ಯಾಜಿಸ್ಟ್ರೇಟನನ್ನು ಅಥವಾ ಜಿಲ್ಲಾ ನ್ಯಾಯಾಲಯವನ್ನು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದರೆ ಅವನು ಅಥವಾ ಅದು ಅಂಥ ಯಾವುದೇ ಇತರ ರಾಜ್ಯದಲ್ಲಿರುವ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ ಸೇರಿಸುವುದಕ್ಕಾಗಿ ಅಥವಾ ಅದರಲ್ಲಿ ತಡೆಹಿಡಿದಿರಿಸಿಕೊಳ್ಳುವುದಕ್ಕಾಗಿ ಆದೇಶವನ್ನು, ಮಾಡಬಹುದು.

34. ಆದೇಶ ಅಥವಾ ದಸ್ತಾವೇಜಿನ ತಿದ್ದುಪಡಿ:- ಪ್ರವೇಶನ ಆದೇಶದ ಮೇರೆಗೆ ಯಾವುದೇ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಮಿಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ಸೇರಿಸಿಕೊಂಡ ತರುವಾಯ, ಅವನನ್ನು ಸೇರಿಸಿಕೊಂಡಂಥ ಅಥವಾ ತಡೆಹಿಡಿದಿಟ್ಟಿರುವಂಥ ಆದೇಶವು ಅಥವಾ ಯಾವ ದಸ್ತಾವೇಜುಗಳ ಆಧಾರದ ಮೇಲೆ ಅಂಥ ಆದೇಶವನ್ನು ಮಾಡಲಾಗಿತ್ತೋ ಆ ಯಾವುದೇ ದಸ್ತಾವೇಜುಗಳು ದೋಷಪೂರ್ಣವಾಗಿವೆಯೆಂದು ಅಥವಾ ಸರಿಯಾಗಿಲ್ಲವೆಂದು ಕಂಡುಬಂದರೆ, ಆ ತರುವಾಯ ಯಾವುದೇ ಕಾಲದಲ್ಲಿ ಅದನ್ನು ಆ ಮ್ಯಾಜಿಸ್ಟ್ರೇಟರ ಅಥವಾ ಆ ಜಿಲ್ಲಾ ನ್ಯಾಯಾಲಯದ ಅನುಮತಿಯೊಂದಿಗೆ ಆ ವ್ಯಕ್ತಿಯು

ಅಥವಾ ಅದಕ್ಕೆ ರುಜು ಮಾಡಿರುವ ವ್ಯಕ್ತಿಗಳು ತಿದ್ದುಪಡಿ ಮಾಡಬಹುದು ಮತ್ತು ಅಂಥ ತಿದ್ದುಪಡಿಯನ್ನು ಮಾಡಿದ ಮೇಲೆ ಆ ಆದೇಶವು, ಅದನ್ನು ಹಾಗೆ ತಿದ್ದುಪಡಿ ಮಾಡಿದಂತೆಯೇ ಮೂಲತಃ ಮಾಡಿದ್ದಿದ್ದರೆ ಅಥವಾ ಸಂದರ್ಭಾನುಸಾರ, ಯಾವ ದಸ್ತಾವೇಜುಗಳ ಮೇಲೆ ಅದನ್ನು ಮಾಡಲಾಗಿದೆಯೋ, ಅವುಗಳನ್ನು ಹಾಗೆ ತಿದ್ದುಪಡಿ ಮಾಡಿದಂತೆಯೇ ಮೂಲತಃ ಒದಗಿಸಲಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕುದು ಮತ್ತು ಯಾವಾಗಲೂ ಪರಿಣಾಮವನ್ನು ಹೊಂದಿತ್ತೆಂದು ಭಾವಿಸತಕ್ಕುದು.

35. ಯಾರ ಅರ್ಜಿಯ ಮೇಲೆ ಪ್ರವೇಶನ ಆದೇಶಗಳನ್ನು ಮಾಡಲಾಗಿದೆಯೋ ಆ ವ್ಯಕ್ತಿಗಾಗಿ ಬದಲಿಯವನನ್ನು ನೇಮಕ ಮಾಡಲು ಅಧಿಕಾರ:- ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಮ್ಯಾಜಿಸ್ಟ್ರೇಟನು ಬರಹದಲ್ಲಿನ ಆದೇಶದ ಮೂಲಕ (ಇಲ್ಲಿ ಇನ್ನು ಮುಂದೆ ಬದಲಿ ಆದೇಶ ಎಂದು ಉಲ್ಲೇಖಿಸಲಾಗಿದೆ) ಯಾವ ವ್ಯಕ್ತಿಯ ಅರ್ಜಿಯ ಮೇಲೆ ಪ್ರವೇಶನ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯ, ಈ ಅಧಿನಿಯಮದ ಮೇರೆಗಿನ, ಕರ್ತವ್ಯಗಳು ಮತ್ತು ಜವಾಬ್ದಾರಿಯನ್ನು, ಅವುಗಳನ್ನು ವಹಿಸಿಕೊಳ್ಳಲು ಇಚ್ಛಿಸುವ ಯಾವನೇ ಇತರ ವ್ಯಕ್ತಿಗೆ ವರ್ಗಾಯಿಸಬಹುದು ಮತ್ತು ಆ ತರುವಾಯ ಅಂಥ ಇತರ ವ್ಯಕ್ತಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ, ಯಾರ ಅರ್ಜಿಯ ಮೇಲೆ ಆ ಪ್ರವೇಶನ ಆದೇಶವನ್ನು ಮಾಡಲಾಯಿತೋ ಆ ವ್ಯಕ್ತಿಯೆಂಬುದಾಗಿ ಭಾವಿಸತಕ್ಕುದು ಮತ್ತು ತರುವಾಯದ ವ್ಯಕ್ತಿಗೆ ಈ ಅಧಿನಿಯಮದಲ್ಲಿ ಮಾಡಿದ ಎಲ್ಲಾ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕುದು:

ಪರಂತು , ಯಾವುದೇ ಅಂಥ ಬದಲಿ ಆದೇಶವು ಯಾವ ವ್ಯಕ್ತಿಯ ಅರ್ಜಿಯ ಮೇಲೆ ಪ್ರವೇಶನ ಆದೇಶವನ್ನು ಮಾಡಲಾಯಿತೋ ಆ ವ್ಯಕ್ತಿಯನ್ನು ಅಥವಾ ಅವನು ಮರಣ ಹೊಂದಿದ್ದರೆ, ಅವನ ಕಾನೂನು ಸಮ್ಮತ ಪ್ರತಿನಿಧಿಗಳನ್ನು, ಸದರಿ ಆದೇಶದ ದಿನಾಂಕಕ್ಕೆ ಮುಂಚೆ ವಹಿಸಿದ ಯಾವುದೇ ಹೊಣೆಗಾರಿಕೆಯಿಂದ ವಿಮುಕ್ತಗೊಳಿಸತಕ್ಕುದಲ್ಲ.

(2) ಯಾವುದೇ ಬದಲಿ ಆದೇಶವನ್ನು ಮಾಡುವುದಕ್ಕೆ ಮುಂಚೆ, ಮ್ಯಾಜಿಸ್ಟ್ರೇಟನು, ಯಾವ ವ್ಯಕ್ತಿಯ ಅರ್ಜಿಯ ಮೇಲೆ ಆ ಪ್ರವೇಶನ ಆದೇಶವನ್ನು ಮಾಡಲಾಗಿತ್ತೋ ಆ ವ್ಯಕ್ತಿಯು ಬದುಕಿದ್ದರೆ, ಅವನಿಗೆ ಮತ್ತು ಮ್ಯಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ನೋಟೀಸನ್ನು ಪಡೆಯಬೇಕಾಗಿರುವ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ಯಾವನೇ ಸಂಬಂಧಿಗೆ ನೋಟೀಸನ್ನು ಕಳುಹಿಸತಕ್ಕುದು.

(3) ಯಾರ ಹೆಸರಿನಲ್ಲಿ ಬದಲಿ ಆದೇಶವನ್ನು ಮಾಡಲು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಯ ಹೆಸರನ್ನು ಮತ್ತು ಅಂಥ ಆದೇಶವನ್ನು ಮಾಡುವುದರ ಬಗ್ಗೆ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಯಾವ ದಿನಾಂಕದಂದು ಪರ್ಯಾಲೋಚಿಸತಕ್ಕುದೋ ಆ ದಿನಾಂಕವನ್ನು (ಅದು ನೋಟೀಸನ್ನು ಹೊರಡಿಸಿದ ದಿನಾಂಕದಿಂದ ಇಪ್ಪತ್ತು ದಿವಸಗಳಿಗಿಂತ ಕಡಿಮೆ ಇರತಕ್ಕುದಲ್ಲ) (2)ನೇ ಉಪಪ್ರಕರಣದ ಮೇರೆಗಿನ ನೋಟೀಸಿನಲ್ಲಿ, ನಿರ್ದಿಷ್ಟಪಡಿಸತಕ್ಕುದು.

(4) (3)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದಿನಾಂಕದಂದು, ಅಥವಾ ವ್ಯವಹರಣೆಗಳನ್ನು ಮುಂದೂಡಬಹುದಾದಂಥ ಯಾವುದೇ ತರುವಾಯದ ದಿನಾಂಕದಂದು, ಯಾರಿಗೆ ನೋಟೀಸನ್ನು ಕಳುಹಿಸಲಾಗಿತ್ತೋ ಆ ಯಾವನೇ ವ್ಯಕ್ತಿಯು, ಅಥವಾ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ಯಾವನೇ ಇತರ ಸಂಬಂಧಿಯು ಮಾಡಿಕೊಂಡ ಯಾವುದೇ ಆಕ್ಷೇಪಣೆಯನ್ನು ಮ್ಯಾಜಿಸ್ಟ್ರೇಟನು, ಪರ್ಯಾಲೋಚಿಸತಕ್ಕುದು, ಮತ್ತು ಅವನು, ಯಾವನೇ ಅಂಥ ವ್ಯಕ್ತಿಯು ಅಥವಾ ಅವನ ಪರವಾಗಿ ಹಾಜರುಪಡಿಸಬಹುದಾದಂಥ ಅಥವಾ ಸಂಬಂಧಿಕನು ಹಾಜರುಪಡಿಸಬಹುದಾದಂಥ ಎಲ್ಲ ಸಾಕ್ಷ್ಯವನ್ನು ಸ್ವೀಕರಿಸತಕ್ಕುದು ಮತ್ತು ಮ್ಯಾಜಿಸ್ಟ್ರೇಟನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಅವನು ಬದಲಿ ಆದೇಶವನ್ನು ಮಾಡತಕ್ಕುದು ಅಥವಾ ಮಾಡದೇ ಇರತಕ್ಕುದು:

ಪರಂತು, ಯಾರ ಅರ್ಜಿಯ ಮೇಲೆ ಆ ಪ್ರವೇಶನ ಆದೇಶವನ್ನು ಮಾಡಲಾಗಿತ್ತೋ ಆ ವ್ಯಕ್ತಿಯು ಮರಣ ಹೊಂದಿದ್ದರೆ ಮತ್ತು ಯಾವನೇ ಇತರ ವ್ಯಕ್ತಿಯು, ಆ ಮೊದಲ ವ್ಯಕ್ತಿಯ, ಈ ಅಧಿನಿಯಮದ ಮೇರೆಗಿನ, ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಳ್ಳಲು ಇಚ್ಛಿಸಿದರೆ ಮತ್ತು ಮ್ಯಾಜಿಸ್ಟ್ರೇಟನ ಅಭಿಪ್ರಾಯದಲ್ಲಿ ಆ ಇತರ ವ್ಯಕ್ತಿಯು ಅದಕ್ಕೆ ಯೋಗ್ಯನಾಗಿದ್ದರೆ, ಆ ಮ್ಯಾಜಿಸ್ಟ್ರೇಟನು, (1)ನೇ ಉಪಪ್ರಕರಣದ ಪರಂತುಕದಲ್ಲಿ ಒಳಗೊಂಡ ಉಪಬಂಧಗಳಿಗೊಳಪಟ್ಟು, ಆ ಬಗ್ಗೆ ಆದೇಶವನ್ನು ಮಾಡತಕ್ಕುದು.

(5) ಈ ಪ್ರಕರಣದ ಮೇರೆಗೆ ಯಾವುದೇ ಬದಲಿ ಆದೇಶವನ್ನು ಮಾಡುವಾಗ, ಮ್ಯಾಜಿಸ್ಟ್ರೇಟನು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಅತಿ ಸಮೀಪದ ಸಂಬಂಧಿಕನಾಗಿರುವ ವ್ಯಕ್ತಿಗೆ ಪ್ರಾಶಸ್ತ್ಯವನ್ನು, ಬರಹದಲ್ಲಿ ಕಾರಣಗಳನ್ನು ದಾಖಲುಮಾಡಿ, ಅಂಥ ಪ್ರಾಶಸ್ತ್ಯವನ್ನು ಕೊಡುವುದು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಹಿತದೃಷ್ಟಿಗೆ ಸರಿಯಾಗದೆಂದು ಪರ್ಯಾಲೋಚಿಸಿದ ಹೊರತು, ಕೊಡತಕ್ಕುದು.

(6) ಮ್ಯಾಜಿಸ್ಟ್ರೇಟನು, ತಾನು ಸೂಕ್ತವೆಂದು ಯೋಚಿಸುವಂಥ ಯಾವನೇ ವ್ಯಕ್ತಿಯಿಂದ ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಆಸ್ತಿಯಿಂದ ಈ ಪ್ರಕರಣದ ಮೇರೆಗಿನ ವಿಚಾರಣೆಯ ಖರ್ಚುಗಳ ಸಂದಾಯಕ್ಕಾಗಿ ಅಂಥ ಆದೇಶವನ್ನು ಮಾಡಬಹುದು.

(7) (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ನೋಟೀಸನ್ನು, ಅದನ್ನು ಯಾರಿಗೆ ನೀಡಲು ಉದ್ದೇಶಿಸಲಾಗಿದೆಯೋ ಆ ವ್ಯಕ್ತಿಯ ಬಗ್ಗೆ, ತಿಳಿದುಬಂದ ಕೊನೆಯ ವಿಳಾಸಕ್ಕೆ ಅಂಚೆಯ ಮೂಲಕ ಕಳುಹಿಸಬಹುದು.

36. ಕೆಲವು ಪ್ರಕರಣಗಳ ಮೇರೆಗೆ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮ ಅಧಿಕಾರಿಗಳು:- ಪೊಲೀಸು ಕಮಿಷನರನನ್ನು ನೇಮಕ ಮಾಡಲಾಗಿರುವ ಯಾವುದೇ ಪ್ರದೇಶದಲ್ಲಿ 23, 24, 25 ಮತ್ತು 28ನೇ ಪ್ರಕರಣಗಳ ಮೇರೆಗಿನ ಮ್ಯಾಜಿಸ್ಟ್ರೇಟನ ಎಲ್ಲ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪೊಲೀಸು ಕಮಿಷನರನು ಚಲಾಯಿಸಬಹುದು ಅಥವಾ ನಿರ್ವಹಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ಪೊಲೀಸು ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯ ಎಲ್ಲ ಪ್ರಕಾರ್ಯಗಳನ್ನು ಇನ್ಸ್‌ಪೆಕ್ಟರನ ದರ್ಜೆಗಿಂತ ಕಡಿಮೆಯಲ್ಲದ ಯಾವನೇ ಪೊಲೀಸು ಅಧಿಕಾರಿಯು ನಿರ್ವಹಿಸಬಹುದು.

# ಅಧ್ಯಾಯ - V

## ಮಾನಸಿಕವಾಗಿ ಅಸ್ವಸ್ಥರಾದ ವ್ಯಕ್ತಿಗಳ ಪರಿಶೀಲನೆ, ಬಿಡುಗಡೆ, ಗೈರುಹಾಜರಿಯ ರಜೆ ಮತ್ತು ಸ್ಥಳಾಂತರ

### ಭಾಗ - I

### ಪರಿಶೀಲನೆ

37. ಸಂದರ್ಶಕರ ನೇಮಕಾತಿ:- (1) ಸಂದರ್ಭಾನುಸಾರ ರಾಜ್ಯಸರ್ಕಾರವು ಅಥವಾ ಕೇಂದ್ರ ಸರ್ಕಾರವು, ಪ್ರತಿಯೊಂದು ಮನೋರೋಗ ಆಸ್ಪತ್ರೆಗಾಗಿ ಮತ್ತು ಪ್ರತಿಯೊಂದು ಮನೋರೋಗ ನರ್ಸಿಂಗ್ ಹೋಂಗಾಗಿ ಐದಕ್ಕೆ ಕಡಿಮೆಯಿಲ್ಲದಷ್ಟು ಸಂಖ್ಯೆಯ ಸಂದರ್ಶಕರನ್ನು ನೇಮಕ ಮಾಡತಕ್ಕದ್ದು. ಅವರ ಪೈಕಿ ಕನಿಷ್ಠ ಪಕ್ಷ ಒಬ್ಬನು ವೈದ್ಯಕೀಯ ಅಧಿಕಾರಿ - ಈತ ಮನೋರೋಗ ಚಿಕಿತ್ಸಕನಾಗಿದ್ದರೆ ಒಳ್ಳೆಯದು, ಮತ್ತು ಇಬ್ಬರು ಸಮಾಜ ಕಾರ್ಯಕರ್ತರಾಗಿರತಕ್ಕದ್ದು.

(2) ರಾಜ್ಯದ ವೈದ್ಯಕೀಯ ಸೇವೆಗಳ ಮುಖ್ಯಸ್ಥರು ಅಥವಾ ಅವನ ನಾಮನಿರ್ದೇಶಿತ ವ್ಯಕ್ತಿಯು - ಈತ ಮನೋರೋಗ ಚಿಕಿತ್ಸಕನಾಗಿದ್ದರೆ ಒಳ್ಳೆಯದು ಮತ್ತು ರಾಜ್ಯದ ಎಲ್ಲ ಮನೋರೋಗ ಆಸ್ಪತ್ರೆಗಳ ಮತ್ತು ಮನೋರೋಗ ನರ್ಸಿಂಗ್ ಹೋಂಗಳ ಪದನಿಮಿತ್ತ ಸಂದರ್ಶಕನಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಂದರ್ಶಕರಾಗಿ ನೇಮಕ ಮಾಡಬೇಕಾದ ವ್ಯಕ್ತಿಗಳ ಅರ್ಹತೆಗಳು ಮತ್ತು ಅವರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

38. ಸಂದರ್ಶಕರಿಂದ ಮಾಸಿಕ ಪರಿಶೀಲನೆ:- ಮೂವರಿಗಿಂತ ಕಡಿಮೆಯಿಲ್ಲದ ಸಂದರ್ಶಕರು ಪ್ರತಿ ತಿಂಗಳಿನಲ್ಲಿ ಕನಿಷ್ಠ ಪಕ್ಷ ಒಂದು ಬಾರಿ ಅವರನ್ನು ಯಾವ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಮ್‌ಗೆ ಸಂಬಂಧಿಸಿದಂತೆ ನೇಮಕ ಮಾಡಲಾಗಿದೆಯೋ ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಂನ ಪ್ರತಿಯೊಂದು ಭಾಗವನ್ನು ಜಂಟಿಯಾಗಿ ಪರಿಶೀಲನೆ ಮಾಡತಕ್ಕದ್ದು ಮತ್ತು 17ನೇ ಪ್ರಕರಣದ ಮೇರೆಗೆ ಸ್ವಇಚ್ಛಾ ರೋಗಿಯಾಗಿ ಸೇರಿಸಿಕೊಳ್ಳಲಾದ ಪ್ರತಿಯೊಬ್ಬ ಅಪ್ರಾಪ್ತವಯಸ್ಕನ ಮತ್ತು ಪರಿಸ್ಥಿತಿಗಳು ಅನುಮತಿಸುವ ಮಟ್ಟಿಗೆ ಅಲ್ಲಿ ಸೇರಿಸಿಕೊಳ್ಳಲಾಗಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ಪ್ರತಿಯೊಬ್ಬ ಇತರ ವ್ಯಕ್ತಿಯ ಮತ್ತು ನಿಕಟಪೂರ್ವದ ಜಂಟಿ ಪರಿಶೀಲನೆಯ ತರುವಾಯ ಸೇರಿಸಿಕೊಳ್ಳಲಾದ ಮಾನಸಿಕವಾಗಿ ಅಸ್ವಸ್ಥನಾದ ಪ್ರತಿಯೊಬ್ಬ ವ್ಯಕ್ತಿಯ ಪ್ರವೇಶದ ಬಗೆಗಿನ ಆದೇಶವನ್ನು ಮತ್ತು ಅವನಿಗೆ ಸಂಬಂಧಿಸಿದ ವೈದ್ಯಕೀಯ ಪ್ರಮಾಣಪತ್ರಗಳನ್ನು ಪರೀಕ್ಷಿಸತಕ್ಕದ್ದು, ಮತ್ತು ಆ ಉದ್ದೇಶಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್‌ಹೋಂನ ವ್ಯವಸ್ಥಾಪನೆಗೆ ಮತ್ತು ಸ್ಥಿತಿಗೆ ಸಂಬಂಧಿಸಿದಂತೆ ಮತ್ತು ಅವುಗಳ ಒಳರೋಗಿಗಳಿಗೆ ಸಂಬಂಧಿಸಿದಂತೆ ಅವರು ಸಮುಚಿತವೆಂದು ಭಾವಿಸಬಹುದಾದಂಥ ಷರಾಗಳನ್ನು ನಮೂದಿಸತಕ್ಕದ್ದು:

ಪರಂತು, ಪ್ರಭಾರದಲ್ಲಿರುವ ವೈದ್ಯಾಧಿಕಾರಿಯ ಅಭಿಪ್ರಾಯದಲ್ಲಿ ರಹಸ್ಯ ಸ್ವರೂಪದ್ದಾಗಿರುವ, ಒಳರೋಗಿಯ ಯಾವುದೇ ವೈಯಕ್ತಿಕ ದಾಖಲೆಗಳನ್ನು ಪರಿಶೀಲಿಸಲು ಆ ಸಂದರ್ಶಕರು ಹಕ್ಕುಳ್ಳವರಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಯಾವನೇ ಸಂದರ್ಶಕನು, ಯಾವ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ಸಂಬಂಧಿಸಿದಂತೆ ಅವನನ್ನು ಸಂದರ್ಶಕನಾಗಿ ನೇಮಕಮಾಡಲಾಯಿತೋ ಆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಂನ ಜಂಟಿ ಪರಿಶೀಲನೆಯಲ್ಲಿ ನಿರಂತರ ಮೂರು ತಿಂಗಳುಗಳವರೆಗೆ ಭಾಗವಹಿಸಿಲ್ಲದಿದ್ದರೆ ಅವನು ಅಂಥ ಸಂದರ್ಶಕನಾಗಿ ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು.

39. ಮಾನಸಿಕವಾಗಿ ಅಸ್ವಸ್ಥರಾಗಿರುವ ಬಂದಿಗಳ ಪರಿಶೀಲನೆ:- (1) 38ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಾಯುಸೇನಾ ಅಧಿನಿಯಮ, 1950 (1950ರ 45)ರ 144ನೇ ಪ್ರಕರಣದ, ಅಥವಾ ಸೇನಾ ಅಧಿನಿಯಮ, 1950 (1950ರ 46)ರ 145ನೇ ಪ್ರಕರಣದ, ಅಥವಾ ನೌಕಾ ಅಧಿನಿಯಮ, 1957 (1957ರ 62)ರ 143ನೇ ಪ್ರಕರಣದ ಅಥವಾ 144ನೇ ಪ್ರಕರಣದ, ಅಥವಾ ದಂಡಪ್ರಕ್ರಿಯಾ ಸಂಹಿತೆ, 1973(1974ರ 2)ರ 330ನೇ ಪ್ರಕರಣದ ಅಥವಾ 335ನೇ ಪ್ರಕರಣದ ಉಪಬಂಧಗಳ ಮೇರೆಗೆ ಯಾವನೇ ವ್ಯಕ್ತಿಯನ್ನು ತಡೆಹಿಡಿದಿಟ್ಟಿರುವಲ್ಲಿ,-

(i) ಅಂಥ ವ್ಯಕ್ತಿಯನ್ನು ಜೈಲಿನಲ್ಲಿ ತಡೆಹಿಡಿದಿಟ್ಟಿದ್ದರೆ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನು; ಮತ್ತು

(ii) ಅಂಥ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಂನಲ್ಲಿ ತಡೆಹಿಡಿದಿಟ್ಟಿರುವಲ್ಲಿ, 37ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಕನಿಷ್ಠ ಪಕ್ಷ ಒಬ್ಬ ಸಮಾಜ ಕಾರ್ಯಕರ್ತನನ್ನು ಒಳಗೊಂಡು, ಎಲ್ಲ ಸಂದರ್ಶಕರು ಅಥವಾ ಅವರ ಪೈಕಿ ಯಾರೇ ಮೂವರು

- ಪ್ರತಿ ಮೂರು ತಿಂಗಳಿಗೊಮ್ಮೆ ಅಂಥ ವ್ಯಕ್ತಿಯ ಮನಸ್ಸಿನ ಸ್ಥಿತಿಯನ್ನು ನಿರ್ಧರಿಸುವ ದೃಷ್ಟಿಯಿಂದ, ಅಂಥ ವ್ಯಕ್ತಿಯನ್ನು ತಡೆಹಿಡಿದಿಟ್ಟಿರುವ ಸ್ಥಳದಲ್ಲಿ ಅವನನ್ನು ಸಂದರ್ಶಿಸತಕ್ಕದ್ದು ಮತ್ತು ಯಾರ ಆದೇಶದ ಮೇರೆಗೆ ಅಂಥ ವ್ಯಕ್ತಿಯನ್ನು ಹಾಗೆ ತಡೆಹಿಡಿದಿರಿಸಲಾಗಿದೆಯೋ ಆ ಪ್ರಾಧಿಕಾರಕ್ಕೆ ಆ ಬಗ್ಗೆ ವರದಿ ಮಾಡತಕ್ಕದ್ದು.

(2) ರಾಜ್ಯಸರ್ಕಾರವು, (1)ನೇ ಉಪ-ಪ್ರಕರಣದ ಮೇರೆಗೆ ಬಂದೀಖಾನೆಗಳ ಇನ್ಸ್‌ಪೆಕ್ಟರ್-ಜನರಲ್ಲನ ಎಲ್ಲ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ತನ್ನ ಯಾವನೇ ಅಧಿಕಾರಿಗೆ ಅಧಿಕಾರ ವಹಿಸಿಕೊಡಬಹುದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವನೇ ವ್ಯಕ್ತಿಯನ್ನು ತಡೆಹಿಡಿದಿಟ್ಟಿರುವ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಂನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಪ್ರತಿ ಆರು ತಿಂಗಳಿಗೊಮ್ಮೆ ಅಂಥ ವ್ಯಕ್ತಿಯ ಮಾನಸಿಕ

ಮತ್ತು ದೈಹಿಕ ಸ್ಥಿತಿಯ ಬಗ್ಗೆ, ಯಾರ ಆದೇಶದ ಮೇರೆಗೆ ಅಂಥ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗಿದೆಯೋ ಆ ಪ್ರಾಧಿಕಾರಕ್ಕೆ ವಿಶೇಷ ವರದಿಯನ್ನು ಮಾಡತಕ್ಕುದು.

(4) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ವಿವಿಧ ಅಧಿನಿಯಮಗಳ ಉಪಬಂಧಗಳ ಮೇರೆಗೆ ಜೈಲಿನಲ್ಲಿ ತಡೆಹಿಡಿದಿಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯನ್ನು, ಕನಿಷ್ಠಪಕ್ಷ ಮೂರು ತಿಂಗಳಿಗೊಮ್ಮೆ, ಮನೋರೋಗ ಚಿಕಿತ್ಸಕನು, ಅಥವಾ ಮನೋರೋಗ ಚಿಕಿತ್ಸಕನು ಲಭ್ಯವಿಲ್ಲದಿರುವಲ್ಲಿ, ಈ ಬಗ್ಗೆ ರಾಜ್ಯಸರ್ಕಾರವು ಅಧಿಕಾರ ಕೊಟ್ಟ ವೈದ್ಯಕೀಯ ಅಧಿಕಾರಿಯು ಸಂದರ್ಶಿಸತಕ್ಕುದು ಮತ್ತು ಅಂಥ ಮನೋರೋಗ ಚಿಕಿತ್ಸಕನು ಅಥವಾ ಸಂದರ್ಭಾನುಸಾರ, ಅಂಥ ವೈದ್ಯಕೀಯ ಅಧಿಕಾರಿಯು, ಅಂಥ ವ್ಯಕ್ತಿಯ ಮಾನಸಿಕ ಮತ್ತು ದೈಹಿಕ ಸ್ಥಿತಿಯ ಬಗ್ಗೆ, ಯಾರ ಆದೇಶದ ಮೇರೆಗೆ ಅಂಥ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗಿದೆಯೋ ಆ ಪ್ರಾಧಿಕಾರಕ್ಕೆ ವಿಶೇಷ ವರದಿಯನ್ನು ಮಾಡತಕ್ಕುದು.

## ಭಾಗ- II

## ಬಿಡುಗಡೆ

**40.** ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯಿಂದ ಬಿಡುಗಡೆ ಆದೇಶ:-(1)IV ನೇ ಅಧ್ಯಾಯದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಂನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಇಬ್ಬರು ಮೆಡಿಕಲ್ ಪ್ರಾಕ್ಟೀಷನರ್, ಇವರ ಪೈಕಿ ಒಬ್ಬನು ಮನೋರೋಗ ಚಿಕಿತ್ಸಕನಾಗಿದ್ದರೆ ಒಳಿತು, ಶಿಫಾರಸಿನ ಮೇಲೆ ಬರಹದಲ್ಲಿನ ಆದೇಶದ ಮೂಲಕ, ಸ್ವಯಿಚ್ಛಾ ರೋಗಿಯನ್ನು ಹೊರತುಪಡಿಸಿ ಒಳರೋಗಿಯೆಂದು ಅದರಲ್ಲಿ ತಡೆಹಿಡಿದಿಟ್ಟಿರುವ ಅಥವಾ ಚಿಕಿತ್ಸೆಯನ್ನು ಪಡೆಯುತ್ತಿರುವ ಯಾವನೇ ವ್ಯಕ್ತಿಯ ಬಿಡುಗಡೆಯನ್ನು ನಿರ್ದೇಶಿಸಬಹುದು, ಮತ್ತು ಆ ತರುವಾಯ ಅಂಥ ವ್ಯಕ್ತಿಯನ್ನು ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್‌ಹೋಂನಿಂದ ಬಿಡುಗಡೆ ಮಾಡತಕ್ಕುದು:

ಪರಂತು, ಈ ಉಪ-ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು, ಬಂದಿಗಳ ಅಧಿನಿಯಮ, 1900 (1900ರ 3)ರ 30ನೇ ಪ್ರಕರಣದಲ್ಲಿ ಅಥವಾ ಯಾವುದೇ ಇತರ ಸಂಬಂಧಪಟ್ಟ ಕಾನೂನಿನಲ್ಲಿ, ಉಪಬಂಧಿಸಿದ್ದಂತೆ ಹೊರತು ಅನ್ಯಥಾ ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿಗೆ ಸಂಬಂಧಿಸಿದಂತೆ ಮಾಡತಕ್ಕುದು.

(2) ಯಾವುದೇ ಪ್ರಾಧಿಕಾರದ ಆದೇಶದ ಅನುಸರಣೆಯಲ್ಲಿ ಒಳರೋಗಿಯೆಂದು ತಡೆಹಿಡಿದಿಟ್ಟಿರುವ ಅಥವಾ ಚಿಕಿತ್ಸೆಯನ್ನು ಪಡೆಯುತ್ತಿರುವ ವ್ಯಕ್ತಿಗೆ ಸಂಬಂಧಿಸಿದಂತೆ (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಬಿಡುಗಡೆ ಆದೇಶವನ್ನು ಮಾಡಿರುವಲ್ಲಿ ಅಂಥ ಆದೇಶದ ಒಂದು ಪ್ರತಿಯನ್ನು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಆ ಪ್ರಾಧಿಕಾರಕ್ಕೆ ಕೂಡಲೇ ಕಳುಹಿಸತಕ್ಕುದು.

41. ಅರ್ಜಿಯನ್ನು ಮಾಡಿಕೊಂಡ ಮೇಲೆ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಬಿಡುಗಡೆ:- ಈ ಅಧಿನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯ ಅನುಸರಣೆಯಲ್ಲಿ ಮಾಡಿದ ಆದೇಶದ ಮೇರೆಗೆ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಂನಲ್ಲಿ ತಡೆಹಿಡಿದಿಟ್ಟಿರುವ ಯಾವನೇ ವ್ಯಕ್ತಿಯನ್ನು, ಯಾರ ಅರ್ಜಿಯ ಮೇಲೆ ಆದೇಶವನ್ನು ಮಾಡಲಾಗಿತ್ತೋ ಆ ವ್ಯಕ್ತಿಯು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಆ ಬಗ್ಗೆ ಮಾಡಿಕೊಂಡ ಅರ್ಜಿಯ ಮೇಲೆ ಬಿಡುಗಡೆ ಮಾಡತಕ್ಕುದು:

ಪರಂತು, ಆ ವ್ಯಕ್ತಿಯು ಅಪಾಯಕಾರಿಯೆಂದು ಮತ್ತು ನಿರ್ಬಂಧವಿಲ್ಲದೇ ಇರಲು ಯೋಗ್ಯನಾಗಿಲ್ಲವೆಂದು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಬರಹದಲ್ಲಿ, ಪ್ರಮಾಣೀಕರಿಸಿದರೆ ಅಂಥ ಯಾವನೇ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಬಿಡುಗಡೆ ಮಾಡತಕ್ಕುದಲ್ಲ.

42. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯುಕ್ತ ರಕ್ಷಣೆಗಾಗಿ ಸಂಬಂಧಿಕರ ಅಥವಾ ಸ್ನೇಹಿತರ ವಚನ ಬಂಧದ ಮೇಲೆ ಬಿಡುಗಡೆ ಆದೇಶ ಇತ್ಯಾದಿ:- (1) 22ನೇ ಪ್ರಕರಣದ, 24ನೇ ಪ್ರಕರಣದ ಅಥವಾ 25ನೇ ಪ್ರಕರಣದ ಮೇರೆಗೆ ಮನೋರೋಗ ಆಸ್ಪತೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಂನಲ್ಲಿ ತಡೆಹಿಡಿದಿಟ್ಟಿರುವ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಸಂಬಂಧಿಕನು ಅಥವಾ ಸ್ನೇಹಿತನು ವ್ಯಕ್ತಿಯನ್ನು ತನ್ನ ರಕ್ಷಣೆಗೆ ಮತ್ತು ಅಭಿರಕ್ಷೆಗೆ ಒಪ್ಪಿಸತಕ್ಕುದೆಂದು ಇಚ್ಛಿಸುವಲ್ಲಿ, ಅವನು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು. ಅದನ್ನು ಪ್ರಭಾರದಲ್ಲಿರುವ ವೈದ್ಯಾಧಿಕಾರಿಯು ತನ್ನ ಷರಾ ಸಹಿತ ಯಾರ ಆದೇಶಗಳ ಮೇರೆಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗಿದೆಯೋ ಆ ಪ್ರಾಧಿಕಾರಕ್ಕೆ ಕಳುಹಿಸತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿರುವಲ್ಲಿ ಪ್ರಾಧಿಕಾರವು, ಅಂಥ ಸಂಬಂಧಿಕನು ಅಥವಾ ಸ್ನೇಹಿತನು ಈ ಸಂಬಂಧವಾಗಿ ಅಂಥ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಮೊಬಲಗಿಗೆ, ಜಾಮಿನಾನುದಾರರೊಂದಿಗೆ ಅಥವಾ ಜಾಮೀನುದಾರರಿಲ್ಲದೆಯೇ ಒಂದು ಬಾಂಡನ್ನು ಒದಗಿಸಿದರೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಸೂಕ್ತ ಪಾಲನೆ ಮಾಡುವುದಾಗಿ ಮಾತುಕೊಟ್ಟರೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ತನಗೆ ಅಥವಾ ಇತರರಿಗೆ ಹಾನಿ ಉಂಟುಮಾಡುವುದನ್ನು ತಡೆಗಟ್ಟಲಾಗುತ್ತದೆಂದು ಭರವಸೆ ಕೊಟ್ಟರೆ ಬಿಡುಗಡೆ ಆದೇಶ ಮಾಡತಕ್ಕುದು ಮತ್ತು ಆ ತರುವಾಯ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಬಿಡುಗಡೆ ಮಾಡತಕ್ಕುದು.

43. ವ್ಯಕ್ತಿಯ ಕೋರಿಕೆಯ ಮೇಲೆ ಅವನ ಬಿಡುಗಡೆ:- (1) ಮಾನಸಿಕ ಅಸ್ವಸ್ಥತೆಯಿಂದ ತಾನು ಗುಣಮುಖನಾಗಿರುವನೆಂದು ಭಾವಿಸುವ, ಈ ಅಧಿನಿಯಮದ ಮೇರೆಗೆ ಮಾಡಿದ ಆದೇಶದ ಅನುಸರಣೆಯಲ್ಲಿ ತಡೆಹಿಡಿದಿಟ್ಟಿರುವ ಯಾವನೇ ವ್ಯಕ್ತಿಯು (ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿಯಾಗಿಲ್ಲದವನು) ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್ ಹೋಂನಿಂದ ತನ್ನ ಬಿಡುಗಡೆಗಾಗಿ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವಶ್ಯವಾದಲ್ಲಿ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿಕೊಂಡ ಅರ್ಜಿಯು, ಅರ್ಜಿದಾರನು ಚಿಕಿತ್ಸೆಯನ್ನು ಪಡೆಯುತ್ತಿರುವ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಂನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯ ಅಥವಾ ಮನೋರೋಗ ಚಿಕಿತ್ಸಕನ ಪ್ರಮಾಣಪತ್ರದಿಂದ ಸಮರ್ಥಿತವಾಗಿರತಕ್ಕುದು.

(3) ಮ್ಯಾಜಿಸ್ಟ್ರೇಟನು, ತಾನು ಹಾಗೆ ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ವ್ಯಕ್ತಿಯನ್ನು ಬಿಡುಗಡೆ ಮಾಡುವ ಅಥವಾ ಅರ್ಜಿಯನ್ನು ವಜಾ ಮಾಡುವ ಆದೇಶವನ್ನು ಮಾಡಬಹುದು.

44. ನ್ಯಾಯ ವಿಚಾರಣೆಯನ್ನು ಮಾಡಿದ ತರುವಾಯ ಸ್ವಸ್ಥ ಚಿತ್ತನಾಗಿರುವನೆಂದು ಕಂಡುಬಂದ ವ್ಯಕ್ತಿಯ ಬಿಡುಗಡೆ:-**ಈ** ಅಧಿನಿಯಮದ ಮೇರೆಗೆ ಮಾಡಿದ ಪ್ರವೇಶನ ಆದೇಶದ ಅನುಸರಣೆಯಲ್ಲಿ, ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಂನಲ್ಲಿ ತಡೆಹಿಡಿದಿಟ್ಟಿರುವ ಯಾವನೇ ವ್ಯಕ್ತಿಯು, VI**ನೇ** ಅಧ್ಯಾಯದ ಉಪಬಂಧಗಳಿಗನುಸಾರವಾಗಿ ನಡೆದ ನ್ಯಾಯ ವಿಚಾರಣೆಯ ತರುವಾಯ, ಸ್ವಸ್ಥಚಿತ್ತನಾಗಿರುವುದಾಗಿ ಅಥವಾ ತನ್ನನ್ನು ರಕ್ಷಿಸಿಕೊಳ್ಳಲು ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಸಮರ್ಥನಾಗಿರುವುದಾಗಿ ಕಂಡುಬಂದಾಗ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, ಜಿಲ್ಲಾ ನ್ಯಾಯಾಲಯವು ಕ್ರಮಬದ್ಧವಾಗಿ ಪ್ರಮಾಣೀಕರಿಸಿದ ಅಂಥ ನಿರ್ಣಯದ ಒಂದು ಪ್ರತಿಯನ್ನು ಹಾಜರುಪಡಿಸಿದ ಮೇಲೆ, ಅಂಥ ಆಸ್ಪತ್ರೆಯಿಂದ ಅಥವಾ ನರ್ಸಿಂಗ್ ಹೋಂನಿಂದ ಅಂಥ ವ್ಯಕ್ತಿಯನ್ನು ತಕ್ಷಣವೇ ಬಿಡುಗಡೆ ಮಾಡತಕ್ಕುದು.

## ಭಾಗ-III

## ಗೈರುಹಾಜರಿಯ ರಜೆ

45. ಗೈರುಹಾಜರಿಯ ರಜೆ:- (1) ಯಾವುದೇ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್‌ಹೋಂನಲ್ಲಿ ಒಳರೋಗಿಯಾಗಿ ಚಿಕಿತ್ಸೆಯನ್ನು ಪಡೆಯುತ್ತಿರುವ, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯ (ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿ ಅಲ್ಲದವನು) ಪರವಾಗಿ ಗೈರುಹಾಜರಿ ರಜೆಗಾಗಿನ ಅರ್ಜಿಯನ್ನು,-

(ಎ) ಗಂಡನ ಅಥವಾ ಹೆಂಡತಿಯ ಅರ್ಜಿಯ ಮೇಲೆ ಸೇರಿಸಿಕೊಳ್ಳಲಾಗಿರುವಂಥ ವ್ಯಕ್ತಿಯ ಸಂದರ್ಭದಲ್ಲಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಗಂಡ ಅಥವಾ ಹೆಂಡತಿಯು, ಅಥವಾ ಮಾನಸಿಕ ಅಥವಾ ದೈಹಿಕ ಅಸ್ವಸ್ಥತೆಯ ಕಾರಣದಿಂದ, ಭಾರತದಿಂದ ಗೈರುಹಾಜರಾಗಿರುವ ಕಾರಣದಿಂದಾಗಿ ಅಥವಾ ಅನ್ಯಥಾ ಆ ಗಂಡನು ಅಥವಾ ಹೆಂಡತಿಯು ಅಂಥ ಅರ್ಜಿಯನ್ನು ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲದಿರುವಲ್ಲಿ, ಆ ಗಂಡನು ಅಥವಾ ಹೆಂಡತಿಯು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಇತರ ಸಂಬಂಧಿಕನು, ಅಥವಾ

(ಬಿ) ಯಾವನೇ ಇತರ ವ್ಯಕ್ತಿಯ ಸಂದರ್ಭದಲ್ಲಿ, ಯಾರ ಅರ್ಜಿಯ ಮೇಲೆ ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಸೇರಿಸಿಕೊಳ್ಳಲಾಯಿತೋ ಆ ವ್ಯಕ್ತಿಯು

- ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ, ಮಾಡಿಕೊಳ್ಳಬಹುದು:

ಪರಂತು, ಈ ಉಪಪ್ರಕರಣದ ಮೇರೆಗಿನ ಅರ್ಜಿಯನ್ನು ಪ್ರಾಪ್ತವಯಸ್ಕನಾಗಿಲ್ಲದ ವ್ಯಕ್ತಿಯು ಮಾಡಿಕೊಳ್ಳತಕ್ಕುದಲ್ಲ.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಯೊಂದಿಗೆ,-

(i) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸರಿಯಾದ ರಕ್ಷಣೆಗೆ,

(ii) ತನಗೆ ಮತ್ತು ಇತರರಿಗೆ, ಮಾನಸಿಕ ಅಸ್ವಸ್ಥನಾಗಿರುವ ವ್ಯಕ್ತಿಯು ಹಾನಿ ಉಂಟುಮಾಡುವುದನ್ನು ತಡೆಗಟ್ಟುವುದಕ್ಕೆ,

(iii) ರಜೆಯ ಅವಧಿಯು ಮುಕ್ತಾಯಗೊಂಡ ಮೇಲೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಆ ಮನೋರೋಗ ಆಸ್ಪತ್ರೆಗೆ ಅಥವಾ ಸಂದರ್ಭಾನುಸಾರ ಮನೋರೋಗ ನರ್ಸಿಂಗ್ ಹೋಂಗೆ ವಾಪಸು ತರುವುದಕ್ಕೆ

- ಮಾತು ಕೊಡುವ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಮೊಬಲಗಿನ, ಜಾಮೀನುದಾರರ ಸಹಿತ ಅಥವಾ ಜಾಮೀನುದಾರ ರಹಿತ, ಒಂದು ಬಾಂಡ್ ಇರತಕ್ಕುದು.

(3) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಅವಶ್ಯವೆಂದು ಭಾವಿಸಬಹುದಾದಂಥ ಅವಧಿಯವರೆಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯ ಹಿತದೃಷ್ಟಿಯಿಂದ ಅಥವಾ ಇತರರ ಸಂರಕ್ಷಣೆಯ ದೃಷ್ಟಿಯಿಂದ ಆ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಗೈರುಹಾಜರಿ ರಜೆಯನ್ನು ಮಂಜೂರು ಮಾಡಬಹುದು :

ಪರಂತು, ಈ ಉಪ-ಪ್ರಕರಣದ ಮೇರೆಗೆ ಒಬ್ಬ ರೋಗಿಗೆ ಮಂಜೂರು ಮಾಡಬಹುದಾದ ಗೈರುಹಾಜರಿಯ ರಜೆಯ ದಿವಸಗಳ ಒಟ್ಟು ಸಂಖ್ಯೆಯು ಅರವತ್ತು ದಿವಸಗಳನ್ನು ಮೀರಾರತಕ್ಕುದಲ್ಲ.

(4) ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ಅವನಿಗೆ ಮಂಜೂರು ಮಾಡಿರುವ ರಜೆಯು ಮುಕ್ತಾಯಗೊಂಡ ಮೇಲೆ, ಆ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್‌ಹೋಂಗೆ ವಾಪಸು ತರದಿರುವಲ್ಲಿ,

ಪ್ರಭಾರದಲ್ಲಿರುವ ಆ ವೈದ್ಯಕೀಯ ಅಧಿಕಾರಿಯು, ಯಾವ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಅಂಥ ಆಸ್ಪತ್ರೆ ಅಥವಾ ನರ್ಸಿಂಗ್ ಹೋಂ ಇದೆಯೋ ಆ ಮ್ಯಾಜಿಸ್ಟ್ರೇಟನಿಗೆ ಆ ಸಂಗತಿಯನ್ನು ತಕ್ಷಣವೇ ವರದಿಮಾಡತಕ್ಕುದು ಮತ್ತು ಆ ಮ್ಯಾಜಿಸ್ಟ್ರೇಟನು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಸಂದರ್ಭಾನುಸಾರ ಆ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ವಾಪಸು ತರಬೇಕೆಂದು ನಿರ್ದೇಶಿಸಿ ಆದೇಶವನ್ನು ಮಾಡತಕ್ಕುದು.

(5) ಈ ಪ್ರಕರಣದಲ್ಲಿರುವುದು ಯಾವುದೂ, 15ನೇ ಪ್ರಕರಣದಲ್ಲಿ ಅಥವಾ 16ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವಯಿಚ್ಛಾರೋಗಿಗೆ ಅನ್ವಯವಾಗತಕ್ಕುದಲ್ಲ, ಆದರೆ, 18ನೇ ಪ್ರಕರಣದ ಉಪಬಂಧಗಳು ಅವನಿಗೆ ಅನ್ವಯವಾಗತಕ್ಕುದು.

46. ಮ್ಯಾಜಿಸ್ಟ್ರೇಟನಿಂದ ಗೈರುಹಾಜರಿ ರಜೆಯ ಮಂಜೂರಾತಿ:-(1)ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, 45ನೇ ಪ್ರಕರಣದ ಮೇರೆಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಗೈರುಹಾಜರಿ ರಜೆಯನ್ನು ಮಂಜೂರು ಮಾಡಲು ನಿರಾಕರಿಸುವಲ್ಲಿ, ಆ ಅರ್ಜಿದಾರನು ಯಾವ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ತಡೆಹಿಡಿದಿಟ್ಟಿರುವ ಮನೋರೋಗ ಆಸ್ಪತ್ರೆ ಅಥವಾ ಮನೋರೋಗ ನರ್ಸಿಂಗ್‌ಹೋಂ ಇದೆಯೋ, ಆ ಮ್ಯಾಜಿಸ್ಟ್ರೇಟನಿಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ, ವ್ಯಕ್ತಿಗೆ ಗೈರುಹಾಜರಿ ರಜೆಯ ಮಂಜೂರಾತಿಗಾಗಿ ಅರ್ಜಿಯನ್ನು ಹಾಕಿಕೊಳ್ಳಬಹುದು ಮತ್ತು ಆ ಮ್ಯಾಜಿಸ್ಟ್ರೇಟನು ರಜೆ ಮಂಜೂರು ಮಾಡುವುದು ಅವಶ್ಯವೆಂದು ಅವನಿಗೆ ಮನದಟ್ಟಾದರೆ ಮತ್ತು ಆ ಅರ್ಜಿದಾರನು (2)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಬಂಧಪತ್ರವನ್ನು ಬರೆದುಕೊಟ್ಟ ಮೇಲೆ, ಆದೇಶದ ಮೂಲಕ, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಗೆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಗೈರು ಹಾಜರಿ ರಜೆಯನ್ನು ಮಂಜೂರು ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಬಂಧಪತ್ರವು, ಜಾಮೀನುದಾರರ ಸಹಿತವಾದುದು ಅಥವಾ ರಹಿತವಾದುದು ಆಗಿರತಕ್ಕುದು ಮತ್ತು ಮ್ಯಾಜಿಸ್ಟ್ರೇಟನು ತೀರ್ಮಾನಿಸಬಹುದಾದಂಥ ಮೊಬಲಗಿನದಾಗಿರತಕ್ಕುದು ಮತ್ತು ಅದು 45ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ವಚನಬಂಧವನ್ನು ಒಳಗೊಂಡಿರತಕ್ಕುದು.

(3) ಆ ಮ್ಯಾಜಿಸ್ಟ್ರೇಟನು, ಅವನ ಆದೇಶದ ಒಂದು ಪ್ರತಿಯನ್ನು ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಗೆ ಕಳುಹಿಸತಕ್ಕುದು ಮತ್ತು ಅಂಥ ಆದೇಶವನ್ನು ಸ್ವೀಕರಿಸಿದ ಮೇಲೆ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಯಾರ ಅರ್ಜಿಯ ಮೇಲೆ ಈ ಪ್ರಕರಣದ ಮೇರೆಗೆ ಗೈರುಹಾಜರಿ ರಜೆಯನ್ನು ಮಂಜೂರು ಮಾಡಲಾಗಿದ್ದಿತೋ ಆ ವ್ಯಕ್ತಿಗೆ ವಹಿಸಿಕೊಡತಕ್ಕುದು.

## ಭಾಗ-IV

### ಸ್ಥಳಾಂತರಣ

47. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಒಂದು ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್ ಹೋಂನಿಂದ ಯಾವುದೇ ಇತರ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ಸ್ಥಳಾಂತರಿಸುವುದು:- (1) 15ನೇ ಪ್ರಕರಣದಲ್ಲಿ ಅಥವಾ 16ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವಯಿಚ್ಛಾರೋಗಿಯನ್ನು ಹೊರತುಪಡಿಸಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ರಾಜ್ಯ ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ಆದೇಶಕ್ಕೊಳಪಟ್ಟು ಯಾವುದೇ ಮನೋರೋಗ ಆಸ್ಪತ್ರೆಯಿಂದ ಅಥವಾ ಮನೋರೋಗ ನರ್ಸಿಂಗ್ ಹೋಂನಿಂದ ರಾಜ್ಯದೊಳಗಿನ ಇತರ ಯಾವುದೇ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ಅಥವಾ ಯಾವುದೇ ಇತರ ರಾಜ್ಯದಲ್ಲಿನ ಯಾವುದೇ ಇತರ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ಆ ಇತರ ರಾಜ್ಯದ ಸರ್ಕಾರದ ಸಮ್ಮತಿಯೊಂದಿಗೆ ಸ್ಥಳಾಂತರಿಸಬಹುದು:

ಪರಂತು, ಈ ಅಧಿನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯ ಅನುಸರಣೆಯಲ್ಲಿ ಮಾಡಿದ ಆದೇಶದ ಮೇರೆಗೆ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ಸೇರಿಸಲಾದ, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ಸ್ಥಳಾಂತರಿಸುವ ಬಗ್ಗೆ ಅರ್ಜಿದಾರನಿಗೆ ತಿಳಿವಳಿಕೆಯನ್ನು ಕೊಟ್ಟಿದ್ದ ಹೊರತು ಹಾಗೆ ಸ್ಥಳಾಂತರಿಸತಕ್ಕುದಲ್ಲ.

(2) ರಾಜ್ಯಸರ್ಕಾರವು, ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ಬಂದಿಯನ್ನು ತಾತ್ಕಾಲಿಕವಾಗಿ ತಡೆಹಿಡಿದಿಟ್ಟಿರುವ ಸ್ಥಳದಿಂದ ರಾಜ್ಯದಲ್ಲಿನ ಯಾವುದೇ ಮನೋರೋಗ ಆಸ್ಪತ್ರೆಗೆ, ಮನೋರೋಗ ನರ್ಸಿಂಗ್ ಹೋಂಗೆ, ಜೈಲಿಗೆ ಅಥವಾ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳ ಅಥವಾ ಯಾವುದೇ ಇತರ ರಾಜ್ಯದಲ್ಲಿನ ಯಾವುದೇ ಮನೋರೋಗ ಆಸ್ಪತ್ರೆ, ಮನೋರೋಗ ನರ್ಸಿಂಗ್‌ಹೋಂಗೆ,ಜೈಲಿಗೆ ಅಥವಾ ಸುರಕ್ಷಿತ ಅಭಿರಕ್ಷೆಯ ಇತರ ಸ್ಥಳಕ್ಕೆ ಆ ಇತರ ರಾಜ್ಯ ಸರ್ಕಾರದ ಸಮ್ಮತಿಯೊಂದಿಗೆ ಅವನನ್ನು ಸ್ಥಳಾಂತರಿಸುವುದನ್ನು ನಿರ್ದೇಶಿಸಿ, ಅದು ಸೂಕ್ತವೆಂದು ಯೋಚಿಸುವಂಥ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಮಾಡಬಹುದು.

48. ಕೆಲವು ಸಂದರ್ಭಗಳಲ್ಲಿ ಪ್ರವೇಶ, ತಡೆಹಿಡಿದಿಡುವುದು ಮತ್ತು ಪುನಃ ಹಿಡಿಯುವುದು:- ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಆದೇಶದ ಮೇರೆಗೆ ಮನೋರೋಗ ಆಸ್ಪತ್ರೆಗೆ ಅಥವಾ ಮನೋರೋಗ ನರ್ಸಿಂಗ್ ಹೋಂಗೆ ತರಲಾದ ಪ್ರತಿಯೊಬ್ಬ ವ್ಯಕ್ತಿಯನ್ನು, ಯಾವುದೇ ಕಾನೂನಿನ ಮೇರೆಗೆ ಅವನನ್ನು ಸ್ಥಳಾಂತರಿಸುವವರೆಗೆ ಅಥವಾ ಬಿಡುಗಡೆ ಮಾಡುವವರೆಗೆ ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಸಂದರ್ಭಾನುಸಾರ ಅದರಲ್ಲಿ ಒಳರೋಗಿಯೆಂದು ಸೇರಿಸಿಕೊಳ್ಳಬಹುದು ಮತ್ತು ಅಂಥ ಆಸ್ಪತ್ರೆಗೆ ಅಥವಾ ನರ್ಸಿಂಗ್‌ಹೋಮ್‌ನಿಂದ ಅವನು ತಪ್ಪಿಸಿಕೊಂಡು ಹೋದ ಸಂದರ್ಭದಲ್ಲಿ, ಅಂಥ ಆದೇಶದ ಕಾರಣದಿಂದಾಗಿ ಯಾವನೇ ಪೊಲೀಸು ಅಧಿಕಾರಿಯು ಅಥವಾ ಅಂಥ ಆಸ್ಪತ್ರೆಯ ಅಥವಾ ನರ್ಸಿಂಗ್‌ಹೋಂನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಅಥವಾ ಯಾವನೇ ಅಧಿಕಾರಿಯು ಅಥವಾ ನೌಕರನು, ಅಥವಾ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ಇತರ ವ್ಯಕ್ತಿಯು, ಪುನಃ ಅವನನ್ನು

ಹಿಡಿಯಬಹುದು ಮತ್ತು ಅಂಥ ಆಸ್ಪತ್ರೆಗೆ ಅಥವಾ ನರ್ಸಿಂಗ್‌ಹೋಂಗೆ ಅವನನ್ನು ಸಾಗಿಸಬಹುದು ಹಾಗೂ ಅಲ್ಲಿ ಒಳರೋಗಿಯೆಂದು ಸ್ವೀಕರಿಸಿ ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಸಂದರ್ಭಾನುಸಾರ ಅಲ್ಲಿರಿಸಬಹುದು:

ಪರಂತು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ (ಮಾನಸಿಕವಾಗಿ ಅಸ್ವಸ್ಥನಾಗಿರುವ ಬಂದಿ ಅಲ್ಲದವನು)ಸಂದರ್ಭದಲ್ಲಿ ಈ ಪ್ರಕರಣದ ಮೇರೆಗೆ ಹಿಂದೆ ಹೇಳಿದಂತೆ ಪುನಃ ಹಿಡಿಯುವ ಅಧಿಕಾರವನ್ನು, ಅವನು ತಪ್ಪಿಸಿಕೊಂಡುಹೋದ ದಿನಾಂಕದಿಂದ ಒಂದು ತಿಂಗಳ ಅವಧಿಯು ಮುಕ್ತಾಯವಾದ ತರುವಾಯ ಚಲಾಯಿಸತಕ್ಕುದಲ್ಲ.

49. ಮ್ಯಾಜಿಸ್ಟ್ರೇಟನ ಆದೇಶಗಳ ಮೇಲೆ ಅಪೀಲು:-ಹಿಂದೆ ಹೇಳಿದ ಯಾವುವೇ ಉಪಬಂಧಗಳ ಮೇರೆಗೆ ಮಾಡಿದ ಮ್ಯಾಜಿಸ್ಟ್ರೇಟನ ಯಾವುದೇ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆ ಆದೇಶದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಸದರಿ ಆದೇಶದ ವಿರುದ್ಧ ಯಾವ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಆ ಮ್ಯಾಜಿಸ್ಟ್ರೇಟನು ಅಧಿಕಾರಗಳನ್ನು ಚಲಾಯಿಸುತ್ತಿರುವನೋ ಆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

## ಅಧ್ಯಾಯ-VI

### ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಬಗ್ಗೆ ನ್ಯಾಯ ವಿಚಾರಣೆ, ಅವನ ಶಾರೀರಿಕ ಅಭಿರಕ್ಷೆ ಮತ್ತು ಅವನ ಸ್ವತ್ತಿನ ವ್ಯವಸ್ಥಾಪನೆ

50. ನ್ಯಾಯ ವಿಚಾರಣೆಗಾಗಿ ಅರ್ಜಿ:- (1) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ಸ್ವತ್ತಿನ ಸ್ವಾಧೀನದಲ್ಲಿರುವಲ್ಲಿ ಅಂಥ ವ್ಯಕ್ತಿಯ ಮಾನಸಿಕ ಸ್ಥಿತಿಯ ಬಗ್ಗೆ ನ್ಯಾಯವಿಚಾರಣೆಯನ್ನು ನಡೆಸುವುದಕ್ಕಾಗಿ ಅರ್ಜಿಯನ್ನು -

(ಎ) ಅವನ ಯಾವನೇ ಸಂಬಂಧಿಕನಾಗಲಿ, ಅಥವಾ

(ಬಿ) ಭಾರತ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ರ ಮೇರೆಗೆ ನೇಮಕಗೊಂಡ ಸಾರ್ವಜನಿಕ ಕ್ಯುರೇಟರನಾಗಲಿ,ಅಥವಾ

(ಸಿ) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ಯಾವ ರಾಜ್ಯದಲ್ಲಿ ವಾಸಿಸುತ್ತಿರುವನೋ ಆ ರಾಜ್ಯದ ಅಡ್ವೋಕೇಟ್ ಜನರಲ್‌ರಾಗಲಿ, ಅಥವಾ

(ಡಿ) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಸ್ವತ್ತಿನಲ್ಲಿ, ಭೂಮಿಯ ಅಥವಾ ಭೂಮಿಯಲ್ಲಿನ ಹಿತಾಸಕ್ತಿಯು ಒಳಗೊಂಡಿರುವಲ್ಲಿ, ಅಥವಾ ಆ ಸ್ವತ್ತು ಅಥವಾ ಅದರ ಭಾಗವು, ಆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸ್ಥಾಪಿತವಾದ ಪ್ರತಿಪಾಲಿತರ ನ್ಯಾಯಾಲಯಕ್ಕೆ ವ್ಯವಸ್ಥಾಪನೆಗಾಗಿ ಕಾನೂನುಬದ್ಧವಾಗಿ ವಹಿಸಿಕೊಡಬಹುದಾದಂಥ ಸ್ವರೂಪದ್ದಾಗಿರುವಲ್ಲಿ, ಅಂಥ ಭೂಮಿಯು ಇರುವ ಜಿಲ್ಲೆಯ ಕಲೆಕ್ಟರ್‌ನಾಗಲಿ -

-ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ಆ ವ್ಯಕ್ತಿಯು ಯಾವ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಾಸಿಸುತ್ತಿರುವನೋ ಆ ಜಿಲ್ಲಾ ನ್ಯಾಯಾಲಯಕ್ಕೆ ಮಾಡಿಕೊಳ್ಳಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಆ ಜಿಲ್ಲಾ ನ್ಯಾಯಾಲಯವು ಖುದ್ದು ಜಾರಿಯ ಮೂಲಕ ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಜಾರಿಯ ಇತರ ವಿಧಾನದ ಮೂಲಕ ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಅಥವಾ ಅಂಥ ಕಾಲದಲ್ಲಿ ಹಾಜರಾಗಲು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಗೆ ನೋಟೀಸನ್ನು ಜಾರಿಮಾಡತಕ್ಕುದು ಅಥವಾ ಅಂಥ ವ್ಯಕ್ತಿಯನ್ನು ಸದರಿ ಸ್ಥಳದಲ್ಲಿ ಮತ್ತು ಸದರಿ ಕಾಲದಲ್ಲಿ ಜಿಲ್ಲಾ ನ್ಯಾಯಾಲಯವು, ಅಥವಾ ಜಿಲ್ಲಾ ನ್ಯಾಯಾಲಯವು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಯಾರಿಂದ ವರದಿಯನ್ನು ಕೋರಬಹುದೋ ಆ ಯಾವನೇ ಇತರ ವ್ಯಕ್ತಿಯು, ಪರೀಕ್ಷಿಸುವುದಕ್ಕಾಗಿ, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯನ್ನು ಹಾಜರುಪಡಿಸಲು ಅವನ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಅದೇ ರೀತಿಯಲ್ಲಿ ನೋಟೀಸನ್ನು ಜಾರಿಗೊಳಿಸತಕ್ಕುದು:

ಪರಂತು, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ಮಹಿಳೆಯಾಗಿದ್ದರೆ, ಅವಳು ವಾಸಿಸುತ್ತಿರುವ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ರೂಢಿಗನುಸಾರವಾಗಿ ಅಥವಾ ಅವಳು ಸೇರಿರುವಂಥ ಧರ್ಮಕ್ಕನುಸಾರವಾಗಿ, ಅವಳನ್ನು ಬಹಿರಂಗವಾಗಿ ಕಾಣಿಸಿಕೊಳ್ಳಲು ಒತ್ತಾಯ ಮಾಡಲಾಗದಿದ್ದರೆ ಆ ಮಹಿಳೆಯನ್ನು ಆ ಜಿಲ್ಲಾ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908(1908ರ 5)ರಲ್ಲಿ ಉಪಬಂಧಿಸಿರುವಂತೆ ಕಮಿಷನನ್ನು ಹೊರಡಿಸುವ ಮೂಲಕ ಪರೀಕ್ಷಿಸುವಂತೆ ಮಾಡಬಹುದು.

(3) (2)ನೇ ಉಪ-ಪ್ರಕರಣದ ಮೇರೆಗಿನ ನೋಟೀಸಿನ ಒಂದು ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯ ಯಾವನೇ ಸಂಬಂಧಿಕನಿಗೆ ಅಥವಾ ಜಿಲ್ಲಾ ನ್ಯಾಯಾಲಯದ ಅಭಿಪ್ರಾಯದಲ್ಲಿ, ಅದು ನಡೆಸಬೇಕಾದ ನ್ಯಾಯ ವಿಚಾರಣೆಯ ನೋಟೀಸನ್ನು ಯಾರು ಪಡೆಯತಕ್ಕುದೋ ಆ ಇತರ ವ್ಯಕ್ತಿಗೂ ಸಹ ಜಾರಿ ಮಾಡತಕ್ಕುದು.

(4) ಅರ್ಜಿಯನ್ನು ಮಾಡಿಕೊಂಡ ನ್ಯಾಯ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಆ ಜಿಲ್ಲಾ ನ್ಯಾಯಾಲಯವು, ಅಸೆಸರುಗಳೆಂದು ಕೆಲಸ ಮಾಡಲು ಇಬ್ಬರನ್ನು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡಬಹುದು.

51. ನ್ಯಾಯ ವಿಚಾರಣೆಯ ತರುವಾಯ ಜಿಲ್ಲಾ ನ್ಯಾಯಾಲಯವು ಯಾವ ವಿವಾದಾಂಶಗಳ ಮೇಲೆ ನಿರ್ಣಯವನ್ನು ಕೊಡತಕ್ಕುದೋ ಆ ವಿವಾದಾಂಶಗಳು:- ನ್ಯಾಯ ವಿಚಾರಣೆಯನ್ನು ಮುಗಿಸಿದ ಮೇಲೆ, ಜಿಲ್ಲಾ ನ್ಯಾಯಾಲಯವು,-

(i) ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ವಾಸ್ತವವಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವನೋ ಅಥವಾ ಇಲ್ಲವೋ ಹೇಗೆ, ಮತ್ತು

(ii) ಅಂಥ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವಲ್ಲಿ, ಅವನು ತನ್ನನ್ನು ರಕ್ಷಿಸಿಕೊಳ್ಳಲು ಮತ್ತು ತನ್ನ ಸ್ವತ್ತನ್ನು ನಿರ್ವಹಿಸಲು ಅಸಮರ್ಥನಾಗಿರುವನೋ ಅಥವಾ ತನ್ನ ಸ್ವತ್ತನ್ನು ಮಾತ್ರ ನಿರ್ವಹಿಸಲು ಅಸಮರ್ಥನಾಗಿರುವನೋ ಹೇಗೆ ಎಂಬ ಬಗ್ಗೆ

- ಅದರ ನಿರ್ಣಯಗಳನ್ನು ದಾಖಲು ಮಾಡತಕ್ಕುದು.

52. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನನ್ನು ಮತ್ತು ಸ್ವತ್ತಿನ ವ್ಯವಸ್ಥಾಪಕನನ್ನು ನೇಮಕ ಮಾಡುವ ಬಗ್ಗೆ ಉಪಬಂಧ:- (1) ಜಿಲ್ಲಾ ನ್ಯಾಯಾಲಯವು, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ವಾಸ್ತವವಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಮತ್ತು ಸ್ವತಃ ತನ್ನನ್ನು ರಕ್ಷಿಸಿಕೊಳ್ಳಲು ಮತ್ತು ತನ್ನ ಸ್ವತ್ತನ್ನು ನಿರ್ವಹಿಸಲು ಅಸಮರ್ಥನಾಗಿರುವನೆಂಬ ನಿರ್ಣಯವನ್ನು ದಾಖಲು ಮಾಡಿದಲ್ಲಿ ಅದು ಅಂಥ ವ್ಯಕ್ತಿಯ ರಕ್ಷಣೆಗಾಗಿ 53ನೇ ಪ್ರಕರಣದ ಮೇರೆಗೆ ಪಾಲಕನನ್ನು ಮತ್ತು ಸ್ವತ್ತಿನ ವ್ಯವಸ್ಥಾಪನೆಗಾಗಿ 54ನೇ ಪ್ರಕರಣದ ಮೇರೆಗೆ ವ್ಯವಸ್ಥಾಪಕನನ್ನು ನೇಮಕ ಮಾಡುವುದಕ್ಕಾಗಿ ಆದೇಶವನ್ನು ಮಾಡತಕ್ಕುದು.

(2) ಜಿಲ್ಲಾ ನ್ಯಾಯಾಲಯವು, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ವಾಸ್ತವವಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಮತ್ತು ಅವನು ತನ್ನ ಸ್ವತ್ತನ್ನು ನಿರ್ವಹಿಸಲು ಅಸಮರ್ಥನಾಗಿರುವನೆಂದು ಆದರೆ ತನ್ನನ್ನು ರಕ್ಷಿಸಿಕೊಳ್ಳಲು ಸಮರ್ಥನಾಗಿರುವನೆಂಬ ನಿರ್ಣಯವನ್ನು ದಾಖಲು ಮಾಡಿದಲ್ಲಿ ಅದು ಅವನ ಸ್ವತ್ತಿನ ವ್ಯವಸ್ಥಾಪನೆಯ ಬಗ್ಗೆ 54ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡತಕ್ಕುದು.

(3) ಆ ಜಿಲ್ಲಾ ನ್ಯಾಯಾಲಯವು, ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಹೇಳಲಾದ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿಲ್ಲವೆಂಬ ನಿರ್ಣಯವನ್ನು ದಾಖಲು ಮಾಡಿದಲ್ಲಿ, ಅದು ಆ ಅರ್ಜಿಯನ್ನು ವಜಾ ಮಾಡತಕ್ಕುದು.

(4) ಆ ಜಿಲ್ಲಾ ನ್ಯಾಯಾಲಯವು ಸೂಕ್ತವೆಂದು ಭಾವಿಸುವಲ್ಲಿ, ಅದು (1)ನೇ ಉಪ-ಪ್ರಕರಣದ ಮೇರೆಗೆ ಪಾಲಕನಾಗಿರಲು ಮತ್ತು ವ್ಯವಸ್ಥಾಪಕನಾಗಿರಲು ಒಬ್ಬನೇ ವ್ಯಕ್ತಿಯನ್ನು ನೇಮಕ ಮಾಡಬಹುದು.

53. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನ ನೇಮಕಾತಿ:- (1) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ತನ್ನನ್ನು ರಕ್ಷಿಸಿಕೊಳ್ಳಲು ಅಸಮರ್ಥನಾಗಿರುವಲ್ಲಿ ಜಿಲ್ಲಾ ನ್ಯಾಯಾಲಯವು ಅಥವಾ 54ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನಿರ್ದೇಶನವನ್ನು ಹೊರಡಿಸಲಾಗಿರುವಲ್ಲಿ, ಆ ಜಿಲ್ಲೆಯ ಕಲೆಕ್ಟರನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನಾಗಿರಲು ಯಾವನೇ ಸೂಕ್ತ ವ್ಯಕ್ತಿಯನ್ನು ನೇಮಕ ಮಾಡಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಕಲೆಕ್ಟರನು ರಾಜ್ಯಸರ್ಕಾರದ ಅಥವಾ ಆ ಬಗ್ಗೆ ರಾಜ್ಯ ಸರ್ಕಾರವು ನೇಮಕ ಮಾಡಿದ ಯಾವುದೇ ಪ್ರಾಧಿಕಾರದ ಮೇಲ್ವಿಚಾರಣೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು.

54. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪನೆಗಾಗಿ ವ್ಯವಸ್ಥಾಪಕನ ನೇಮಕಾತಿ:- (1) ಸ್ವತ್ತನ್ನು ನಿರ್ವಹಿಸಲು ಅಸಮರ್ಥವಾಗಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಪಾಲಿತರ ನ್ಯಾಯಾಲಯವು ವಶಕ್ಕೆ ತೆಗೆದುಕೊಳ್ಳಬಹುದಾದಂಥದಾಗಿರುವಲ್ಲಿ ಜಿಲ್ಲಾ ನ್ಯಾಯಾಲಯವು ಅಂಥ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳಲು ಪ್ರತಿಪಾಲಿತರ ನ್ಯಾಯಾಲಯವನ್ನು ಅಧಿಕೃತಗೊಳಿಸತಕ್ಕುದು ಮತ್ತು ಆ ತರುವಾಯ ಅಂಥ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪ್ರತಿಪಾಲಿತರ ನ್ಯಾಯಾಲಯವು ಆ ಕಾನೂನಿಗನುಸಾರವಾಗಿ ಅಂಥ ಸ್ವತ್ತಿನ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳತಕ್ಕುದು.

(2) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತು ಪ್ರತಿಪಾಲಿತರ ನ್ಯಾಯಾಲಯವು ವಶಕ್ಕೆ ತೆಗೆದುಕೊಳ್ಳಲಾಗದೆ ಇರುವಂಥ ಇಡೀ ಭೂಮಿಯ ಅಥವಾ ಅದರ ಭಾಗದ ಅಥವಾ ಭೂಮಿಯಲ್ಲಿನ ಯಾವುದೇ ಹಿತಾಸಕ್ತಿಯನ್ನು ಒಳಗೊಂಡಿರುವಲ್ಲಿ, ಆ ಜಿಲ್ಲಾ ನ್ಯಾಯಾಲಯವು, ಆ ಭೂಮಿಯು ಇರುವಂಥ ಜಿಲ್ಲೆಯ ಕಲೆಕ್ಟರನ ಸಮ್ಮತಿಯನ್ನು ಪಡೆದುಕೊಂಡ ತರುವಾಯ ಆ ವ್ಯಕ್ತಿಯನ್ನು ಮತ್ತು ಪ್ರತಿಪಾಲಿತರ ನ್ಯಾಯಾಲಯವು ವಶಕ್ಕೆ ತೆಗೆದುಕೊಳ್ಳಲಾಗದ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ಅಂಥ ಭಾಗದ ಅಥವಾ ಅದರಲ್ಲಿನ ಹಿತಾಸಕ್ತಿಯನ್ನು ವಶಕ್ಕೆ ತೆಗೆದುಕೊಳ್ಳುವಂತೆ ಕಲೆಕ್ಟರನಿಗೆ ನಿರ್ದೇಶಿಸಬಹುದು.

(3) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪನೆಯನ್ನು ಸಂದರ್ಭಾನುಸಾರ (1)ನೇ ಉಪಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ಪ್ರತಿಪಾಲಿತರ ನ್ಯಾಯಾಲಯಕ್ಕೆ ಅಥವಾ ಕಲೆಕ್ಟರನಿಗೆ ವಹಿಸಿಕೊಡಲು ಆಗದೆ ಇರುವಲ್ಲಿ , ಜಿಲ್ಲಾ ನ್ಯಾಯಾಲಯವು ಅಂಥ ಸ್ವತ್ತಿನ ವ್ಯವಸ್ಥಾಪಕನಾಗಿರಲು ಯಾವನೇ ಸೂಕ್ತ ವ್ಯಕ್ತಿಯನ್ನು ನೇಮಕ ಮಾಡತಕ್ಕುದು.

55. ಕಲೆಕ್ಟರನಿಂದ ವ್ಯವಸ್ಥಾಪಕನ ನೇಮಕಾತಿ:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತನ್ನು 54ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಜಿಲ್ಲಾ ನ್ಯಾಯಾಲಯವು ಕಲೆಕ್ಟರನಿಗೆ ವಹಿಸಿಕೊಟ್ಟಿರುವಲ್ಲಿ, ಅವನು ರಾಜ್ಯ ಸರ್ಕಾರದ ಅಥವಾ ಆ ಬಗ್ಗೆ ರಾಜ್ಯ ಸರ್ಕಾರವು ನೇಮಕ ಮಾಡಿದ ಯಾವುದೇ ಪ್ರಾಧಿಕಾರದ ನಿಯಂತ್ರಣಕ್ಕೊಳಪಟ್ಟು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪನೆಗಾಗಿ ಯಾವನೇ ಸೂಕ್ತ ವ್ಯಕ್ತಿಯನ್ನು ನೇಮಕ ಮಾಡಬಹುದು.

56. ಸ್ವತ್ತಿನ ವ್ಯವಸ್ಥಾಪಕನು ಬಂಧ ಪತ್ರವನ್ನು ಬರೆದುಕೊಡತಕ್ಕುದು:- ಜಿಲ್ಲಾ ನ್ಯಾಯಾಲಯದಿಂದ ಅಥವಾ ಕಲೆಕ್ಟರನಿಂದ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪಕನೆಂದು ನೇಮಕಗೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು, ನೇಮಕಾತಿ ಪ್ರಾಧಿಕಾರವು ಹಾಗೆ ಅಗತ್ಯ ಪಡಿಸಿದರೆ ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸ್ವತ್ತಿನ ಎಲ್ಲ ಸ್ವೀಕೃತಿಗಾಗಿ ಲೆಕ್ಕ ಕೊಡಲು, ಆ ಪ್ರಾಧಿಕಾರವು ನಿರ್ದಿಷ್ಟ ಪಡಿಸಬಹುದಾದಂಥ ಮೊತ್ತಕ್ಕಾಗಿ ಬಂಧ ಪತ್ರವನ್ನು ಅಂಥ ನಮೂನೆಯಲ್ಲಿ ಮತ್ತು ಅಂಥ ಜಾಮೀನುದಾರರೊಂದಿಗೆ ಬರೆದುಕೊಡತಕ್ಕುದು.

57. ಪಾಲಕರ ಮತ್ತು ವ್ಯವಸ್ಥಾಪಕರ ನೇಮಕಾತಿ ಮತ್ತು ಅವರ ಪರಿಶ್ರಮಧನ:- (1) ಜಿಲ್ಲಾ ನ್ಯಾಯಾಲಯವು ಅಥವಾ ಸಂದರ್ಭಾನುಸಾರ ಕಲೆಕ್ಟರನು ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ, ಹಾಗೆ ನೇಮಕ ಮಾಡುವುದು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಪ್ರಯೋಜನಕ್ಕಾಗಿರುವುದೆಂದು ಪರ್ಯಾಲೋಚಿಸಿದ ಹೊರತು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನಾಗಿರಲು ಅಥವಾ ಸಂದರ್ಭಾನುಸಾರ, ಅವನ ಸ್ವತ್ತಿನ ವ್ಯವಸ್ಥಾಪಕನಾಗಿರಲು, 53ನೇ, 54ನೇ ಅಥವಾ 55ನೇ ಪ್ರಕರಣದ ಮೇರೆಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಕಾನೂನು ಸಮ್ಮತ ವಾರಸುದಾರನಾಗಿರುವ ಯಾವನೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ.

(2) ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನಿಗೆ ಅಥವಾ ಅವನ ಸ್ವತ್ತಿನ ವ್ಯವಸ್ಥಾಪಕನಿಗೆ ಅಥವಾ ಅವರಿಬ್ಬರಿಗೂ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನಿಂದ ನೇಮಕಾತಿ ಪ್ರಾಧಿಕಾರವು ನಿರ್ಧರಿಸಬಹುದಾದಂಥ ಭತ್ಯೆಯನ್ನು ಸಂದಾಯ ಮಾಡತಕ್ಕುದು.

58. ಪಾಲಕನ ಮತ್ತು ವ್ಯವಸ್ಥಾಪಕನ ಕರ್ತವ್ಯಗಳು:- (1) ಈ ಅಧಿನಿಯಮದ ಮೇರೆಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನೆಂದು ಅಥವಾ ಅವನ ಸ್ವತ್ತಿನ ವ್ಯವಸ್ಥಾಪಕನೆಂದು ಅಥವಾ ಅವೆರಡೂ ಆಗಿ ನೇಮಕಗೊಂಡ, ಪ್ರತಿಯೊಬ್ಬ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಅಥವಾ ಅವನ ಸ್ವತ್ತಿನ ಅಥವಾ ಆ ವ್ಯಕ್ತಿ ಮತ್ತು ಸ್ವತ್ತು ಇವೆರಡರ ರಕ್ಷಣೆಯನ್ನು ನೋಡಿಕೊಳ್ಳತಕ್ಕುದು ಮತ್ತು ಅವನು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯನ್ನು ಮತ್ತು ಅವನನ್ನು ಅವಲಂಬಿಸಿರುವಂಥ ಅವನ ಕುಟುಂಬದ ಸದಸ್ಯರ ಪೋಷಣೆಗಾಗಿ ಜವಾಬ್ದಾರನಾಗಿರತಕ್ಕುದು.

(2) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನೆಂದು ನೇಮಕಗೊಂಡ ವ್ಯಕ್ತಿ ಮತ್ತು ಅವನ ಸ್ವತ್ತಿನ ವ್ಯವಸ್ಥಾಪಕನೆಂದು ನೇಮಕಗೊಂಡ ವ್ಯಕ್ತಿ- ಬೇರೆ ಬೇರೆ ವ್ಯಕ್ತಿಗಳಾಗಿರುವಲ್ಲಿ, ಸ್ವತ್ತಿನ ವ್ಯವಸ್ಥಾಪಕನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಾಲಕನಿಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಮತ್ತು ಅವನನ್ನು ಅವಲಂಬಿಸಿರುವಂಥ ಅವನ ಕುಟುಂಬದ ಸದಸ್ಯರ ಪೋಷಣೆಗಾಗಿ ಪಾಲಕನನ್ನು ನೇಮಕ ಮಾಡಿದ ಪ್ರಾಧಿಕಾರವು ನಿಗದಿಪಡಿಸಬಹುದಾದಂಥ ಭತ್ಯೆಯನ್ನು ಸಂದಾಯ ಮಾಡತಕ್ಕುದು.

59. ವ್ಯವಸ್ಥಾಪಕನ ಅಧಿಕಾರಗಳು:-(1) ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ವ್ಯವಸ್ಥಾಪಕನು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅವನನ್ನು ವ್ಯವಸ್ಥಾಪಕನೆಂದು ನೇಮಕ ಮಾಡಲಾಗಿದೆಯೋ, ಆ ಸ್ವತ್ತಿನ ವ್ಯವಸ್ಥಾಪನೆಯ ಬಗ್ಗೆ, ಅವನು ಮಾನಸಿಕವಾಗಿ ಅಸ್ವಸ್ಥನಾಗಿಲ್ಲದೆ ಇದ್ದಿದ್ದರೆ ಆ ಸ್ವತ್ತಿನ ಒಡೆಯನೆಂದು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯು ಚಲಾಯಿಸಬಹುದಾಗಿದ್ದವೇ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅವನು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸಂಪದಕ್ಕೆ ಬಾಕಿಯಾದ ಎಲ್ಲಾ ಕ್ಲೇಮುಗಳನ್ನು ವಸೂಲು ಮಾಡತಕ್ಕುದು ಮತ್ತು ಆ ಸಂಪದದಿಂದ ಕಾನೂನುಬದ್ಧವಾಗಿ ಬಾಕಿಯಾದ ಎಲ್ಲಾ ಋಣಗಳನ್ನು ಸಂದಾಯ ಮಾಡತಕ್ಕುದು ಮತ್ತು ಎಲ್ಲಾ ಹೊಣೆಗಾರಿಕೆಗಳನ್ನು ವಿಮುಕ್ತಗೊಳಿಸತಕ್ಕುದು:

ಪರಂತು, ಆ ವ್ಯವಸ್ಥಾಪಕನು ಆ ಬಗ್ಗೆ ಜಿಲ್ಲಾ ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡ ಹೊರತು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವುದೇ ಸ್ಥಿರಸ್ವತ್ತನ್ನು ಅಡಮಾನ ಮಾಡತಕ್ಕುದಲ್ಲ, ಅದರ ಮೇಲೆ ಯಾವುದೇ ಋಣಭಾರವನ್ನು ಹೊರಿಸತಕ್ಕುದಲ್ಲ, ಅಥವಾ ಅದನ್ನು ಮಾರಾಟದ, ದಾನದ, ವಿನಿಮಯದ ಮೂಲಕವಾಗಲಿ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕುದಲ್ಲ ಅಥವಾ ಯಾವುದೇ ಅಂಥ ಸ್ವತ್ತನ್ನು ಐದು ವರ್ಷಗಳನ್ನು ಮೀರುವ ಅವಧಿಯವರೆಗೆ ಗೇಣಿಗೆ ಕೊಡತಕ್ಕುದಲ್ಲ.

(2) ಜಿಲ್ಲಾ ನ್ಯಾಯಾಲಯವು, ವ್ಯವಸ್ಥಾಪಕನು ಮಾಡಿಕೊಂಡ ಅರ್ಜಿಯ ಮೇಲೆ, ಆ ನ್ಯಾಯಾಲಯವು ವಿಧಿಸಲು ಸೂಕ್ತವೆಂದು ಯೋಚಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವುದೇ ಸ್ಥಿರಸ್ವತ್ತನ್ನು ಅಡಮಾನ ಮಾಡಲು, ಅದರ ಮೇಲೆ ಋಣಭಾರವನ್ನು ಹೊರಿಸಲು ಅಥವಾ ಅದನ್ನು ಮಾರಾಟದ, ದಾನದ, ವಿನಿಮಯದ ಮೂಲಕವಾಗಲಿ ಅಥವಾ ಅನ್ಯಥಾ ವರ್ಗಾವಣೆ ಮಾಡಲು ಅಥವಾ ಯಾವುದೇ ಅಂಥ ಸ್ವತ್ತನ್ನು ಐದು ವರ್ಷಗಳನ್ನು ಮೀರುವ ಅವಧಿಯವರೆಗೆ ಗೇಣಿಗೆ ಕೊಡಲು ಅವನಿಗೆ ಅನುಮತಿಯನ್ನು ಕೊಡಬಹುದು.

(3) ಜಿಲ್ಲಾ ನ್ಯಾಯಾಲಯವು, ಅನುಮತಿ ಕೋರಿರುವ ಪ್ರತಿಯೊಂದು ಅರ್ಜಿಯ ಬಗ್ಗೆ ನೋಟೀಸನ್ನು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಸಂಬಂಧಿಕನಿಗೆ ಅಥವಾ ಸ್ನೇಹಿತನಿಗೆ ಜಾರಿಗೊಳಿಸುವಂತೆ ಮಾಡತಕ್ಕುದು ಮತ್ತು ಆ ಸಂಬಂಧಿಕನಿಂದ ಅಥವಾ ಸ್ನೇಹಿತನಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ಮಾಡಿದ ತರುವಾಯ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅನುಮತಿಯನ್ನು ಕೊಡತಕ್ಕುದು ಅಥವಾ ನಿರಾಕರಿಸತಕ್ಕುದು.

60. ವ್ಯವಸ್ಥಾಪಕನು ವಿವರಣಾ ಪಟ್ಟಿ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಒದಗಿಸತಕ್ಕುದು:- (1) ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ವ್ಯವಸ್ಥಾಪಕನು, ತನ್ನ ನೇಮಕಾತಿಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸೇರಿದ ಸ್ಥಿರಸ್ವತ್ತಿನ ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪರವಾಗಿ ಸ್ವೀಕರಿಸಿದ ಎಲ್ಲಾ ಆಸ್ತಿಗಳು ಮತ್ತು ಇತರ ಚರಸ್ವತ್ತಿನ ವಿವರಣಾ ಪಟ್ಟಿಯನ್ನು, ಮಾನಸಿಕವಾಗಿ ಹಾಗೆ ಅಸ್ವಸ್ಥನಾಗಿರುವ ಆ ವ್ಯಕ್ತಿಗೆ ಬಾಕಿಯಾದ ಎಲ್ಲಾ ಕ್ಲೇಮುಗಳು ಮತ್ತು ಅವನು ಕೊಡಬೇಕಾದ ಎಲ್ಲಾ ಋಣಗಳು ಮತ್ತು ಹೊಣೆಗಾರಿಕೆಗಳ ವಿವರಪತ್ರದೊಂದಿಗೆ ತನ್ನನ್ನು ನೇಮಕ ಮಾಡಿ ಪ್ರಾಧಿಕಾರಕ್ಕೆ ಒದಗಿಸತಕ್ಕುದು.

(2) ಪ್ರತಿಯೊಬ್ಬ ಅಂಥ ವ್ಯವಸ್ಥಾಪಕನು, ಸದರಿ ನೇಮಕಾತಿ ಪ್ರಾಧಿಕಾರಕ್ಕೆ, ಪ್ರತಿಯೊಂದು ಹಣಕಾಸು ವರ್ಷವು ಮುಕ್ತಾಯವಾದಂದಿನಿಂದ ಮೂರು ತಿಂಗಳ ಅವಧಿಯೊಳಗೆ ತನ್ನ ವಶದಲ್ಲಿರುವ ಸ್ವತ್ತು ಮತ್ತು ಆಸ್ತಿಗಳ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗಾಗಿ ಸ್ವೀಕರಿಸಿದ ಮತ್ತು ಬಟವಾಡೆ ಮಾಡಿದ ಮೊತ್ತಗಳ ಮತ್ತು ತನ್ನ ಬಳಿ ಉಳಿದಿರುವ ಶಿಲ್ಕಿನ ಲೆಕ್ಕವನ್ನು ಸಹ ಒದಗಿಸತಕ್ಕುದು.

**61. ಜಿಲ್ಲಾ ನ್ಯಾಯಾಲಯದ ಆದೇಶಗಳ ಮೇರೆಗೆ ಹಸ್ತಾಂತರಣ ಪತ್ರಗಳನ್ನು ಬರೆದುಕೊಡಲು ವ್ಯವಸ್ಥಾಪಕನ ಅಧಿಕಾರ:-** ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ವ್ಯವಸ್ಥಾಪಕನು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಹೆಸರಿನಲ್ಲಿ ಮತ್ತು ಅವನ ಪರವಾಗಿ -

(ಎ) ಜಿಲ್ಲಾ ನ್ಯಾಯಾಲಯವು ಅನುಮತಿಸಬಹುದಾದಂತೆ, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಸ್ವತ್ತಿನ ಮಾರಾಟದ ಮೂಲಕ, ಅಡಮಾನದ ಮೂಲಕ ಅಥವಾ ಅನ್ಯಥಾ ಅಂಥ ಎಲ್ಲ ಹಸ್ತಾಂತರಣ ಪತ್ರಗಳನ್ನು ಮತ್ತು ವರ್ಗಾವಣೆಗಳ ಲಿಖಿತಗಳನ್ನು ಬರೆದುಕೊಡಬಹುದು; ಮತ್ತು

(ಬಿ) ಜಿಲ್ಲಾ ನ್ಯಾಯಾಲಯದ ಆದೇಶಗಳಿಗೊಳಪಟ್ಟು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯಲ್ಲಿ ಆ ಬಗ್ಗೆ ನಿಹಿತವಾದ ಎಲ್ಲಾ ಅಧಿಕಾರಗಳನ್ನು ತನ್ನ ವೈಯಕ್ತಿಕ ಸಾಮರ್ಥ್ಯದಲ್ಲಿ ಅಥವಾ ನ್ಯಾಸಧಾರಿಯಾಗಿರುವ ಅಥವಾ ಪಾಲಕನಾಗಿರುವ ತನ್ನ ಸಾಮರ್ಥ್ಯದಲ್ಲಿ ಚಲಾಯಿಸಬಹುದು.

62. ಜಿಲ್ಲಾ ನ್ಯಾಯಾಲಯವು ನಿರ್ದೇಶಿಸಿದ ಕರಾರುಗಳನ್ನು ವ್ಯವಸ್ಥಾಪಕನು ನೆರವೇರಿಸತಕ್ಕುದು:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು, ತನ್ನ ಮಾನಸಿಕ ಅಸ್ವಸ್ಥತೆಗೆ ಮುಂಚೆ ತನ್ನ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಲು ಅಥವಾ ಅನ್ಯಥಾ ವಿಲೇ ಮಾಡಲು ಕರಾರು ಮಾಡಿಕೊಂಡಿರುವಲ್ಲಿ ಮತ್ತು ಅಂಥ ಕರಾರು ಜಿಲ್ಲಾ ನ್ಯಾಯಾಲಯದ ಅಭಿಪ್ರಾಯದಲ್ಲಿ ನೆರವೇರಿಸತಕ್ಕಂಥ ಸ್ವರೂಪದ್ದಾಗಿದ್ದರೆ, ಆ ಜಿಲ್ಲಾ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕನಿಗೆ ಅಂಥ ಕರಾರನ್ನು ನೆರವೇರಿಸಲು ಮತ್ತು ಆ ಕರಾರನ್ನು ಪೂರೈಸುವ ಬಗ್ಗೆ ನ್ಯಾಯಾಲಯವು ಅವಶ್ಯವೆಂದು ಪರ್ಯಾಲೋಚಿಸುವ ಅಂಥ ಇತರ ಕಾರ್ಯಗಳನ್ನು ಮಾಡಲು ನಿರ್ದೇಶಿಸಬಹುದು ಮತ್ತು ಆ ತರುವಾಯ ಆ ವ್ಯವಸ್ಥಾಪಕನು ತದನುಸಾರವಾಗಿ ಕೆಲಸ ಮಾಡಲು ಬದ್ಧನಾಗಿರತಕ್ಕುದು.

63. ವ್ಯವಹಾರ ಆವರಣದ ವಿಲೆ:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗುವುದಕ್ಕೆ ಮುಂಚೆ ಅವನು ವ್ಯವಹಾರದಲ್ಲಿ ತೊಡಗಿದ್ದಿದ್ದಲ್ಲಿ, ಅವನ ವ್ಯವಹಾರ ಆವರಣವನ್ನು ವಿಲೆ ಮಾಡುವುದು ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಪ್ರಯೋಜನಕ್ಕಾಗಿದೆಯೆಂದು ಜಿಲ್ಲಾ ನ್ಯಾಯಾಲಯ ಕಂಡುಬಂದರೆ, ಅದು, ಈ ಅಧಿನಿಯಮದ ಮೇರೆಗೆ ಅಂಥ ವ್ಯಕ್ತಿಯ ಸ್ವತ್ತಿಗೆ ಸಂಬಂಧಪಟ್ಟಂತೆ ನೇಮಕವಾದ ವ್ಯವಸ್ಥಾಪಕನಿಗೆ, ಅಂಥ ಆವರಣವನ್ನು ಮಾರಲು ಮತ್ತು ವಿಲೆ ಮಾಡಲು ಮತ್ತು ಆ ಜಿಲ್ಲಾ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅದರ ಮಾರಾಟ ಉತ್ಪತ್ತಿಯನ್ನು ವಿನಿಯೋಗಿಸಲು ನಿರ್ದೇಶಿಸಬಹುದು ಮತ್ತು ಆ ತರುವಾಯ ಆ ವ್ಯವಸ್ಥಾಪಕನು ತದನುಸಾರವಾಗಿ ಕೆಲಸ ಮಾಡಲು ಬದ್ಧನಾಗಿರತಕ್ಕುದು.

64. ವ್ಯವಸ್ಥಾಪಕನು ಗೇಣಿಗಳನ್ನು ವಿಲೆ ಮಾಡಬಹುದು:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು, ಗೇಣಿಗೆ ಅಥವಾ ಒಳ ಗೇಣಿಗೆ ಹಕ್ಕುಳ್ಳವನಾಗಿರುವಲ್ಲಿ ಮತ್ತು ಅಂಥ ವ್ಯಕ್ತಿಯ ಸ್ವತ್ತಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕನಿಗೆ ಅಂಥ ಗೇಣಿಯನ್ನು ಅಥವಾ ಒಳ ಗೇಣಿಯನ್ನು ವಿಲೆ ಮಾಡುವುದು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪ್ರಯೋಜನಕ್ಕಾಗಿದೆಯೆಂದು ಕಂಡುಬರುವಲ್ಲಿ ಅಂಥ ವ್ಯವಸ್ಥಾಪಕನು, ಜಿಲ್ಲಾ ನ್ಯಾಯಾಲಯದ ಆದೇಶಗಳನ್ನು ಪಡೆದುಕೊಂಡ ತರುವಾಯ, ಅಂಥ ಗೇಣಿಯನ್ನು ಅಥವಾ ಒಳ ಗೇಣಿಯನ್ನು ಆ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಅಂಥ ಪ್ರತಿಫಲಕ್ಕಾಗಿ ಮತ್ತು ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಬಿಟ್ಟುಕೊಡಬಹುದು, ಹಸ್ತಾಂತರಿಸಬಹುದು ಅಥವಾ ಅನ್ಯಥಾ ವಿಲೆ ಮಾಡಬಹುದು.

65. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಆದೇಶವನ್ನು ಮಾಡುವ ಅಧಿಕಾರ:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಅಥವಾ ಅವನ ಸ್ವತ್ತಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವನೇ ವ್ಯಕ್ತಿಯು ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಆ ನ್ಯಾಯಾಲಯವು ಈ ಅಧ್ಯಾಯದ ಉಪಬಂಧಗಳಿಗೊಳಪಟ್ಟು ಆ ಪರಿಸ್ಥಿತಿಗಳಲ್ಲಿ ಆ ವಿಷಯಕ್ಕೆ ಸಂಬಂಧಪಟ್ಟಂತೆ ಅದು ಸೂಕ್ತವೆಂದು ಯೋಚಿಸಬಹುದಾದಂಥ ಆದೇಶವನ್ನು ಮಾಡಬಹುದು.

66. ವಿವರಣಾಪಟ್ಟಿಯ ಅಥವಾ ಲೆಕ್ಕಪತ್ರಗಳ ಯಥಾರ್ಥತೆಯನ್ನು ಪ್ರಶ್ನಿಸಿದ್ದರೆ ವ್ಯವಹರಣೆ:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಸಂಬಂಧಿಕನು ಅಥವಾ ಕಲೆಕ್ಟರನು, ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿಯ ಮೂಲಕ 60ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಆ ವಿವರಣಾ ಪಟ್ಟಿಯ ಅಥವಾ ವಿವರ ಪತ್ರದ ಅಥವಾ ಸಂದರ್ಭಾನುಸಾರ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ವಾರ್ಷಿಕ ಲೆಕ್ಕದ ಯಥಾರ್ಥತೆಯನ್ನು ಪ್ರಶ್ನಿಸಿದರೆ, ಆ ನ್ಯಾಯಾಲಯವು ಆ ವ್ಯವಸ್ಥಾಪಕನನ್ನು ಸಮನು ಮಾಡಬಹುದು ಮತ್ತು ಆ ವಿಷಯದ ಬಗ್ಗೆ ಕ್ಷಿಪ್ರವಾಗಿ ವಿಚಾರಣೆ ನಡೆಸಬಹುದು ಮತ್ತು ಅದು ಆ ಬಗ್ಗೆ ತಾನು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು:

ಪರಂತು, ಆ ಜಿಲ್ಲಾ ನ್ಯಾಯಾಲಯವು ಅದರ ವಿವೇಚನಾನುಸಾರ ಅಂಥ ಅರ್ಜಿಯನ್ನು, ಅದಕ್ಕೆ ಅಧೀನವಾದ ಯಾವುದೇ ನ್ಯಾಯಾಲಯಕ್ಕೆ ಅಥವಾ ಆ ವ್ಯವಸ್ಥಾಪಕನನ್ನು ಕಲೆಕ್ಟರನು ನೇಮಕಮಾಡಿದ್ದು, ಆ ಕಲೆಕ್ಟರನು ಆ ಅರ್ಜಿಯನ್ನು ಸಲ್ಲಿಸಿಲ್ಲದ ಯಾವುದೇ ಪ್ರಕರಣದಲ್ಲಿ ಕಲೆಕ್ಟರನಿಗೆ ಕಳುಹಿಸಬಹುದು.

67. ಸಂಪದ ಉತ್ಪತ್ತಿಯನ್ನು ಸರ್ಕಾರಿ ಖಜಾನೆಯಲ್ಲಿ ಸಂದಾಯ ಮಾಡುವುದು ಮತ್ತು ಅದರ ಹೂಡಿಕೆ:- ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಚಾಲ್ತಿ ವೆಚ್ಚಗಳಿಗಾಗಿ ಅಥವಾ ಅವನ ಸ್ವತ್ತಿನ ವ್ಯವಸ್ಥಾಪನೆಗಾಗಿ ಅಗತ್ಯವಾಗಿರಬಹುದಾದುದಕ್ಕಿಂತ ಹೆಚ್ಚಾಗಿ ವ್ಯವಸ್ಥಾಪಕನು ಯಾವುದೇ ಸಂಪದದ ಲೆಕ್ಕದಲ್ಲಿ ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು ಆ ಸಂಪದದ ಲೆಕ್ಕದಲ್ಲಿ ಸಾರ್ವಜನಿಕ ಖಜಾನೆಯಲ್ಲಿ ಸಂದಾಯ ಮಾಡತಕ್ಕುದು ಮತ್ತು ಅವನನ್ನು ನೇಮಕ ಮಾಡಿದ ಪ್ರಾಧಿಕಾರವು ಬರಹದಲ್ಲಿ ಕಾರಣಗಳನ್ನು ದಾಖಲು ಮಾಡಿ, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಹಿತಾಸಕ್ತಿಗಳಲ್ಲಿ ಅಂಥ ಮೊತ್ತಗಳನ್ನು ಅನ್ಯಥಾ ಹೂಡತಕ್ಕುದೆಂದು ಅಥವಾ ವಿನಿಯೋಗಿಸತಕ್ಕುದೆಂದು

ನಿರ್ದೇಶಿಸಿದ ಹೊರತು, ಅವುಗಳನ್ನು ಭಾರತ ನ್ಯಾಸಗಳ ಅಧಿನಿಯಮ, 1882 (1882ರ 2)ರ 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತಾ ಪತ್ರದಲ್ಲಿ ಕಾಲಕಾಲಕ್ಕೆ ಹೂಡತಕ್ಕುದು.

68. ಲೆಕ್ಕ ಕೊಡುವುದಕ್ಕಾಗಿ ಸಂಬಂಧಿಕನು ದಾವೆ ಹೂಡಬಹುದು:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಸಂಬಂಧಿಕನು, ಜಿಲ್ಲಾ ನ್ಯಾಯಾಲಯದ ಅನುಮತಿಪಡೆದು, ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವನೇ ವ್ಯವಸ್ಥಾಪಕನನ್ನು' ಪದದಿಂದ ಅಥವಾ ನ್ಯಾಸದಿಂದ ಅವನನ್ನು ತೆಗೆದುಹಾಕಿದ ತರುವಾಯ ಅಂಥ ಯಾವನೇ ವ್ಯಕ್ತಿಯಿಂದ ಅಥವಾ ಅವನ ಮರಣದ ಸಂದರ್ಭದಲ್ಲಿ ಅವನ ಕಾನೂನು ಸಮ್ಮತ ಪ್ರತಿನಿಧಿಯಿಂದ, ಆಗ ಅವನ ವ್ಯವಸ್ಥಾಪನೆಯಲ್ಲಿ ಅಥವಾ ಹಿಂದೆ ಇದ್ದ ಯಾವುದೇ ಸ್ವತ್ತಿಗೆ ಅಥವಾ ಅಂಥ ಸ್ವತ್ತಿನ ಲೆಕ್ಕದಲ್ಲಿ ಅವನು ಸ್ವೀಕರಿಸಿದ ಹಣದ ಯಾವುದೇ ಮೊತ್ತಗಳಿಗೆ ಅಥವಾ ಇತರ ಸ್ವತ್ತಿಗೆ ಸಂಬಂಧಿಸಿದಂತೆ ಲೆಕ್ಕ ಕೊಡಲು ದಾವೆಯನ್ನು ಹೂಡಬಹುದು.

69. ವ್ಯವಸ್ಥಾಪಕನನ್ನು ಮತ್ತು ಪಾಲಕನನ್ನು ತೆಗೆದುಹಾಕುವುದು:- (1) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತಿನ ವ್ಯವಸ್ಥಾಪಕನನ್ನು ಸಾಕಷ್ಟು ಕಾರಣಗಳಿಂದಾಗಿ ಮತ್ತು ಆ ಕಾರಣಗಳನ್ನು ಬರಹದಲ್ಲಿ ದಾಖಲು ಮಾಡಿ ಅವನನ್ನು ನೇಮಕ ಮಾಡಿದಂಥ ಪ್ರಾಧಿಕಾರವು ತೆಗೆದು ಹಾಕಬಹುದು ಮತ್ತು ಅಂಥ ಪ್ರಾಧಿಕಾರವು ಅವನ ಸ್ಥಳದಲ್ಲಿ ಹೊಸ ವ್ಯವಸ್ಥಾಪಕನನ್ನು ನೇಮಕ ಮಾಡಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಯಾವನೇ ವ್ಯವಸ್ಥಾಪಕನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಎಲ್ಲಾ ಸ್ವತ್ತಿನ ಪ್ರಭಾರವನ್ನು ಹೊಸ ವ್ಯವಸ್ಥಾಪಕನಿಗೆ ವಶಾವಣೆ ಮಾಡಲು ಮತ್ತು ತಾನು ಸ್ವೀಕರಿಸಿದ ಅಥವಾ ಬಟವಾಡೆ ಮಾಡಿದ ಎಲ್ಲಾ ಹಣಗಳ ಬಗ್ಗೆ ಲೆಕ್ಕ ಕೊಡಲು ಬದ್ಧನಾಗಿರತಕ್ಕುದು.

(3) ಜಿಲ್ಲಾ ನ್ಯಾಯಾಲಯವು ಸಾಕಷ್ಟು ಕಾರಣಗಳಿಗಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವನೇ ಪಾಲಕನನ್ನು ತೆಗೆದುಹಾಕಬಹುದು ಮತ್ತು ಅವನ ಸ್ಥಳದಲ್ಲಿ ಹೊಸ ಪಾಲಕನನ್ನು ನೇಮಕ ಮಾಡಬಹುದು.

70. ಸದಸ್ಯನು ಮಾನಸಿಕವಾಗಿ ಅಸ್ವಸ್ಥನಾದ ಮೇಲೆ ಪಾಲುಗಾರಿಕೆಯ ವಿಘಟನೆ ಮತ್ತು ಅದರ ಸ್ವತ್ತಿನ ವಿಲೆ:-(1) ಪಾಲುಗಾರಿಕೆ ಫರ್ಮಿನ ಸದಸ್ಯನಾಗಿರುವ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ಕಂಡುಬಂದಲ್ಲಿ ಜಿಲ್ಲಾ ನ್ಯಾಯಾಲಯವು, ಪಾಲುಗಾರಿಕೆಯ ವಿಘಟನೆ ಕುರಿತು ಯಾವನೇ ಇತರ ಪಾಲುಗಾರನು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ಅಂಥ ವಿಘಟನೆಯನ್ನು ಕೋರಲು ಹಕ್ಕುಳ್ಳವನಾಗಿರುವನೆಂದು ಆ ನ್ಯಾಯಾಲಯಕ್ಕೆ ಕಂಡುಬರುವ ಯಾವನೇ ವ್ಯಕ್ತಿಯ ಅರ್ಜಿಯ ಮೇಲೆ ಆ ಪಾಲುಗಾರಿಕೆಯನ್ನು ವಿಘಟಿಸಬಹುದು.

(2) (1)ನೇ ಉಪ-ಪ್ರಕರಣವು ಅನ್ವಯವಾಗುವಂಥ ಪಾಲುಗಾರಿಕೆ ಫರ್ಮು ಆ ಉಪ-ಪ್ರಕರಣದ ಮೇರೆಗೆ ವಿಘಟನೆಗೊಂಡ ಮೇಲೆ ಅಥವಾ ಅನ್ಯಥಾ, ಕಾನೂನಿನ ಯುಕ್ತ ಕ್ರಮದಲ್ಲಿ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕನು, ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯ ಹೆಸರಿನಲ್ಲಿ ಅಥವಾ ಅವನ ಪರವಾಗಿ ಆ ಜಿಲ್ಲಾ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ನಿಬಂಧನೆಗಳ ಮೇಲೆ ಆ ಪಾಲುಗಾರಿಕೆಯ ಸ್ವತ್ತನ್ನು ವಿಲೇ ಮಾಡಲು ಆ ಫರ್ಮಿನ ಇತರ ಪಾಲುಗಾರರೊಂದಿಗೆ ಸೇರಿಕೊಳ್ಳಬಹುದು ಮತ್ತು ಪಾಲುಗಾರಿಕೆಯ ವಿಘಟನೆಯನ್ನು ಜಾರಿಗೊಳಿಸುವುದಕ್ಕಾಗಿ ಎಲ್ಲಾ ಅಂಥ ಕಾರ್ಯಗಳನ್ನು ಮಾಡತಕ್ಕುದು.

71. ಕೆಲವು ಸಂದರ್ಭಗಳಲ್ಲಿ ವ್ಯವಸ್ಥಾಪಕನನ್ನು ನೇಮಕ ಮಾಡದೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪೋಷಣೆಗಾಗಿ ಸ್ವತ್ತನ್ನು ವಿನಿಯೋಗಿಸಲು ಅಧಿಕಾರ:- (1) ಈ ಹಿಂದೆ ಹೇಳಿದ ಉಪಬಂಧಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಜಿಲ್ಲಾ ನ್ಯಾಯಾಲಯವು ಆ ಸಂಪದದ ವ್ಯವಸ್ಥಾಪಕನನ್ನು ನೇಮಕ ಮಾಡುವುದಕ್ಕೆ ಬದಲಾಗಿ, ನಗದಿನ ಸಂದರ್ಭದಲ್ಲಿ ಆ ನಗದನ್ನು ಮತ್ತು ಯಾವುದೇ ಇತರ ಸ್ವತ್ತಿನ ಸಂದರ್ಭದಲ್ಲಿ ಅದರ ಉತ್ಪನ್ನವನ್ನು ವಸೂಲು ಮಾಡತಕ್ಕುದು ಎಂದು ಮತ್ತು ಅದನ್ನು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಮತ್ತು ಅವನನ್ನು ಅವಲಂಬಿಸಿರುವ ಅವನ ಕುಟುಂಬದ ಅಂಥ ಸದಸ್ಯರ ಪೋಷಣೆಗಾಗಿ ವಿನಿಯೋಗಿಸುವುದಕ್ಕಾಗಿ ಈ ಬಗ್ಗೆ ಜಿಲ್ಲಾ ನ್ಯಾಯಾಲಯವು ನೇಮಕ ಮಾಡಬಹುದಾದಂಥ ವ್ಯಕ್ತಿಗೆ ಸಂದಾಯಮಾಡತಕ್ಕುದು ಅಥವಾ ವಶಾವಣೆ ಮಾಡತಕ್ಕುದು ಎಂದು ಆದೇಶಿಸಬಹುದು.

(2) (1) ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯು ಕೊಟ್ಟಿರುವ ರಸೀದಿಯು, ಹಾಗೆ ನೇಮಕಗೊಂಡ ವ್ಯಕ್ತಿಗೆ ಹಣವನ್ನು ಸಂದಾಯ ಮಾಡುವ ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಯಾವುದೇ ಸ್ವತ್ತನ್ನು ವಶಾವಣೆ ಮಾಡುವ ಯಾವನೇ ವ್ಯಕ್ತಿಗೆ ಸಿಂಧುವಾದ ತೀರಿಕೆಯಾಗಿರತಕ್ಕುದು.

72. ಕೆಲವು ಸಂದರ್ಭಗಳಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸೇರಿದ ಸ್ಟಾಕು, ಭದ್ರತಾ ಪತ್ರಗಳು ಅಥವಾ ಷೇರುಗಳ ವರ್ಗಾವಣೆಯನ್ನು ಆದೇಶಿಸಲು ಅಧಿಕಾರ:- ಕಂಪನಿಯಲ್ಲಿನ ಯಾವುದೇ ಸ್ಟಾಕು ಅಥವಾ ಸರ್ಕಾರಿ ಭದ್ರತಾ ಪತ್ರಗಳು ಅಥವಾ ಯಾವುದೇ ಷೇರು (ಭಾರತದೊಳಗೆ, ವರ್ಗಾವಣೆಯಾಗುವಂಥವು ಅಥವಾ ಸಂದಾಯ ಮಾಡಬೇಕಾದಂಥ ಲಾಭಾಂಶಗಳು)- ಇವುಗಳಿಗೆ ಫಲಾನುಭವದ ಹಕ್ಕುಳ್ಳ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯ ಹೆಸರಿನಲ್ಲಿರುವಲ್ಲಿ ಅಥವಾ ಅದು ಅವನಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವ್ಯವಸ್ಥಾಪಕನಲ್ಲಿ ಅಥವಾ ಅವನ ನ್ಯಾಸಧಾರಿಯಲ್ಲಿ ನಿಹಿತವಾಗಿರುವಲ್ಲಿ ಮತ್ತು ವ್ಯವಸ್ಥಾಪಕನು ಮರಣ ಶಾಸನವನ್ನು ಬರೆಯದೆ ಮರಣ ಹೊಂದುವಲ್ಲಿ ಅಥವಾ ಅವನೇ ಮಾನಸಿಕವಾಗಿ ಅಸ್ವಸ್ಥನಾಗುವಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಹೊರಗಡೆ ಇರುವಲ್ಲಿ, ಅಥವಾ ಆ ವ್ಯವಸ್ಥಾಪಕನು ಜೀವಿಸಿರುವನೇ ಅಥವಾ ಮರಣ ಹೊಂದಿರುವನೇ ಎಂಬುದು ಅನಿಶ್ಚಿತವಾಗಿರುವಲ್ಲಿ ಅಥವಾ ಅವನ ಸ್ಥಾನದಲ್ಲಿ ನೇಮಕಗೊಂಡ ಹೊಸ ವ್ಯವಸ್ಥಾಪಕನಿಗೆ ಹಾಗೆ ಮಾಡಲು ಆ ನ್ಯಾಯಾಲಯವು ಅಗತ್ಯಪಡಿಸಿದ ತರುವಾಯ ಹದಿನಾಲ್ಕು ದಿವಸಗಳೊಳಗೆ ಆ ಸ್ಟಾಕ್‌ಅನ್ನು, ಭದ್ರತಾ ಪತ್ರಗಳನ್ನು ಅಥವಾ ಷೇರುಗಳನ್ನು ವರ್ಗಾವಣೆ ಮಾಡಲು ಅಥವಾ ಅವುಗಳ ಲಾಭಾಂಶಗಳನ್ನು ಸ್ವೀಕರಿಸಲು ಅಥವಾ ಸಂದಾಯ ಮಾಡಲು ಅವನು ಉಪೇಕ್ಷಿಸುವಲ್ಲಿ ಅಥವಾ ನಿರಾಕರಿಸಿರುವಲ್ಲಿ ಆಗ ಆ ಜಿಲ್ಲಾ

ನ್ಯಾಯಾಲಯವು ಸಂಬಂಧಪಟ್ಟ ಕಂಪನಿಗೆ ಅಥವಾ ಸರ್ಕಾರಕ್ಕೆ ಅದು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಂಥ ವರ್ಗಾವಣೆಗೆ ಅಥವಾ ಅದನ್ನು ವರ್ಗಾಯಿಸಲು ಮತ್ತು ಆ ಲಾಭಾಂಶಗಳನ್ನು ಸ್ವೀಕರಿಸಲು ಮತ್ತು ಸಂದಾಯ ಮಾಡಲು ನಿರ್ದೇಶಿಸಬಹುದು.

73. ಭಾರತದ ಹೊರಗಡೆ ವಾಸಿಸುವ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ಟಾಕು, ಭದ್ರತಾಪತ್ರಗಳು ಅಥವಾ ಷೇರುಗಳ ವರ್ಗಾವಣೆಯನ್ನು ಆದೇಶಿಸಲು ಅಧಿಕಾರ:- ಒಂದು ಕಂಪನಿಯಲ್ಲಿನ ಯಾವುದೇ ಸ್ಟಾಕು ಅಥವಾ ಸರ್ಕಾರಿ ಭದ್ರತಾ ಪತ್ರಗಳು ಅಥವಾ ಷೇರು, ಭಾರತದ ಹೊರಗಡೆ ವಾಸಿಸುವ ಯಾವನೇ ವ್ಯಕ್ತಿಯ ಹೆಸರಿನಲ್ಲಿರುವಲ್ಲಿ ಅಥವಾ ಅವನಲ್ಲಿ ನಿಹಿತವಾಗಿರುವಲ್ಲಿ ಅಂಥ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವುದಾಗಿ ಘೋಷಿಸಲಾಗಿದೆಯೆಂದು ಮತ್ತು ಅವನು ವಾಸಿಸುತ್ತಿರುವ ಸ್ಥಳದ ಕಾನೂನಿಗನುಸಾರವಾಗಿ ಅವನ ವೈಯಕ್ತಿಕ ಸಂಪದವು ಅದರ ವ್ಯವಸ್ಥಾಪನೆಗಾಗಿ ನೇಮಕಗೊಂಡ ವ್ಯಕ್ತಿಯಲ್ಲಿ ನಿಹಿತಗೊಂಡಿದೆ ಎಂದು ಜಿಲ್ಲಾ ನ್ಯಾಯಾಲಯವು ಮನದಟ್ಟು ಮಾಡಿಕೊಂಡ ಮೇಲೆ ಅದು ಆ ಸ್ಟಾಕ್‌ಅನ್ನು, ಭದ್ರತಾ ಪತ್ರಗಳನ್ನು ಅಥವಾ ಷೇರುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ಆ ಜಿಲ್ಲಾ ನ್ಯಾಯಾಲಯವು ಸೂಕ್ತವೆಂದು ಯೋಚಿಸುವಂತೆ ಹಾಗೆ ನೇಮಕಗೊಂಡ ವ್ಯಕ್ತಿಗೆ ಅಥವಾ ಆ ವ್ಯಕ್ತಿಯ ಹೆಸರಿನಲ್ಲಿ ಅಥವಾ ಅನ್ಯಥಾ ವರ್ಗಾವಣೆಯನ್ನು ಮಾಡಲು ಮತ್ತು ಆ ಲಾಭಾಂಶಗಳನ್ನು ಮತ್ತು ಉತ್ಪತ್ತಿಯನ್ನು ಸಹ ಸ್ವೀಕರಿಸಲು ಮತ್ತು ಸಂದಾಯ ಮಾಡಲು ಸಂಬಂಧಪಟ್ಟ ಕಂಪನಿಗೆ ಅಥವಾ ಸರ್ಕಾರಕ್ಕೆ ನಿರ್ದೇಶಿಸಬಹುದು.

74. ತಾತ್ಕಾಲಿಕ ಮಾನಸಿಕ ಅಸ್ವಸ್ಥತೆಯ ಸಂದರ್ಭದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗಾಗಿ ಸ್ವತ್ತನ್ನು ವಿನಿಯೋಗಿಸಲು ಅಧಿಕಾರ:- ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಮಾನಸಿಕ ಅಸ್ವಸ್ಥತೆಯು ತಾತ್ಕಾಲಿಕ ಸ್ವರೂಪದ್ದೆಂದು ಮತ್ತು ತಾತ್ಕಾಲಿಕ ಅವಧಿಗಾಗಿ ಅವನ ಪೋಷಣೆಗಾಗಿ ಅಥವಾ ಅವನನ್ನು ಅವಲಂಬಿಸಿರುವ ಅವನ ಕುಟುಂಬದ ಅಂಥ ಸದಸ್ಯರ ಪೋಷಣೆಗಾಗಿ ವ್ಯವಸ್ಥೆ ಮಾಡುವುದು ವಿಹಿತವೆಂದು ಕಂಡುಬಂದರೆ, ಆ ಜಿಲ್ಲಾ ನ್ಯಾಯಾಲಯವು 71ನೇ ಪ್ರಕರಣದ ಮೇರೆಗಿನ ಅಂಥದೇ ರೀತಿಯಲ್ಲಿ ಅವನ ಸ್ವತ್ತನ್ನು ಅಥವಾ ಅದರ ಸಾಕಷ್ಟು ಭಾಗವನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ವಿನಿಯೋಗಿಸಬೇಕೆಂದು ನಿರ್ದೇಶಿಸಬಹುದು.

75. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮವನ್ನು ಅವನ ಮಾನಸಿಕ ಅಸ್ವಸ್ಥತೆಯು ನಿಂತುಹೋಗಿರುವುದೆಂದು ಜಿಲ್ಲಾ ನ್ಯಾಯಾಲಯವು ನಿರ್ಣಯಿಸಿದರೆ ರದ್ದುಗೊಳಿಸತಕ್ಕುದು :- (1) ಜಿಲ್ಲಾ ನ್ಯಾಯಾಲಯಕ್ಕೆ ಈ ಅಧ್ಯಾಯದ ಮೇರೆಗೆ ನ್ಯಾಯ ವಿಚಾರಣೆಯ ತರುವಾಯ ಮಾನಸಿಕವಾಗಿ ಅಸ್ವಸ್ಥನಾಗಿರುವನೆಂದು ನಿರ್ಣಯಿಸಿರುವ ಯಾವನೇ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವುದು ನಿಂತುಹೋಗಿದೆ ಎಂದು ನಂಬಲು ಕಾರಣವಿರುವಲ್ಲಿ ಅದು ತನ್ನ ಅಧೀನದ ಯಾವುದೇ ನ್ಯಾಯಾಲಯಕ್ಕೆ ಅಂಥ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವುದು ನಿಂತು ಹೋಗಿದೆಯೇ ಹೇಗೆ ಎಂಬುದನ್ನು ವಿಚಾರಣೆ ಮಾಡಲು ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ವಿಚಾರಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ, ಈ ಅಧ್ಯಾಯದ ಮೇರೆಗೆ ನಡೆಸಿದ ನ್ಯಾಯ ವಿಚಾರಣೆಯಂಥದೇ ರೀತಿಯಲ್ಲಿ ನಡೆಸತಕ್ಕುದು.

(3) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸಿದ ತರುವಾಯ ಒಬ್ಬ ವ್ಯಕ್ತಿಯ ಮಾನಸಿಕ ಅಸ್ವಸ್ಥತೆಯು ನಿಂತುಹೋಗಿದೆ ಎಂದು ಕಂಡುಬಂದರೆ ಜಿಲ್ಲಾ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಕೈಗೊಂಡ ಎಲ್ಲಾ ಕ್ರಮಗಳನ್ನು ಆ ನ್ಯಾಯಾಲಯವು ತಾನು ವಿಧಿಸಲು ಸೂಕ್ತವೆಂದು ಯೋಚಿಸುವಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ರದ್ದುಗೊಳಿಸಲು ಆದೇಶಿಸತಕ್ಕುದು.

76. ಅಪೀಲುಗಳು:- ಈ ಅಧ್ಯಾಯದ ಮೇರೆಗೆ ಜಿಲ್ಲಾ ನ್ಯಾಯಾಲಯವು ಮಾಡಿದ ಪ್ರತಿಯೊಂದು ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲಿಗೆ ಅವಕಾಶ ಇರತಕ್ಕುದು.

77. ವಿನಿಯಮಗಳನ್ನು ರಚಿಸಲು ಜಿಲ್ಲಾ ನ್ಯಾಯಾಲಯದ ಅಧಿಕಾರ:- ಜಿಲ್ಲಾ ನ್ಯಾಯಾಲಯವು ಕಾಲಕಾಲಕ್ಕೆ ಈ ಅಧ್ಯಾಯದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ವಿನಿಯಮಗಳನ್ನು ರಚಿಸಬಹುದು.

## ಅಧ್ಯಾಯ-VII

### ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ತಡೆಹಿಡಿದಿಟ್ಟಿರುವ ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಪೋಷಣೆಯ ಖರ್ಚನ್ನು ಭರಿಸಲು ಹೊಣೆಗಾರಿಕೆ

78. ಕೆಲವು ಸಂದರ್ಭಗಳಲ್ಲಿ ಸರ್ಕಾರವು ಪೋಷಣೆಯ ಖರ್ಚನ್ನು ಭರಿಸತಕ್ಕುದು:- ಯಾವುದೇ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಒಳರೋಗಿ ಎಂದು ತಡೆಹಿಡಿದಿಟ್ಟಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪೋಷಣೆಯ ಖರ್ಚನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅನ್ಯಥಾ ಉಪಬಂಧಿಸಿದ್ದ ಹೊರತು-

(ಎ) ಆ ಆದೇಶವನ್ನು ಮಾಡಿರುವಂಥ ಪ್ರಾಧಿಕಾರವು, ಮಾನಸಿಕವಾಗಿ ಅಸ್ವಸ್ಥನಾಗಿರುವಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ವಹಿಸಲು ಯಾವನೇ ವ್ಯಕ್ತಿಯಿಂದ ವಚನಬಂಧವನ್ನು ತೆಗೆದುಕೊಂಡಿಲ್ಲದಿದ್ದರೆ; ಮತ್ತು

(ಬಿ) ಈ ಅಧ್ಯಾಯದ ಮೇರೆಗೆ ಜಿಲ್ಲಾ ನ್ಯಾಯಾಲಯವು ಅಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ವಹಿಸುವುದಕ್ಕಾಗಿ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲದಿದ್ದರೆ

-ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಗೆ ಸಂಬಂಧಪಟ್ಟಂತೆ ಆದೇಶವನ್ನು ಮಾಡಿದ ಪ್ರಾಧಿಕಾರವು ಇರುವ ರಾಜ್ಯದ ಸರ್ಕಾರವು ವಹಿಸತಕ್ಕುದು.

79. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸಂಪದದಿಂದ ಅಥವಾ ಅವನನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾದ ವ್ಯಕ್ತಿಯು ಪೋಷಣೆಯ ಖರ್ಚನ್ನು ಸಂದಾಯಮಾಡುವುದಕ್ಕಾಗಿ ನ್ಯಾಯಾಲಯಕ್ಕೆ ಅರ್ಜಿ:- (1) ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ತಡೆಹಿಡಿದಿಟ್ಟಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯು ಸಂಪದವನ್ನು ಹೊಂದಿರುವಲ್ಲಿ ಅಥವಾ ಅಂಥ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ಯಾವನೇ ವ್ಯಕ್ತಿಯು ಅಂಥ ವ್ಯಕ್ತಿಯನ್ನು ಪೋಷಿಸಲು ಸಾಧನ ಮೂಲವನ್ನು ಹೊಂದಿರುವಲ್ಲಿ, 78ನೇ ಪ್ರಕರಣದ ಮೇರೆಗೆ ಅಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ಸಂದಾಯಮಾಡಲು ಹೊಣೆಯಾಗಿರುವ ಸರ್ಕಾರವು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ವಹಿಸಲು ಹೊಣೆಯಾಗಿರುವ ಯಾವುದೇ ಸ್ಥಳೀಯ ಪ್ರಾಧಿಕಾರವು, ಯಾವ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸಂಪದವು ಇರುವುದೋ ಅಥವಾ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ಮತ್ತು ಅದಕ್ಕಾಗಿ ಸಾಧನಮೂಲವನ್ನು ಹೊಂದಿರುವ ವ್ಯಕ್ತಿಯು ವಾಸವಾಗಿರುವನೋ ಆ ಜಿಲ್ಲಾ ನ್ಯಾಯಾಲಯಕ್ಕೆ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸಂಪದವನ್ನು ಪೋಷಣೆಯ ಖರ್ಚಿಗೆ ವಿನಿಯೋಗಿಸಲು ಅಧಿಕೃತಗೊಳಿಸುವ ಅಥವಾ ಸಂದರ್ಭಾನುಸಾರ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ಮತ್ತು ಅದಕ್ಕಾಗಿ ಸಾಧನಮೂಲವನ್ನು ಹೊಂದಿರುವ ವ್ಯಕ್ತಿಯನ್ನು ಮಾನಸಿಕವಾಗಿ ಅಸ್ವಸ್ಥನಾಗಿರುವ ಅಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ವಹಿಸಲು ನಿರ್ದೇಶಿಸುವ ಆದೇಶಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಜಿಲ್ಲಾ ನ್ಯಾಯಾಲಯವು ಮಾಡಿದ ಆದೇಶವನ್ನು, ಅಂಥ ನ್ಯಾಯಾಲಯವು, ದಾವೆಯಲ್ಲಿ, ಅದರಲ್ಲಿ ಹೇಳಿದ ಸ್ವತ್ತಿಗೆ ಅಥವಾ ವ್ಯಕ್ತಿಗೆ ಸಂಬಂಧಿಸಿದಂತೆ ಮಾಡಿದ ಡಿಕ್ರಿಯಂತೆಯೇ ಜಾರಿಗೊಳಿಸತಕ್ಕುದು, ಅದು ಅದೇ ಬಲವನ್ನು ಮತ್ತು ಪರಿಣಾಮವನ್ನು ಹೊಂದಿರತಕ್ಕುದು ಮತ್ತು ಅಪೀಲಿಗೆ ಒಳಪಟ್ಟಿರತಕ್ಕದ್ದು.

80. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧರಾಗಿರುವ ವ್ಯಕ್ತಿಗಳು ಅಂಥ ಹೊಣೆಗಾರಿಕೆಯಿಂದ ವಿಮುಕ್ತರಾಗತಕ್ಕುದಲ್ಲ:- ಹಿಂದೆ ಹೇಳಿದ ಉಪಬಂಧಗಳಲ್ಲಿ ಅಡಕವಾಗಿರುವುದು ಯಾವುದೂ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಪೋಷಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವ ವ್ಯಕ್ತಿಯನ್ನು, ಅಂಥ ಮಾನಸಿಕವಾಗಿ ಅಸ್ವಸ್ಥನಾಗಿರುವಂಥ ವ್ಯಕ್ತಿಯನ್ನು ಪೋಷಿಸುವುದರಿಂದ ವಿಮುಕ್ತಿಗೊಳಿಸುವುದೆಂದು ಭಾವಿಸತಕ್ಕುದಲ್ಲ.

## ಅಧ್ಯಾಯ-VIII

## ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳ ಮಾನವೀಯ ಹಕ್ಕುಗಳ ಸಂರಕ್ಷಣೆ

81. ಮಾನಸಿಕವಾಗಿ ಅಸ್ವಸ್ಥರಾಗಿರುವ ವ್ಯಕ್ತಿಗಳನ್ನು ಮಾನವೀಯ ಹಕ್ಕುಗಳನ್ನು ಉಲ್ಲಂಘಿಸದೆ ನಡೆಸಿಕೊಳ್ಳತಕ್ಕುದು:- (1) ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ಚಿಕಿತ್ಸೆಯ ಕಾಲದಲ್ಲಿ (ದೈಹಿಕವಾಗಿಯಾಗಲಿ ಅಥವಾ ಮಾನಸಿಕವಾಗಿಯಾಗಲಿ) ಯಾವುದೇ ಅಪಮಾನ ಅಥವಾ ಕ್ರೌರ್ಯಕ್ಕೆ ಒಳಪಡಿಸತಕ್ಕುದಲ್ಲ.

(2) ಚಿಕಿತ್ಸೆಯನ್ನು ಪಡೆಯುತ್ತಿರುವ ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು, ಸಂಶೋಧನೆಯ ಉದ್ದೇಶಗಳಿಗಾಗಿ-

(i) ಅಂಥ ಸಂಶೋಧನೆಯು ಅಥವಾ ರೋಗನಿಧಾನದ ಅಥವಾ ಚಿಕಿತ್ಸೆಯ ಉದ್ದೇಶಗಳಿಗಾಗಿ ಅವನಿಗೆ ನೇರ ಪ್ರಯೋಜನದ್ದಾಗಿದ್ದ ಹೊರತು, ಅಥವಾ

(ii) ಸ್ವಇಚ್ಛಾ ರೋಗಿಯಾಗಿರುವಂಥ ವ್ಯಕ್ತಿಯು ತನ್ನ ಸಮ್ಮತಿಯನ್ನು ಬರಹದಲ್ಲಿ ಕೊಟ್ಟಿದ್ದ ಹೊರತು ಅಥವಾ ಅಂಥ ವ್ಯಕ್ತಿಯು (ಸ್ವಇಚ್ಛಾ ರೋಗಿಯಾಗಿರಲಿ ಅಥವಾ ಆಗಿಲ್ಲದೆ ಇರಲಿ) ಅಪ್ರಾಪ್ತ ವಯಸ್ಕತೆಯ ಕಾರಣದಿಂದಾಗಿ ಅಥವಾ ಅನ್ಯಥಾ ಸಿಂಧುವಾದ ಸಮ್ಮತಿಯನ್ನು ಕೊಡಲು ಸಕ್ಷಮನಾಗಿಲ್ಲದಿರುವಲ್ಲಿ ಅವನ ಪರವಾಗಿ ಸಮ್ಮತಿಯನ್ನು ಕೊಡಲು ಸಕ್ಷಮನಾದ ಪಾಲಕನು ಅಥವಾ ಇತರ ವ್ಯಕ್ತಿಯು ಅಂಥ ಸಂಶೋಧನೆಗಾಗಿ ಅವನ ಪರವಾಗಿ ಸಮ್ಮತಿಯನ್ನು ಬರಹದಲ್ಲಿ ಕೊಟ್ಟಿದ್ದ ಹೊರತು

- ಬಳಸಿಕೊಳ್ಳತಕ್ಕುದಲ್ಲ.

(3) ಕಿರುಕುಳಕಾರಿ ಅಥವಾ ಮಾನಹಾನಿಕರ ಪತ್ರ ವ್ಯವಹಾರವನ್ನು ಅಥವಾ ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಗಳ ಚಿಕಿತ್ಸೆಗೆ ಬಾಧಕವಾದ ಪತ್ರ ವ್ಯವಹಾರವನ್ನು ಪ್ರತಿಬಂಧಿಸುವ ಉದ್ದೇಶಕ್ಕಾಗಿ 94ನೇ ಪ್ರಕರಣದ ಮೇರೆಗೆ ಈ ಬಗ್ಗೆ ರಚಿಸಲಾಗಿರುವ ಯಾವುವೇ ನಿಯಮಗಳಿಗೊಳಪಟ್ಟು, ಚಿಕಿತ್ಸೆ ಪಡೆಯುತ್ತಿರುವ ಮಾನಸಿಕವಾಗಿ ಅಸ್ವಸ್ಥರಾದ ವ್ಯಕ್ತಿಗಳು ಕಳುಹಿಸಿದ ಅಥವಾ ಅವರಿಗೆ ಬಂದಿರುವ ಯಾವುದೇ ಪತ್ರಗಳನ್ನು ಅಥವಾ ಇತರ ಪತ್ರ ವ್ಯವಹಾರಗಳನ್ನು ತಡೆಯತಕ್ಕುದಲ್ಲ, ತಡೆಹಿಡಿದಿಡತಕ್ಕುದಲ್ಲ ಅಥವಾ ನಾಶಗೊಳಿಸತಕ್ಕುದಲ್ಲ.

# ಅಧ್ಯಾಯ - IX

## ದಂಡನೆಗಳು ಮತ್ತು ಪ್ರಕ್ರಿಯೆ

82. IIIನೇ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಸ್ಥಾಪಿಸುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ದಂಡನೆ:- (1) IIIನೇ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಸ್ಥಾಪಿಸುವ ಅಥವಾ ಅದನ್ನು ನಿರ್ವಹಿಸುವ ಯಾವನೇ ವ್ಯಕ್ತಿಯು, ಅಪರಾಧವು ನಿರ್ಣಯವಾದ ಮೇಲೆ, ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ, ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ,ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) (1)ನೇ ಉಪ-ಪ್ರಕರಣದ ಮೇರೆಗಿನ ಅಪರಾಧ ನಿರ್ಣಯವಾದ ತರುವಾಯ, ಯಾರೇ ಆಗಲಿ IIIನೇ ಅಧ್ಯಾಯದ ಉಪಬಂಧಗಳನ್ನು ಉಲ್ಲಂಘಿಸಿ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ನಿರ್ವಹಿಸುವುದನ್ನು ಮುಂದುವರಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಆ ಉಲ್ಲಂಘನೆಯು ಮುಂದುವರಿದ ಕಾಲದಲ್ಲಿ ಮೊದಲನೇ ದಿವಸದ ತರುವಾಯದ ಪ್ರತಿಯೊಂದು ದಿನಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

83. ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಅನುಚಿತವಾಗಿ ಸೇರಿಸಿರುವುದಕ್ಕಾಗಿ ದಂಡನೆ:- ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಲ್ಲದೆ ಅನ್ಯಥಾ ಮನೋರೋಗ ಆಸ್ಪತ್ರೆಯಲ್ಲಿ ಅಥವಾ ಮನೋರೋಗ ನರ್ಸಿಂಗ್ ಹೋಮಿನಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಸೇರಿಸುವ ಅಥವಾ ತಡೆಹಿಡಿದಿಡುವ ಅಥವಾ ಇಟ್ಟುಕೊಳ್ಳುವ ಯಾವನೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಗೆ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

84. 60ನೇ ಮತ್ತು 69ನೇ ಪ್ರಕರಣಗಳ ಉಲ್ಲಂಘನೆಗಾಗಿ ದಂಡನೆ:- 60ನೇ ಪ್ರಕರಣದ ಅಥವಾ 69ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಸ್ವತ್ತನ್ನು ನಿರ್ವಹಿಸಲು ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವನೇ ವ್ಯವಸ್ಥಾಪಕನು, ಅಪರಾಧವು ನಿರ್ಣಯವಾದ ಮೇಲೆ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು ಮತ್ತು ಸದರಿ ಉಪಬಂಧಗಳನ್ನು ಅವನು ಪಾಲಿಸುವವರೆಗೆ ಸಿವಿಲ್ ಬಂದೀಖಾನೆಯಲ್ಲಿ ಅವನನ್ನು ತಡೆಹಿಡಿದಿಡಬಹುದು.

85. ಇತರ ಅಪರಾಧಗಳ ದಂಡನೆಯ ಬಗ್ಗೆ ಸಾಮಾನ್ಯ ಉಪಬಂಧ:- ಯಾವ ಬಂಧದ ಉಲ್ಲಂಘನೆಗಾಗಿ ಈ ಅಧಿನಿಯಮದಲ್ಲಿ ಯಾವುದೇ ದಂಡನೆಯನ್ನು ಸ್ಪಷ್ಟವಾಗಿ ಉಪಬಂಧಿಸಿಲ್ಲವೋ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮದ ಆ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಅಪರಾಧವು ನಿರ್ಣಯವಾದ ಮೇಲೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

86. ಕಂಪನಿಗಳಿಂದ ಅಪರಾಧಗಳು:- (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ತದನುಸಾರ ಅವನು ಅಥವಾ ಅದು ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತವಾಗತಕ್ಕುದು:

ಪರಂತು, ಈ ಉಪ-ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಯಾವನೇ ಅಂಥ ವ್ಯಕ್ತಿಯನ್ನು ಅವನು ಆ ಅಪರಾಧವು ತನಗೆ ಗೊತ್ತಿಲ್ಲದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ಅವನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದೆನೆಂದು ಅವನು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಯಾಗಿಸತಕ್ಕುದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆ ಎಂದು ರುಜುವಾತು ಪಡಿಸಿರುವಲ್ಲಿ ಅಥವಾ ಅವನ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಆಗಿದೆ ಎಂದು ಹೇಳಬಹುದಾಗಿರುವಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕುದು ಮತ್ತು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕುದು ಮತ್ತು ದಂಡಿತನಾಗತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) "ಕಂಪನಿ" ಎಂದರೆ ನಿಗಮಿತ ನಿಕಾಯ ಮತ್ತು ಅದು ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಪಟ್ಟಂತೆ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

87. ಪ್ರಾಸಿಕ್ಯೂಷನ್ನುಗಳಿಗೆ ಮಂಜೂರಾತಿ:- ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ನ್ಯಾಯಾಲಯವು, ಲೈಸೆನ್ಸ್ ಕೊಡುವ ಪ್ರಾಧಿಕಾರದ ಪೂರ್ವ ಮಂಜೂರಾತಿಯೊಂದಿಗೆ ಅಲ್ಲದೆ, 82ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕುದಲ್ಲ.

# ಅಧ್ಯಾಯ - X

ಸಂಕೀರ್ಣ

88. ಬಂಧಪತ್ರಗಳ ಬಗ್ಗೆ ಉಪಬಂಧ:- ದಂಡ ಪ್ರಕ್ರಿಯಾ ಸಂಹಿತೆ, 1973(1974ರ 2)ರ XXXIIIನೇ ಅಧ್ಯಾಯದ ಉಪಬಂಧಗಳು ಸಾಧ್ಯವಾಗಬಹುದಾದ ಮಟ್ಟಿಗೆ ಈ ಅಧಿನಿಯಮದ ಮೇರೆಗೆ ತೆಗೆದುಕೊಂಡಿರುವ ಬಂಧಪತ್ರಗಳಿಗೆ ಅನ್ವಯವಾಗತಕ್ಕುದು.

89. ವೈದ್ಯಕೀಯ ಅಧಿಕಾರಿಯಿಂದ ವರದಿ:- ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಪ್ರಭಾರದಲ್ಲಿರುವ ವೈದ್ಯಕೀಯ ಅಧಿಕಾರಿಯು, ಆದಷ್ಟು ಬೇಗನೆ, ಅಲ್ಲಿ ತಡೆಹಿಡಿದಿಡಲಾದ ಮಾನಸಿಕವಾಗಿ ಅಸ್ವಸ್ಥನಾಗಿರುವ ಯಾವನೇ ವ್ಯಕ್ತಿಯನ್ನು ಬಿಡುಗಡೆ ಮಾಡಿದ ತರುವಾಯ, ಅವನ ಮಾನಸಿಕ ಮತ್ತು ದೈಹಿಕ ಸ್ಥಿತಿಗೆ ಸಂಬಂಧಿಸಿದಂತೆ ಯಾವ ಪ್ರಾಧಿಕಾರದ ಆದೇಶಗಳ ಮೇರೆಗೆ ಅಂಥ ವ್ಯಕ್ತಿಯನ್ನು ಹಾಗೆ ತಡೆಹಿಡಿದಿಡಲಾಗಿದ್ದಿತೋ ಆ ಪ್ರಾಧಿಕಾರಕ್ಕೆ ವರದಿಯನ್ನು ಮಾಡತಕ್ಕುದು.

90. ಸರ್ಕಾರವು ಸಂದಾಯ ಮಾಡಬೇಕಾದ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪಿಂಚಣಿ ಮುಂತಾದವು:- (1) ಯಾವುದೇ ಸರ್ಕಾರವು, ವೇತನಕ್ಕೆ, ಪಿಂಚಣಿಗೆ, ಉಪದಾನಕ್ಕೆ ಅಥವಾ ಯಾವುದೇ ಭತ್ಯೆಗೆ ಸಂಬಂಧಿಸಿದಂತೆ ಯಾವುದೇ ಮೊತ್ತವನ್ನು ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕಾಗಿರುವಲ್ಲಿ ಮತ್ತು ಆ ಮೊತ್ತವನ್ನು ಯಾರಿಗೆ ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿಯಾಗಿದ್ದಾನೆಂದು ಈ ಅಧಿನಿಯಮದ ಮೇರೆಗೆ ಮ್ಯಾಜಿಸ್ಟ್ರೇಟನು ಪ್ರಮಾಣೀಕರಿಸಿರುವಲ್ಲಿ ಯಾವ ಪ್ರಾಧಿಕಾರದ ಮೇರೆಗೆ ಅಂಥ ಹಣವನ್ನು ಸಂದಾಯ ಮಾಡಬೇಕಾಗಿದೆಯೋ ಆ ಅಧಿಕಾರಿಯು, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಪ್ರಭಾರವನ್ನು ಹೊಂದಿರುವ ವ್ಯಕ್ತಿಗೆ, ಅಂಥ ವ್ಯಕ್ತಿಯ ಪೋಷಣೆಯ ಖರ್ಚನ್ನು ಗಮನಿಸಿ ಅವನು ಸೂಕ್ತವೆಂದು ಯೋಚಿಸುವಂತೆ ಸದರಿ ಮೊತ್ತದಷ್ಟನ್ನು ಸಂದಾಯ ಮಾಡಬಹುದು ಮತ್ತು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಅವಲಂಬಿಸಿರುವ ಅವನ ಕುಟುಂಬದ ಅಂಥ ಸದಸ್ಯರಿಗೆ, ಪೋಷಣೆಗಾಗಿ, ಅಂಥ ಸದಸ್ಯರ ಪೋಷಣೆಯ ಖರ್ಚನ್ನು ಗಮನಿಸಿ ತಾನು ಸೂಕ್ತವೆಂದು ಯೋಚಿಸುವಂಥ ಹೆಚ್ಚುವರಿ ಯಾವುದಾದರೂ ಇದ್ದರೆ ಅದನ್ನು ಅಥವಾ ಅದರ ಅಂಥ ಭಾಗವನ್ನು ಸಂದಾಯ ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿದಂತೆ ಸಂದಾಯಗಳನ್ನು ಮಾಡಿದ ತರುವಾಯ, ಆ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿಧಿಗಳಿಂದ ಯಾವುದೇ ಇನ್ನೂ ಹೆಚ್ಚುವರಿ ಮೊಬಲಗು ಲಭ್ಯವಿರುವಲ್ಲಿ, ಸರ್ಕಾರವು ಅದನ್ನು ಈ ಕೆಳಕಂಡಂತೆ ವ್ಯವಹರಿಸುವುದಕ್ಕಾಗಿ ಇಟ್ಟುಕೊಂಡಿರತಕ್ಕುದು, ಎಂದರೆ:-

(ಎ) ಮಾನಸಿಕವಾಗಿ ಅಸ್ವಸ್ಥನಾಗಿರುವ ಆ ವ್ಯಕ್ತಿಯು ಮಾನಸಿಕವಾಗಿ ಅಸ್ವಸ್ಥನಾಗಿರುವುದು ನಿಂತುಹೋಗಿದೆ ಎಂದು ಯಾವ ಜಿಲ್ಲಾನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಅಂಥ ವ್ಯಕ್ತಿಯು ವಾಸಿಸುತ್ತಿರುವನೋ ಅಥವಾ ಅವನನ್ನು ಇಡಲಾಗಿದೆಯೋ ಅಥವಾ ತಡೆಹಿಡಿದಿಡಲಾಗಿದೆಯೋ ಆ ಜಿಲ್ಲಾ ನ್ಯಾಯಾಲಯವು ಪ್ರಮಾಣೀಕರಿಸಿರುವಲ್ಲಿ , ಆ ಇಡೀ ಹೆಚ್ಚುವರಿ ಮೊಬಲಗನ್ನು ಆ ವ್ಯಕ್ತಿಗೆ ವಾಪಸು ಸಂದಾಯ ಮಾಡತಕ್ಕುದು;

(ಬಿ) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಸಂದಾಯವನ್ನು ಪಡೆಯುವುದಕ್ಕೆ ಮುಂಚೆ ಮರಣ ಹೊಂದಿದಲ್ಲಿ ಆ ಇಡೀ ಹೆಚ್ಚುವರಿ ಮೊಬಲಗನ್ನು ಸ್ವೀಕರಿಸಲು ಕಾನೂನು ಸಮ್ಮತವಾಗಿ ಹಕ್ಕುಳ್ಳವನಾಗಿರುವ ಅವನ ವಾರಸುದಾರರಿಗೆ ಸಂದಾಯ ಮಾಡತಕ್ಕುದು.

(ಸಿ) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಮಾನಸಿಕ ಅಸ್ವಸ್ಥತೆಯ ಕಾಲದಲ್ಲಿ ಸಂಪದಕ್ಕೆ ಉತ್ತರಾಧಿಕಾರಿಯಾಗಲು ಕಾನೂನು ಸಮ್ಮತವಾಗಿ ಹಕ್ಕುಳ್ಳ ಯಾವನೇ ವ್ಯಕ್ತಿಯನ್ನು ಬಿಟ್ಟಿರದೆ ಮರಣಹೊಂದಿದಲ್ಲಿ ಆ ಇಡೀ ಹೆಚ್ಚುವರಿ ಮೊಬಲಗನ್ನು ಆ ಜಿಲ್ಲಾ ನ್ಯಾಯಾಲಯದ ಪೂರ್ವಾನುಮತಿ ಪಡೆದು ಆ ಜಿಲ್ಲಾ ನ್ಯಾಯಾಲಯವು ಅನುಮೋದಿಸಬಹುದಾದಂಥ ಧರ್ಮಾರ್ಥ ಉದ್ದೇಶಕ್ಕಾಗಿ ಉಪಯೋಗಿಸತಕ್ಕುದು.

(3) ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಈ ಪ್ರಕರಣಕ್ಕನುಸಾರವಾಗಿ ಸಂದಾಯ ಮಾಡಿರುವ ಯಾವುದೇ ಮೊಬಲಗುಗಳಿಗೆ ಸಂಬಂಧಿಸಿದಂತೆ ಎಲ್ಲಾ ಹೊಣೆಗಾರಿಕೆಯಿಂದ ವಿಮುಕ್ತವಾಗತಕ್ಕುದು.

91. ಕೆಲವು ಸಂದರ್ಭಗಳಲ್ಲಿ ರಾಜ್ಯದ ವೆಚ್ಚದಲ್ಲಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಗೆ ಕಾನೂನು ನೆರವು:- (1) ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಜಿಲ್ಲಾ ನ್ಯಾಯಾಲಯದ ಅಥವಾ ಮಾಜಿಸ್ಟ್ರೇಟನ ಮುಂದೆ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಲೀಗಲ್ ಪ್ರಾಕ್ಟೀಷನರ್ ಪ್ರತಿನಿಧಿಸದಿರುವಲ್ಲಿ ಮತ್ತು ಆ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ, ಅಂಥ ವ್ಯಕ್ತಿಗೆ ಲೀಗಲ್ ಪ್ರಾಕ್ಟೀಷನರ್‌ನನ್ನು ಇಟ್ಟುಕೊಳ್ಳಲು ಸಾಕಷ್ಟು ಸಾಧನ ಮೂಲವಿಲ್ಲವೆಂದು ಕಂಡುಬರುವಲ್ಲಿ ಆ ಜಿಲ್ಲಾ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು, ರಾಜ್ಯದ ವೆಚ್ಚದಲ್ಲಿ ಅವನನ್ನು ಪ್ರತಿನಿಧಿಸಲು ಒಬ್ಬ ಲೀಗಲ್ ಪ್ರಾಕ್ಟೀಷನರ್‌ನನ್ನು ಗೊತ್ತುಪಡಿಸತಕ್ಕುದು.

(2) ಒಬ್ಬ ಲೀಗಲ್ ಪ್ರಾಕ್ಟೀಷನರ್‌ನನ್ನು ಇಟ್ಟುಕೊಳ್ಳಲು ಸಾಕಷ್ಟು ಸಾಧನ ಮೂಲವನ್ನು ಹೊಂದಿರುವ, ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯನ್ನು ಜಿಲ್ಲಾ ನ್ಯಾಯಾಲಯದ ಅಥವಾ ಮ್ಯಾಜಿಸ್ಟ್ರೇಟನ ಮುಂದೆ ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಲೀಗಲ್ ಪ್ರಾಕ್ಟೀಷನರ್ ಪ್ರತಿನಿಧಿಸದಿರುವಲ್ಲಿ ಮತ್ತು ಆ ಜಿಲ್ಲಾ ನ್ಯಾಯಾಲಯಕ್ಕೆ ಅಥವಾ ಮ್ಯಾಜಿಸ್ಟ್ರೇಟನಿಗೆ ಆ ಪ್ರಕರಣದ ಎಲ್ಲ ಪರಿಸ್ಥಿತಿಗಳನ್ನು ಗಮನಿಸಿ, ಅಂಥ ವ್ಯಕ್ತಿಯನ್ನು ಲೀಗಲ್ ಪ್ರಾಕ್ಟೀಷನರ್‌ನು ಪ್ರತಿನಿಧಿಸಬೇಕೆಂದು ಕಂಡುಬಂದಲ್ಲಿ ಆ ಜಿಲ್ಲಾ ನ್ಯಾಯಾಲಯವು ಅಥವಾ

ಮ್ಯಾಜಿಸ್ಟ್ರೇಟನು, ಅವನನ್ನು ಪ್ರತಿನಿಧಿಸಲು ಲೀಗಲ್ ಪ್ರಾಕ್ಟೀಷನರ್‌ನನ್ನು ಗೊತ್ತುಪಡಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ವೆಚ್ಚಗಳನ್ನು ವಹಿಸಲು ಮತ್ತು ಅಂಥ ವ್ಯಕ್ತಿಯ ಸ್ವತ್ತಿನಿಂದ ಅದನ್ನು ವಸೂಲು ಮಾಡಿಕೊಳ್ಳಲು ರಾಜ್ಯಕ್ಕೆ ನಿರ್ದೇಶಿಸಬಹುದು.

(3) ಉಚ್ಚ ನ್ಯಾಯಾಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ -

(ಎ) (1) ಮತ್ತು (2)ನೇ ಉಪ-ಪ್ರಕರಣಗಳ ಉದ್ದೇಶಕ್ಕಾಗಿ ಲೀಗಲ್ ಪ್ರಾಕ್ಟೀಷನರ್‌ಗಳನ್ನು ಆಯ್ಕೆ ಮಾಡುವ ವಿಧಾನ;

(ಬಿ) ಅಂಥ ಲೀಗಲ್ ಪ್ರಾಕ್ಟೀಷನರ್‌ಗಳಿಗೆ ಕೊಡಬೇಕಾದ ಸೌಲಭ್ಯಗಳು;

(ಸಿ) ಸರ್ಕಾರವು ಅಂಥ ಲೀಗಲ್ ಪ್ರಾಕ್ಟೀಷನರ್‌ಗಳಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು (1)ನೇ ಮತ್ತು (2)ನೇ ಉಪ ಪ್ರಕರಣಗಳ ಉದ್ದೇಶವನ್ನು ಸಾಮಾನ್ಯವಾಗಿ ಕಾರ್ಯಗತಗೊಳಿಸುವುದು

-ಇವುಗಳಿಗಾಗಿ ಉಪಬಂಧಿಸಿ ನಿಯಮಗಳನ್ನು ರಚಿಸಬಹುದು,

*ವಿವರಣೆ:-* ಈ ಪ್ರಕರಣದಲ್ಲಿ "ಲೀಗಲ್ ಪ್ರಾಕ್ಟೀಷನರ್" ಎಂಬುದು ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 2ನೇ ಪ್ರಕರಣದ (i)ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕುದು.

92. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ:- (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುವೇ ನಿಯಮಗಳ, ವಿನಿಯಮಗಳ, ಅಥವಾ ಆದೇಶಗಳ ಅನುಸರಣೆಯಲ್ಲಿ, ಸದ್ಭಾವನೆಯಿಂದ ಮಾಡಿದಂಥ ಅಥವಾ ಮಾಡಲು ಉದ್ದೇಶಿಸಿರುವಂಥ ಯಾವುದೇ ಕಾರ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕುದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮಗಳ, ವಿನಿಯಮಗಳ ಅಥವಾ ಆದೇಶಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದಂಥ ಅಥವಾ ಮಾಡಲು ಉದ್ದೇಶಿಸಿರುವಂಥ ಯಾವುದೇ ಕಾರ್ಯದಿಂದ ಉಂಟಾಗಿರುವ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕುದಲ್ಲ.

93. ಕೆಲವು ಕಾನೂನುಗಳು ಮುಂತಾದವುಗಳ ಉಲ್ಲೇಖವನ್ನು ಅರ್ಥೈಸುವುದು:- (1) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿ ಇಲ್ಲದೇ ಇರುವಂಥ ಕಾನೂನಿಗೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಆ ಪ್ರದೇಶಕ್ಕೆ ಸಂಬಂಧಪಟ್ಟಂತೆ ಆ ಪ್ರದೇಶದಲ್ಲಿ ಸಂವಾದಿ ಕಾನೂನು ಯಾವುದಾದರೂ ಜಾರಿಯಲ್ಲಿದ್ದರೆ ಅದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

(2) ಯಾವನೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಅದೇ ಪದನಾಮವನ್ನು ಹೊಂದಿರುವ ಯಾವನೇ ಅಧಿಕಾರಿಯು ಅಥವಾ ಪ್ರಾಧಿಕಾರವು ಇಲ್ಲದೆ ಯಾವುದೇ ಇರುವಂಥ ಪ್ರದೇಶಕ್ಕೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

94. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, 3ನೇ ಪ್ರಕರಣದ ಮೇರೆಗೆ, ಮಾನಸಿಕ ಆರೋಗ್ಯ ಪ್ರಾಧಿಕಾರವೆಂದು ನೇಮಕ ಮಾಡಬಹುದಾದ ವ್ಯಕ್ತಿಗಳ ಅರ್ಹತೆಗಳು ಮತ್ತು ಆ ಪ್ರಕರಣದ ಮೇರೆಗೆ ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಅವರನ್ನು ನೇಮಕ ಮಾಡಬಹುದೋ ಆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಮತ್ತು ಅಂಥ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಎಲ್ಲಾ ಇತರ ವಿಷಯಗಳಿಗಾಗಿ ಉಪಬಂಧಿಸಿ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು:

ಪರಂತು, ಮೊದಲ ನಿಯಮಗಳನ್ನು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ರಚಿಸತಕ್ಕುದು.

(3) ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, (2)ನೇ ಉಪ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಮಾನಸಿಕ ಆರೋಗ್ಯ ಪ್ರಾಧಿಕಾರವೆಂದು ನೇಮಕ ಮಾಡಬಹುದಾದ ವ್ಯಕ್ತಿಗಳ ಅರ್ಹತೆಗಳು ಮತ್ತು 4ನೇ ಪ್ರಕರಣದ ಮೇರೆಗೆ ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಅವರನ್ನು ನೇಮಕ ಮಾಡಬಹುದೋ ಆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಮತ್ತು ಅಂಥ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಎಲ್ಲಾ ಇತರ ವಿಷಯಗಳು;

(ಬಿ) ಯಾರಿಗಾಗಿ 5ನೇ ಪ್ರಕರಣದ (1)ನೇ ಉಪ ಪ್ರಕರಣದ (ಡಿ) ಖಂಡದ ಮೇರೆಗೆ ಪ್ರತ್ಯೇಕ ಮನೋರೋಗ ಆಸ್ಪತ್ರೆಗಳನ್ನು ಅಥವಾ ಮನೋರೋಗ ನರ್ಸಿಂಗ್ ಹೋಮುಗಳನ್ನು ಸ್ಥಾಪಿಸಬಹುದೋ ಮತ್ತು ನಿರ್ವಹಿಸಬಹುದೋ ಆ ವ್ಯಕ್ತಿಗಳ ವರ್ಗ ಅಥವಾ ಪ್ರವರ್ಗ;

(ಸಿ) (i) ಯಾವ ನಮೂನೆಯಲ್ಲಿ ಲೈಸೆನ್ಸಿನ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಬಹುದೋ ಆ ನಮೂನೆ ಮತ್ತು 7ನೇ ಪ್ರಕರಣದ ಅಥವಾ ಸಂದರ್ಭಾನುಸಾರ 9ನೇ ಪ್ರಕರಣದ ಮೇರೆಗೆ ಅದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು;

(ii) ಯಾವ ನಮೂನೆಯಲ್ಲಿ, 8ನೇ ಪ್ರಕರಣದ ಮೇರೆಗೆ ಮನೋರೋಗ ಆಸ್ಪತ್ರೆಯ ಅಥವಾ ಮನೋರೋಗ ನರ್ಸಿಂಗ್ ಹೋಮಿನ ಸ್ಥಾಪನೆಗಾಗಿ ಅಥವಾ ನಿರ್ವಹಣೆಗಾಗಿ ಲೈಸೆನ್ಸನ್ನು ಮಂಜೂರು ಮಾಡಬಹುದೋ ಆ ನಮೂನೆ;

(iii) ಯಾವ ನಮೂನೆಯಲ್ಲಿ , 20ನೇ ಪ್ರಕರಣದ ಮೇರೆಗೆ ಪ್ರವೇಶನ ಆದೇಶಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಆ ನಮೂನೆ;

(ಡಿ) ಸಂದರ್ಭಾನುಸಾರ 8ನೇ ಪ್ರಕರಣದ ಅಥವಾ 11ನೇ ಪ್ರಕರಣದ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡಲು ನಿರಾಕರಿಸುವ ಅಥವಾ ರದ್ದುಪಡಿಸುವ ಆದೇಶವನ್ನು ತಿಳಿಸತಕ್ಕ ರೀತಿ;

(ಇ) ಯಾವ ರೀತಿಯಲ್ಲಿ 9ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಲೈಸೆನ್ಸು ಕೊಡುವ ಪ್ರಾಧಿಕಾರಕ್ಕೆ ವರದಿಯನ್ನು ಮಾಡತಕ್ಕುದೋ ಆ ರೀತಿ;

(ಎಫ್) (i) ಮನೋರೋಗ ಚಿಕಿತ್ಸಕ-ರೋಗಿ ಇವರ ಪ್ರಮಾಣ;

(ii) ಇತರ ವೈದ್ಯಕೀಯ ಅಥವಾ ಸಹಾಯಕ ವೈದ್ಯಕೀಯ ಸಿಬ್ಬಂದಿ ವರ್ಗ;

(iii) ಜಾಗದ ಅಗತ್ಯತೆ;

(iv) ಚಿಕಿತ್ಸಾ ಸೌಲಭ್ಯಗಳು; ಮತ್ತು

(v) ಸಾಧನ ಸಾಮಗ್ರಿ,

-ಇವುಗಳನ್ನು ಒಳಗೊಂಡು 9ನೇ ಪ್ರಕರಣದ (5)ನೇ ಉಪ ಪ್ರಕರಣದ ಪರಂತುಕದಲ್ಲಿ ಉಲ್ಲೇಖಿಸಿದ ಕನಿಷ್ಠ ಸೌಲಭ್ಯಗಳು;

(ಜಿ) ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೊಳಪಟ್ಟು 10ನೇ ಪ್ರಕರಣದ ಮೇರೆಗೆ ಮನೋರೋಗ ಆಸ್ಪತ್ರೆಯನ್ನು ಅಥವಾ ಮನೋರೋಗ ನರ್ಸಿಂಗ್ ಹೋಮನ್ನು ಇಟ್ಟುಕೊಂಡು ಬರತಕ್ಕುದೋ ಆ ರೀತಿ ಮತ್ತು ಷರತ್ತುಗಳು;

(ಎಚ್) ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಲೈಸೆನ್ಸಿನ ಮಂಜೂರಾತಿಯನ್ನು ಅಥವಾ ನವೀಕರಣವನ್ನು ನಿರಾಕರಿಸುವ ಅಥವಾ ಲೈಸೆನ್ಸನ್ನು ರದ್ದುಪಡಿಸುವ ಯಾವುದೇ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬಹುದೋ ಆ ನಮೂನೆ ಮತ್ತು ರೀತಿ ಮತ್ತು ಅವಧಿ ಹಾಗೂ 12ನೇ ಪ್ರಕರಣದ ಮೇರೆಗೆ ಅದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು;

(ಐ) ಯಾವ ರೀತಿಯಲ್ಲಿ 13ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕುದೋ ಆ ರೀತಿ;

(ಜೆ) ಹೊರ ರೋಗಿ ಎಂದು ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯ ಚಿಕಿತ್ಸೆಗಾಗಿ 14ನೇ ಪ್ರಕರಣದ ಮೇರೆಗೆ ಒದಗಿಸಬೇಕಾದ ಸೌಲಭ್ಯಗಳು;

(ಕೆ) ಯಾವ ರೀತಿಯಲ್ಲಿ ಪ್ರವೇಶನ ಆದೇಶಕ್ಕಾಗಿನ ಅರ್ಜಿಯನ್ನು 20ನೇ ಪ್ರಕರಣದ (6)ನೇ ಉಪ ಪ್ರಕರಣದ ಮೇರೆಗೆ ರುಜು ಮಾಡತಕ್ಕುದೋ ಮತ್ತು ಸತ್ಯಾಪಿಸತಕ್ಕುದೋ ಆ ರೀತಿ;

(ಎಲ್) ಸಂದರ್ಶಕರೆಂದು ನೇಮಕ ಮಾಡಬಹುದಾದ ವ್ಯಕ್ತಿಗಳ ಅರ್ಹತೆಗಳು ಮತ್ತು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಅವರನ್ನು ನೇಮಕ ಮಾಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅವರ ಪ್ರಕಾರ್ಯಗಳು;

(ಎಂ) 81ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಕಿರುಕುಳಕಾರಿ ಅಥವಾ ಮಾನಹಾನಿಕರ ಪತ್ರ ವ್ಯವಹಾರ ಮತ್ತು ಇತರ ವಿಷಯಗಳನ್ನು ಪ್ರತಿಬಂಧಿಸುವುದು;

(ಎನ್) ನಿಯಮಿಸಬೇಕೆಂದು ಅಥವಾ ನಿಯಮಿಸಬಹುದೆಂದು ಅಗತ್ಯಪಡಿಸಿರುವಂಥ ಯಾವುದೇ ಇತರ ವಿಷಯ.

95. ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ರಚಿಸಿದ ನಿಯಮಗಳನ್ನು ವಿಧಾನ ಮಂಡಲದ ಮುಂದೆ ಇಡತಕ್ಕುದು:- (1) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕುದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ, ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕುದು.

96. ಇತರ ಕಾನೂನುಗಳ ಮೇಲೆ ಅಧಿನಿಯಮದ ಪರಿಣಾಮ:- ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾಗಿ ಏನೇ ಅಡಕವಾಗಿದ್ದಾಗ್ಯೂ ಪರಿಣಾಮವನ್ನು ಹೊಂದಿರತಕ್ಕುದು ಮತ್ತು ಹಾಗೆ ಅಸಂಗತವಾಗಿರುವಷ್ಟರ ಮಟ್ಟಿಗೆ, ಆ ಇತರ ಕಾನೂನು ಯಾವುದೇ ಪರಿಣಾಮವನ್ನು ಹೊಂದಿಲ್ಲವೆಂಬುದಾಗಿ ಭಾವಿಸತಕ್ಕುದು.

97. ತೊಂದರೆಯನ್ನು ನಿವಾರಿಸಲು ಅಧಿಕಾರ:- ಈ ಅಧಿನಿಯಮದ ಉಪಬಂಧಗಳನ್ನು ಯಾವುದೇ ರಾಜ್ಯದಲ್ಲಿ ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ಆ ರಾಜ್ಯ ಸರ್ಕಾರವು ಆದೇಶದ ಮೂಲಕ ಅಂಥ ಉಪಬಂಧಗಳಿಗೆ ಅಸಂಗತವಾಗದ ಹಾಗೆ ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅದಕ್ಕೆ ಅವಶ್ಯವೆಂಬುದಾಗಿ ಅಥವಾ ವಿಹಿತವೆಂಬುದಾಗಿ ಕಂಡುಬರುವಂಥ ಯಾವುದೇ ಕಾರ್ಯವನ್ನು ಮಾಡಬಹುದು:

ಪರಂತು, ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟಂತೆ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಆ ರಾಜ್ಯದಲ್ಲಿ ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಮಾಡತಕ್ಕುದಲ್ಲ.

98. ನಿರಸನ ಮತ್ತು ಉಳಿಸುವಿಕೆ:- (1) ಭಾರತ ಮನೋವಿಕಲತೆ ಅಧಿನಿಯಮ, 1912(1912ರ 4)ಮತ್ತು ಮನೋವಿಕಲತೆ ಅಧಿನಿಯಮ, 1977(1977ರ 25) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಯಾವುದೇ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಅಂಥ ಕಾರ್ಯವು ಅಥವಾ ಕ್ರಮವು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರಮಟ್ಟಿಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕುದು ಮತ್ತು ಅದು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದ ಅಥವಾ ಕೈಗೊಂಡ ಕ್ರಮದ ಮೂಲಕ ರದ್ದುಗೊಳಿಸುವವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕುದು.

* * *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು. ಕಾ.ಸೂ. 2969 / ಎಲ್‌ಎ - ಪಿ2